ಸಂಪುಟ: 06 ಸಂಚಿಕೆ: 214 ಪುಟಗಳು: 08 ಸೋಮವಾರ 19 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5



ಯಾ ದೇವಿ ಸರ್ವ ಭೂತೇಷು
ಸಿದ್ಧಿಧಾತ್ರಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ದುರ್ಗಾ ಪೆಂಡಾಲ್ ದುರಂತ

## 19 ಬಲಿ

## 25 ಮಂದಿ ಗಾಯಗೊಂಡಿರುವ ಘಟನೆ ಸಂಭವಿಸಿದೆ

### ಮುನ್ನೆಚ್ಚರಿಕೆಯೇ ಅಗತ್ಯ

ಕೋಲ್ಕತ್ತಾದ ದುರ್ಗಾ ಪೂಜಾ ಮಂಟಪದಲ್ಲಿ ಸಂಭವಿಸಿದ ದುರಂತವು ಜನಸಂದಣೆಯನ್ನು ನಿರ್ವಹಿಸುವಲ್ಲಿ ಮುನ್ನೆಚ್ಚರಿಕೆ ಮತ್ತು ಸೂಕ್ತ ಯೋಜನೆ ಎಷ್ಟು ಮುಖ್ಯ ಎಂಬುದನ್ನು ಮತ್ತೊಮ್ಮೆ ನೆನಪಿಸಿದೆ. ಜನಸಂದಣಿ ಅಪಾಯಕಾರಿ ಮಟ್ಟ ತಲುಪಿದ ನಂತರ ಅದನ್ನು ನಿಯಂತ್ರಿಸಲು ಪ್ರಯತ್ನಿಸುವುದಕ್ಕಿಂತ, ಆ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳುವುದೇ ನಿಜವಾದ ಜನಸಂದಣಿ ನಿರ್ವಹಣೆ.

ಸೂಕ್ತ ಯೋಜನೆ, ಜನರ ಸಂಖ್ಯೆ ಮೇಲಿನ ನಿಯಂತ್ರಣ, ಸ್ಪಷ್ಟ ಸಂವಹನ, ಸುರಕ್ಷಿತ ಮಾರ್ಗಗಳು ಮತ್ತು ವಿವಿಧ ಇಲಾಖೆಗಳ ನಡುವಿನ ಸಮನ್ವಯ ಇದ್ದರೆ, ದೊಡ್ಡ ಧಾರ್ಮಿಕ ಉತ್ಸವಗಳು ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಹೆಚ್ಚು ಸುರಕ್ಷಿತವಾಗಿ ನಡೆಸಬಹುದು ಎನ್ನುತ್ತಾರೆ ತಜ್ಞರು.





ಭಾರೀ ಮಳೆಯ ನಡುವೆ ಈ ನೂಕುನುಗ್ಗಲು ಸಂಭವಿಸಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು 'ಕೊಲೆಗೆ ಸಮನಲ್ಲದ ನರಹತ್ಯೆ' ಆರೋಪದಡಿ ಪ್ರಕರಣ ದಾಖಲಿಸಿದ್ದರು. ಏಳು ಮಂದಿಯನ್ನು ಬ್ಯಾಂಕ್‌ಶಾಲ್‌ನಲ್ಲಿರುವ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ಈ ವ್ಯಕ್ತಿಗಳ ನಿರ್ಲಕ್ಷ್ಯದ ಕ್ರಮಗಳಿಂದಾಗಿ 19 ಜೀವಗಳು ಬಲಿಯಾಗಿವೆ. ಇದರಿಂದ ಅನೇಕ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ ಎಂದು ಸರ್ಕಾರಿ ಅಭಿಯೋಜಕರು ನ್ಯಾಯಾಲಯಕ್ಕೆ ವಿವರಿಸಿ, ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ನೀಡುವಂತೆ ಕೋರಿದ್ದರು. ಆರೋಪಿಗಳ ಪರವಾದ ಮಂಡಿಸಿದ ವಕೀಲರು, ತಮ್ಮ ಕಕ್ಷಿದಾರರು ವಾಸ್ತವವಾಗಿ ರಕ್ಷಣಾ ಕಾರ್ಯಗಳಲ್ಲಿ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರೂ ಅವರನ್ನು ಬಂಧಿಸಲಾಗಿದೆ. ತಮ್ಮ ಕಕ್ಷಿದಾರರಿಗೆ ಕಾರ್ಯಕ್ರಮದ ಆಯೋಜಕರೊಂದಿಗೆ ಯಾವುದೇ ಸಂಬಂಧವಿಲ್ಲ. ಕೇವಲ ಪೂಜೆಯನ್ನು ವೀಕ್ಷಿಸಲು ಅಲ್ಲಿಗೆ ಹೋಗಿದ್ದವರನ್ನು ಬಂಧಿಸಿದ್ದಾರೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಎರಡೂ ಕಡೆಯ ವಾದಗಳನ್ನು ಆಲಿಸಿದ ನ್ಯಾಯಾಧೀಶರು ಆರೋಪಿಗಳನ್ನು 10 ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದ್ದಾರೆ. ಬೇರೆ ಯಾರಾದರೂ ಭಾಗಿಯಾಗಿದ್ದಾರೆಯೇ ಎಂದು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ.



ಆಸ್ಪತ್ರೆಗೆ ಭೇಟಿ ನೀಡಿ ಗಾಯಗೊಂಡವರ ಆರೋಗ್ಯ ವಿಚಾರಿಸಿದ ಅಮಿತ್ ಶಾ

### ಮೋದಿ ಸಂತಾಪ



ಇನ್ನು ಕೋಲ್ಕತ್ತಾ ಕಾಕ್ತುಳಿತ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ. ಅಲ್ಲದೇ ಗಾಯಾಗಳುಗಳು ಶೀಘ್ರವಾಗಿ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಸರಣಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಕೋಲ್ಕತ್ತಾದಲ್ಲಿ ಸಂಭವಿಸಿದ ನೂಕುನುಗ್ಗಲಿನ ಘಟನೆ ದುರಂತಮಯವಾಗಿದೆ. ದುಃಖತಪ್ತ ಕುಟುಂಬಗಳಿಗೆ ನಾನು ಸಂತಾಪ ಸೂಚಿಸುತ್ತೇನೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ. ಪಶ್ಚಿಮ ಬಂಗಾಳ ಸರ್ಕಾರವು ಸಂತ್ರಸ್ತ ಕುಟುಂಬಗಳಿಗೆ ಸಾಧ್ಯವಿರುವ ನೆರವನ್ನೂ ಒದಗಿಸುತ್ತಿದೆ ಎಂದು ಹೇಳಿದ್ದಾರೆ. ಸದ್ಯ ಘಟನಗೆ ಸಂಬಂಧಿಸಿದಂತೆ ದುರ್ಗಾ ಪೂಜೆ ಆಯೋಜಕರು ಸೇರಿದಂತೆ ಒಟ್ಟು ಏಳು ಜನರನ್ನು ಕೋಲ್ಕತ್ತಾ ಪೊಲೀಸರು ಬಂಧಿಸಿದ್ದಾರೆ. ಕೋಲ್ಕತ್ತಾ ಕಾಲ್ತುಳಿತ ಪ್ರಕರಣವು, ಭಾರತದಲ್ಲಿ ಧಾರ್ಮಿಕ ಸ್ಥಳದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಗಳ ಕರಾಳ ಇತಿಹಾಸ ಮತ್ತೊಮ್ಮೆ ನೆನಪಿಸಿದೆ.

### ಕಾಲ್ತುಳಿತ ಸಂಭವಿಸಿದ್ದು ಹೇಗೆ?

ಉತ್ತರ ಕೋಲ್ಕತ್ತಾದ ಚೋರ್ಬಗಾನ್ ದುರ್ಗಾ ಪೂಜೆ ಪೆಂಡಾಲ್‌ನಲ್ಲಿ, ಜನಸಂದಣಿ ಏಕಾಏಕಿ ಹೆಚ್ಚಾದಾಗ ಉಂಟಾದ ನೂಕುನುಗ್ಗಲಿನಲ್ಲಿ ಕನಿಷ್ಠ 19 ಮಂದಿ ಮೃತಪಟ್ಟರು. ನೂಕುನುಗ್ಗಲು ನಿಯಂತ್ರಣಕ್ಕೆ ಪೊಲೀಸರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಯಿತು. ಈ ದುರ್ಘಟನೆಯಲ್ಲಿ 25ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಘಟನೆ ಸಂಭವಿಸಿದಾಗ ಮಳೆಯಾಗುತ್ತಿತ್ತು. ಇದರಿಂದ ಜನರು ಆದಷ್ಟು ಬೇಗ ದುರ್ಗಾ ಪೂಜಾ ಪೆಂಡಾಲ್ ಒಳಗೆ ಹೋಗಲು ಪ್ರಯತ್ನಿಸುತ್ತಿದ್ದರು. ಈ ವೇಳೆ ನಿರ್ಗಮನ ದ್ವಾರದಲ್ಲಿ ಜನಸಂದಣಿ ಹೆಚ್ಚಾಗಿ ನೂಕುನುಗ್ಗಲು ಉಂಟಾಯಿತು. ಜನರು ಬೇಗ ಪೆಂಡಾಲ್‌ನಿಂದ ಹೊರಬರಲು ಮುಂದಾದಾಗ ಕಾಲ್ತುಳಿತ ಸಂಭವಿಸಿತು. ನಿರ್ಗಮನ ದ್ವಾರ ಅತ್ಯಂತ ಚಿಕ್ಕದ್ದಾಗಿತ್ತಲ್ಲದೇ, ಸೂಕ್ತ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ದುರಂತಕ್ಕೆ ಕಾರಣವಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಘಟನೆ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೇ ಸ್ಥಳಕ್ಕೆ ಧಾವಿಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ರಕ್ಷಣಾ ಕಾರ್ಯಾಚರಣೆಗಳ ನೇತೃತ್ವವಹಿಸಿದರು.

• **ಉದಯವಾಹಿನಿ, ಕೊಲ್ಕತ್ತಾ**

ಉತ್ತರ ಕೋಲ್ಕತ್ತಾದ ಚೋರ್ಬಗಾನ್ ದುರ್ಗಾ ಪೂಜಾ ಪೆಂಡಾಲ್‌ನಲ್ಲಿ ಕಾಲ್ತುಳಿತ ಉಂಟಾಗಿ ಕನಿಷ್ಠ 19 ಮಂದಿ ಮೃತಪಟ್ಟು, 25 ಮಂದಿ ಗಾಯಗೊಂಡಿರುವ ಘಟನೆ ಸಂಭವಿಸಿದೆ. ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯತೆ ಗಳಿಸಿರುವ ಚೋರ್ಬಗಾನ್ ದುರ್ಗಾ ಪೂಜೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.

ಮಳೆ ಬಂದ ಕಾರಣ ಪೂಜಾ ಪೆಂಡಾಲ್‌ನ ಹೊರಗೆ ಕಾಯುತ್ತಿದ್ದ ಜನಸಮೂಹವು ಒಮ್ಮೆಲೇ ಒಳಗೆ ನುಗ್ಗಿತು. ಈ ವೇಳೆ ಕಾಲ್ತುಳಿತ ಉಂಟಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉತ್ತರ ಕೋಲ್ಕತ್ತಾದ ಚೋರ್ಬಗಾನ್‌ನಲ್ಲಿ ದುರ್ಗಾ ಪೂಜೆ ನಡೆಯುತ್ತಿದ್ದಾಗ ಆಯೋಜಕರು ಮಾಡಿದ ಘೋಷಣೆಯೊಂದರಿಂದಾಗಿ ನೂಕುನುಗ್ಗಲು ಉಂಟಾಗಿ, ಈ ದುರಂತ ಸಂಭವಿಸಿದೆ ಎಂದು ಪಶ್ಚಿಮ ಬಂಗಾಳ ಸಿಎಂ ಸುವೇಂದು ಅಧಿಕಾರಿ ತಿಳಿಸಿದ್ದಾರೆ. ಸದ್ಯದ ಮಾಹಿತಿ ಪ್ರಕಾರ, 19 ಮಂದಿ ಮೃತಪಟ್ಟಿದ್ದಾರೆ ಮತ್ತು 25 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಿಎಂ ತಿಳಿಸಿದ್ದಾರೆ. ಸಂತ್ರಸ್ತರನ್ನು ದಾಖಲಿಸಿದ್ದ ಕೋಲ್ಕತ್ತಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಸಿಎಂ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಇದೇ ವೇಳೆ ಮೃತರ ಕುಟುಂಬಕ್ಕೆ ತಲಾ 25 ಲಕ್ಷ ರೂಪಾಯಿ ಪರಿಹಾರ ಹಾಗೂ ಒಬ್ಬರಿಗೆ 'ಗ್ರೂಪ್ ಡಿ' ಶ್ರೇಣಿಯ ಸರ್ಕಾರಿ ಉದ್ಯೋಗವನ್ನು ನೀಡುವುದಾಗಿ ಘೋಷಿಸಿದ್ದಾರೆ. ಚೋರ್ಬಗಾನ್ ದುರ್ಗಾ ಪೂಜಾ ಆಯೋಜಕರು, ಖಾಸಗಿ ಭದ್ರತಾ ಸಿಬ್ಬಂದಿ ಮತ್ತು ಕರ್ತವ್ಯದಲ್ಲಿದ್ದ ಸಿಬ್ಬಂದಿಯನ್ನು ವಿಚಾರಣೆಗಾಗಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಸಿಎಂ ಹೇಳಿದ್ದಾರೆ.

ಮೃತರ ಕುಟುಂಬ ಸದಸ್ಯರ ಪ್ರಕಾರ, ಪೆಂಡಾಲ್ ಪ್ರದೇಶದಲ್ಲಿ ಖಾಸಗಿ ಭದ್ರತಾ ಸಿಬ್ಬಂದಿ ಊದಿದ ಸೀಟಿಯಿಂದಾಗಿ, ಪೆಂಡಾಲ್‌ಗೆ ಭೇಟಿ ನೀಡಲು ಕಾಯುತ್ತಿದ್ದ ಜನರಲ್ಲಿ ನೂಕುನುಗ್ಗಲು ಉಂಟಾಯಿತು ಎಂದು ಸಿಎಂ ಪ್ರತಿಕ್ರಿಯೆ ನೀಡಿದ್ದಾರೆ. ಇದು ಅತ್ಯಂತ ದುಃಖಕರ ಘಟನೆ. ನಾವು ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡಲು ಆದ್ಯತೆ ನೀಡುತ್ತಿದ್ದೇವೆ ಎಂದು ಸಿಎಂ ತಿಳಿಸಿದ್ದಾರೆ.

ಈ ದುರಂತ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಸಂತಾಪ ಸೂಚಿಸುವ ಜೊತೆಗೆ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಕೋಲ್ಕತ್ತಾದಲ್ಲಿ ನಡೆದ ಕಾಲ್ತುಳಿತ ಅತ್ಯಂತ ದುಃಖಕರವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರ ನೋವಿನಲ್ಲಿ ನಾನೂ ಭಾಗಿಯಾಗಿದ್ದೇನೆ. ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ. ಪಶ್ಚಿಮ ಬಂಗಾಳ ಸರ್ಕಾರವು ಸಂತ್ರಸ್ತ ಕುಟುಂಬಗಳಿಗೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸುತ್ತಿದೆ, ಎಂದು ಮೋದಿ 'ಎಕ್ಸ್' ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ಈ ಘಟನೆಯ ತನಿಖೆ ನಡೆಸಲಿದೆ. ಈ ತಂಡದಲ್ಲಿ ಎಸ್‌ಟಿಎಫ್, ಸಿಐಡಿ ಮತ್ತು ಇತರ ಇಲಾಖೆಗಳ ಸದಸ್ಯರು ಇರಲಿದ್ದಾರೆ.

ಘಟನೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆಎಂದು ಸಿಎಂ ಅಧಿಕಾರಿ ಹೇಳಿದ್ದಾರೆ. ಈ ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ, ಚೋರ್ ಬಗಾನ್ ದುರ್ಗಾ ಪೂಜೆಯ ಆಯೋಜಕರು ಸೇರಿದಂತೆ 12 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದುರಂತದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂತಾಪ ಸೂಚಿಸಿ, ಭಾನುವಾರ ಪಶ್ಚಿಮ ಬಂಗಾಳದಲ್ಲಿ ನಿಗದಿಯಾಗಿದ್ದ ತಮ್ಮ ಎಲ್ಲಾ ಕಾರ್ಯಕ್ರಮಗಳನ್ನು ಮುಂದೂಡಿದ್ದಾರೆ.

ದುರ್ಗಾ ಪೂಜೆ ಪೆಂಡಾಲ್ ಕಾಲ್ತುಳಿತ

**1** ಕೋಲ್ಕತ್ತಾದ ಚೋರ್ಬಗಾನ್ ದುರ್ಗಾ ಪೂಜೆ ಪೆಂಡಾಲ್‌ನಲ್ಲಿ ಕಾಲ್ತುಳಿತ.

**2** ಕೋಲ್ಕತ್ತಾ ಆಸ್ಪತ್ರೆಯಲ್ಲಿ ಗಾಯಗೊಂಡವರನ್ನು ಭೇಟಿ ಮಾಡಿದ ಅಮಿತ್ ಶಾ.

**3** ದುರ್ಗಾ ಪೂಜೆ ಪೆಂಡಾಲ್ ಕಾಲ್ತುಳಿತ ದುರ್ಘಟನೆಯಲ್ಲಿ 19 ಜನರ ದುರ್ಮರಣ.

### 2005ರ ಮಾಂಧರ್ ದೇವಿ ಯಾತ್ರೆ

ಮಹಾರಾಷ್ಟ್ರದ ವೈ ಸಮೀಪದ ಮಾಂಧರ್‌ದೇವಿಯಲ್ಲಿ 2005ರ ಜನವರಿಯಲ್ಲಿ ನಡೆದ ಕಾಳುಬಾಯಿ ಯಾತ್ರೆಯ ಸಂದರ್ಭದಲ್ಲಿ ಸಂಭವಿಸಿದ ದುರಂತದಲ್ಲಿ 293 ಮಂದಿ ಮೃತಪಟ್ಟಿದ್ದರು. ನಿರೀಕ್ಷೆಗೂ ಮೀರಿದ ಜನಸಂಖ್ಯೆ ಒಂದೇ ಕಡೆ ಸೇರಿದ್ದು, ದೇವಾಲಯದ ಸುತ್ತಲಿನ ಸ್ಥಳಾವಕಾಶದ ಕೊರತೆ, ಕಿರಿದಾದ ದಾರಿ, ಧ್ವನಿವರ್ಧಕ ವ್ಯವಸ್ಥೆಗಳ ಅಭಾವ, ಕಳಪೆ ಮೂಲಸೌಕರ್ಯ ಮತ್ತು ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ದುರಂತಕ್ಕೆ ಕಾರಣವಾಗಿದ್ದವು.

## ಮಾಜಿ ಪ್ರಧಾನಿ ದೇವೇಗೌಡ್ರಿಗೆ ವೀರಮಾರ್ತಾಂಡ ಚಾವುಂಡರಾಯ ಪ್ರಶಸ್ತಿ ಪ್ರದಾನ



• **ಉದಯವಾಹಿನಿ, ಬೆಂಗಳೂರು**

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಚಾವುಂಡರಾಯ ಪ್ರಶಸ್ತಿ ಪ್ರದಾನ ಮಾಡಲಾಯ್ತು. ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದ ದಿಗಂಬರ ಜೈನ ಮಠದಲ್ಲಿ ಅಂಬಿಕಾ ವಿದ್ಯಾಲಯವನ್ನು ದೇವೇಗೌಡ ಉದ್ಘಾಟಿಸಿದರು. ಈ ವೇಳೆ ಶ್ರವಣಬೆಳಗೊಳದ ದಿಗಂಬರ ಜೈನ ಮಠದಿಂದ ದೇವೇಗೌಡ್ರಿಗೆ ಜೈನಮಠದ ಸ್ವಸ್ತಿ ಶ್ರೀ ಚಾರೂಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ವರ್ಯ ಶ್ರೀಗಳು ಚಾವುಂಡರಾಯ ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕಾರ್ಯಕ್ರಮದಲ್ಲಿ ಜೈನಮಠ ಶ್ರವಣಬೆಳಗೊಳದ ಚಾರೂಕೀರ್ತಿ ಭಟ್ಟಾರಕ ಮಹಾಸ್ವಾಮಿ ಹಾಗೂ ಜೈನಮಠ ಕನಕಗಿರಿಯ ಭುವನ ಕೀರ್ತಿ ಭಟ್ಟಾರಕ ಶ್ರೀಗಳು, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಸ್ವರೂಪ್ ಪ್ರಕಾಶ್ ಉಪಸ್ಥಿತರಿದ್ದರು.

## ಪಡಿತರ ಚೀಟಿ ಫಲಾನುಭವಿಗಳ ಇ-ಕೈವೈಸಿ ಗಡುವು ನವೆಂಬರ್ 10ಕ್ಕೆ ವಿಸ್ತರಣೆ

• **ಉದಯವಾಹಿನಿ, ಬೆಂಗಳೂರು**

ಪಡಿತರ ಚೀಟಿ ಫಲಾನುಭವಿಗಳು ಇ-ಕೈವೈಸಿ ದೃಢೀಕರಿಸಲು ಅ. 20ಕ್ಕೆ ಇದ್ದ ಗಡುವನ್ನು ನ. 10ರವರೆಗೆ ವಿಸ್ತರಿಸಲಾಗಿದೆ.

ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಒಂದು ವರ್ಷಕ್ಕೂ ಮೇಲ್ಪಟ್ಟು ಇ-ಕೈವೈಸಿ ಮಾಡಿಸಿದ 1,15,87,298 ಫಲಾನುಭವಿಗಳು ಮತ್ತೊಮ್ಮೆ ಇ-ಕೈವೈಸಿ ಮಾಡಬೇಕೆಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಕೊನೆಯ ದಿನಾಂಕವನ್ನು ನವೆಂಬರ್ 10ರ ವರೆಗೆ ವಿಸ್ತರಿಸಲಾಗಿದೆ. ರಾಜ್ಯದಲ್ಲಿ ಒಂದು ವರ್ಷದ ಹಿಂದೆ ಇ-ಕೈವೈಸಿ ಮಾಡಿಸಿದ ಫಲಾನುಭವಿಗಳ ಜೊತೆಗೆ, ಇದುವರೆಗೆ ಒಂದು ಬಾರಿಯೂ ಇ-ಕೈವೈಸಿ ಮಾಡಿಸದ 3,82,362 ಹಾಗೂ ಐದು ವರ್ಷ ಮೇಲ್ಪಟ್ಟು ಇ-ಕೈವೈಸಿ ಮಾಡಿಸಿದ 54,27,396 ಫಲಾನುಭವಿಗಳು ಇನ್ನೂ ಇ-ಕೈವೈಸಿ ದೃಢೀಕರಿಸಬೇಕಿದೆ.

ಫಲಾನುಭವಿಗಳು ಅನ್ನ ಸೇವೆ ಮೊಬೈಲ್ ಅಪ್ಲಿಕೇಶನ್ ಮೂಲಕ ಖುದ್ದಾಗಿ ಅಥವಾ ನ್ಯಾಯಬೆಲೆ ಅಂಗಡಿಗಳಲ್ಲಿ ತಂತ್ರಾಂಶದ ಮೂಲಕ ನವೆಂಬರ್ 10 ರೊಳಗೆ ಕಡ್ಡಾಯವಾಗಿ ಇ-ಕೈವೈಸಿ ಮಾಡಿಸಬೇಕು.

## ನೈಸ್ ರಸ್ತೆಯಲ್ಲಿ ಹೊತ್ತಿ ಉರಿದ ರಾಸಾಯನಿಕ ತುಂಬಿದ್ದ ಟ್ಯಾಂಕರ್ 8 ಕಿಮೀ ಟ್ರಾಫಿಕ್ ಜಾಮ್

• **ಉದಯವಾಹಿನಿ, ಬೆಂಗಳೂರು**

ಕನಕಪುರ ರಸ್ತೆಯ ನೈಸ್ ಟೋಲ್ ಬಳಿ ರಾಸಾಯನಿಕ ತುಂಬಿದ್ದ ಟ್ಯಾಂಕರ್ ಒಂದು ಹೊತ್ತಿ ಉರಿದಿದೆ. ಪರಿಣಾಮ ಅಂಜನಾಪುರ ಭಾಗದಿಂದ ಸಿಟಿ ಕಡೆ ಬರುವ ರಸ್ತೆಯಲ್ಲಿ ಸುಮಾರು 5 ಕಿಮೀ ಹಾಗೂ ಸಿಟಿಯಿಂದ ಹೊರ ಹೋಗುವ ರಸ್ತೆಯಲ್ಲಿ ಸುಮಾರು 3 ಕಿಮೀ ಟ್ರಾಫಿಕ್ ಜಾಮ್ ಉಂಟಾಗಿದೆ. ಟ್ಯಾಂಕರ್ ಚೆನ್ನೈನಿಂದ ಮುಂಬೈ ಕಡೆಗೆ ತೆರಳುತ್ತಿತ್ತು. ಈ ವೇಳೆ ಟೋಲ್ ಬಳಿ ಟೈರ್ ಬ್ಲಾಸ್ಟ್ ಆಗಿ ಕಾರಿಗೆ ಟ್ಯಾಂಕರ್ ಡಿಕ್ಕಿ ಹೊಡೆದು ಪಲ್ಟಿಯಾಗಿ ಹೊತ್ತಿ ಉರಿದಿದೆ. ಬೆಂಕಿಯ ಜ್ವಾಲೆ ಬಾನೆತ್ತರಕ್ಕೆ ಎದ್ದಿದೆ. ಕಳೆದ ಒಂದೂವರೆಯಿಂದ ಬೆಂಕಿ ಹೊತ್ತಿ ಉರಿಯುತ್ತಿದೆ. ಘಟನೆಯಲ್ಲಿ ಯಾವುದೇ ಜೀವ ಹಾನಿ ಸಂಭವಿಸಿಲ್ಲ. ಟ್ಯಾಂಕರ್ ಒಳಗೆ ನಾಲ್ಕಾರು ಟ್ಯಾಂಕ್ ಇವೆ. ಇನ್ನೂ ಎರಡು ಟ್ಯಾಂಕ್‌ನಲ್ಲಿ ಕೆಮಿಕಲ್ ಇದೆ. ಅದು ಬ್ಲಾಸ್ಟ್ ಆಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಅದು ಬ್ಲಾಸ್ಟ್ ಆಗುವ ತನಕ ಬೆಂಕಿ ಹತೋಟಿಗೆ ಬರುವುದಿಲ್ಲ.

## ಎದುರು ಬದುರು ಕುಳಿತ ವಿಜಯೇಂದ್ರ-ಯತ್ನಾಳ್

• **ಉದಯವಾಹಿನಿ, ಬೆಂಗಳೂರು**

ರಾಜಕಾರಣದಲ್ಲಿ ಯಾರೂ ಶಾಶ್ವತ ಶತ್ರುಗಳಲ್ಲ, ಯಾರೂ ಶಾಶ್ವತ ಮಿತ್ರರಲ್ಲ ಎಂಬುವುದು ಅಕ್ಷರಶಃ ಸತ್ಯ. ಇದಕ್ಕೆ ಪೂರಕವೆಂಬಂತೆ ರಾಜಕೀಯ ಹಾಗೂ ವೈಯಕ್ತಿವಾಗಿಯೂ ಬದ್ಧ ವೈರಿಗಳಾಗಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಬಿವೈ ವಿಜಯೇಂದ್ರ ಪರಸ್ಪರ ಭೇಟಿಯಾಗಿದ್ದಾರೆ. ಧಾರವಾಡ ಜಿಲ್ಲೆ ಛಬ್ಬಿಯಲ್ಲಿ ನಡೆದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಉಭಯ ನಾಯಕರು ಭೇಟಿಯಾಗಿದ್ದಾರೆ.

ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್,

ಬಿಎಸ್ ಯಡಿಯೂರಪ್ಪ ವಿರುದ್ಧ ಆರೋಪಗಳ ಮೇಲೆ ಆರೋಪ ಮಾಡಿದ್ದರಿಂದಲೇ ಬಿಜೆಪಿಯಿಂದ ಉಚ್ಚಾಟನೆಗೊಂಡಿದ್ದಾರೆ.

ಉಚ್ಚಾಟನೆಗೂ ಮುನ್ನ ಹಲವು ಶೋಕಾಸ್ ನೀಡಿದರೂ ಕೇರ್ ಮಾಡದ ಯತ್ನಾಳ್ ಬಹಿರಂಗವಾಗಿಯೇ ಬಿಎಸ್‌ವೈ ಕುಟುಂಬದ ವಿರುದ್ಧ ಬಹಿರಂಗವಾಗಿ ವಾಚಾಮಗೋಚರವಾಗಿ ಬೈಯುತ್ತಲೇ ಬಂದಿದ್ದಾರೆ. ಯತ್ನಾಳ್ -ವಿಜಯೇಂದ್ರ ಭೇಟಿ ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದೆ.

## ಸಕಾಲ ಸೇವೆ ವಿಳಂಬಕ್ಕೆ ಭಾರೀ ದಂಡ, ತಕ್ಷಣದಿಂದಲೇ ಜಾರಿ

• **ಉದಯವಾಹಿನಿ, ಬೆಂಗಳೂರು**

ಸಕಾಲ ಸೇವೆಗಳ (ತಿದ್ದುಪಡಿ) ಅಧಿನಿಯಮ, 2026 ಕಾಯ್ದೆಯಡಿ ಸೇವೆಗಳನ್ನು ವಿಳಂಬಗೊಳಿಸುವ ಅಧಿಕಾರಿಗಳಿಗೆ ವಿಧಿಸುವ ಪರಿಹಾರ ವೆಚ್ಚ ಹಾಗೂ ದುರುದ್ದೇಶಪೂರಿತ ದೂರು ಸಲ್ಲಿಸುವ ನಾಗರಿಕರಿಗೆ ವಿಧಿಸುವ ದಂಡದ ಮೊತ್ತವನ್ನು ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ನೂತನ ಪರಿಷ್ಕೃತ ದರಗಳು ತಕ್ಷಣದಿಂದಲೇ ಜಾರಿಗೆ ಬಂದಿವೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ರೂ.1,500 ವರೆಗೆ ದಂಡ ವಿಧಿಸಲಾಗುತ್ತದೆ. ಸಾರ್ವಜನಿಕರಿಗೆ ನಿಗದಿತ ಸಮಯದೊಳಗೆ ಸೇವೆಗಳನ್ನು ಒದಗಿಸಲು ಅಥವಾ ಮೇಲನವಿಗಳನ್ನು ವಿಲೇವಾರಿ ಮಾಡಲು ವಿಫಲರಾಗುವ ಸಕ್ಷಮ ಪ್ರಾಧಿಕಾರಿ, ಹೆಸರಿಸಲಾದ ಅಧಿಕಾರಿ ಅಥವಾ ಮೇಲನವಿ ಪ್ರಾಧಿಕಾರದ ಅಧಿಕಾರಿಗಳಿಂದ ಈ ಪರಿಹಾರ ವೆಚ್ಚವನ್ನು




ವಸೂಲಿ ಮಾಡಲಾಗುತ್ತದೆ.

ಮೊದಲ 1 ರಿಂದ 5 ದಿನಗಳ ವಿಳಂಬಕ್ಕೆ ದಿನಕ್ಕೆ 20 ರೂ. ರಂತೆ ಗರಿಷ್ಠ 100 ರೂ., 6 ರಿಂದ 10 ದಿನಗಳ ವಿಳಂಬಕ್ಕೆ ದಿನಕ್ಕೆ 40 ರೂ. ರಂತೆ ಗರಿಷ್ಠ 300 ರೂ., 11 ರಿಂದ 15 ದಿನಗಳ ವಿಳಂಬಕ್ಕೆ ದಿನಕ್ಕೆ 60 ರೂ.ರಂತೆ ಗರಿಷ್ಠ 600 ರೂ, 16 ರಿಂದ 20 ದಿನಗಳ ವಿಳಂಬಕ್ಕೆ ದಿನಕ್ಕೆ 80 ರೂ. ರಂತೆ ಗರಿಷ್ಠ 1,000 ರೂ. ಹಾಗೂ 21 ರಿಂದ 25 ದಿನಗಳ ವಿಳಂಬಕ್ಕೆ ದಿನಕ್ಕೆ 100 ರೂ.ರಂತೆ ಒಟ್ಟಾರೆಯಾಗಿ ಗರಿಷ್ಠ 1,500 ರೂ.ಪರಿಹಾರ ವೆಚ್ಚವನ್ನು ನಿಗದಿಪಡಿಸಲಾಗಿದೆ. ಅಲ್ಲದೆ, ಸೇವೆಗಳನ್ನು ಸರಿಯಾಗಿ ನೀಡದೆ ಲೋಪದೋಷಗಳಿದ್ದರೆ ಅಥವಾ ಅರ್ಜಿಗಳನ್ನು ಸೂಕ್ತ ಕಾರಣವಿಲ್ಲದೆ ತಪ್ಪಾಗಿ ತಿರಸ್ಕರಿಸಿದ್ದರೆ, ನಾಗರಿಕರಿಗೆ ಗರಿಷ್ಠ 1,500 ರೂ.ಪರಿಹಾರವನ್ನು ಸಂಬಂಧಪಟ್ಟ ಅಧಿಕಾರಿಯಿಂದ ವಸೂಲಿ ಮಾಡಿ ನೀಡಲಾಗುತ್ತದೆ. **ಹುಸಿ ಹಾಗೂ ಕಿರುಕುಳಕಾರಿ ದೂರು ನೀಡುವ ನಾಗರಿಕರಿಗೆ ದಂಡ:** ಸರ್ಕಾರಿ ನೌಕರರಿಗೆ ಕೇಡು ಉಂಟುಮಾಡುವ, ಕಿರುಕುಳ ನೀಡುವ, ಬೆದರಿಸುವ ಅಥವಾ ದುರುದ್ದೇಶದಿಂದ ಸುಳ್ಳು ಕುಂದು-ಕೊರತೆ ದೂರುಗಳನ್ನು ಸಲ್ಲಿಸುವ ನಾಗರಿಕರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ತನಿಖೆಯಲ್ಲಿ ದೂರು ದುರುದ್ದೇಶಪೂರಿತ ಎಂದು ಸಾಬೀತಾದರೆ, ಅಂತಹ ನಾಗರಿಕರಿಗೆ ಪ್ರತಿ ಅರ್ಜಿಗೆ 1,500 ರೂ. ದಂಡ ವಿಧಿಸಲಾಗುತ್ತದೆ. ಇದೇ ತಪ್ಪನ್ನು ಪುನರಾವರ್ತಿಸಿದಲ್ಲಿ ಮತ್ತೆ ಪ್ರತಿ ಅರ್ಜಿಗೆ 1,500 ರೂ. ದಂಡ ವಿಧಿಸಲಾಗುತ್ತದೆ.

ನಾಗರಿಕರಿಗೆ ತಮ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ನಂತರವೇ ಈ ಆದೇಶ ಹೊರಡಿಸಲಾಗುತ್ತದೆ ಹಾಗೂ ಈ ದಂಡದ ಮೊತ್ತವನ್ನು ಭೂ ಕಂದಾಯ ಹಿಂಬಾಕಿಯಂತೆ ವಸೂಲಿ ಮಾಡಲಾಗುತ್ತದೆ. ಸಾರ್ವಜನಿಕ ಸೇವೆಗಳ ವಿಲೇವಾರಿಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ಹೆಚ್ಚಿಸುವುದು ಈ ತಿದ್ದುಪಡಿಯ ಮುಖ್ಯ ಉದ್ದೇಶವಾಗಿದೆ ಎಂದರು.

## ಆರ್‌ಟಿಐ ಅರ್ಜಿದಾರರ ಹಕ್ಕುಗಳ ರಕ್ಷಣೆಗೆ ರಾಜ್ಯ ಸರ್ಕಾರದಿಂದ ಮಹತ್ವದ ಕ್ರಮ

• **ಉದಯವಾಹಿನಿ, ಬೆಂಗಳೂರು**

ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವುದು, ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸುವುದು ಮತ್ತು ಅರ್ಜಿದಾರರ ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮಹತ್ವದ ಎರಡು ಕ್ರಮಗಳನ್ನು ಜಾರಿಗೆ ತಂದಿದೆ. ಅಂಚೆ ಮೂಲಕ ಅಥವಾ ನೇರವಾಗಿ ಸಲ್ಲಿಸುವ ಭೌತಿಕ ಆರ್‌ಟಿಐ ಅರ್ಜಿಗಳನ್ನು ಎರಡು ದಿನಗಳ ಒಳಗಾಗಿ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಈ ಸೇವೆಯನ್ನು ಕರ್ನಾಟಕ ಸಕಾಲ ಸೇವೆಗಳ ಕಾಯಿದೆ, 2011ರ ವ್ಯಾಪ್ತಿಗೆ ತರಲಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅನುಮೋದನೆಯೊಂದಿಗೆ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಸಾರ್ವಜನಿಕ ಪ್ರಾಧಿಕಾರಗಳಿಗೆ ಅಂಚೆ ಮೂಲಕ ಅಥವಾ ನೇರವಾಗಿ ಸಲ್ಲಿಸುವ ಭೌತಿಕ ಆರ್‌ಟಿಐ ಅರ್ಜಿಗಳನ್ನು ಸ್ವೀಕರಿಸಿದ ಎರಡು ದಿನಗಳ ಒಳಗಾಗಿ ಮಾಹಿತಿ ಹಕ್ಕು ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿಸಬೇಕು. ಈ ಪ್ರಕ್ರಿಯೆಯನ್ನು ಸಕಾಲ ಕಾಯಿದೆಯಡಿ ಖಾತರಿಯ ಸೇವೆಯೆಂದು ಘೋಷಿಸಿರುವುದರಿಂದ, ಅರ್ಜಿಗಳ ನೋಂದಣಿಯಲ್ಲಿ ವಿಳಂಬವಾಗುವುದನ್ನು ತಡೆಯಲು ಸರ್ಕಾರ ಮುಂದಾಗಿದೆ. ಆನ್‌ಲೈನ್‌ನಲ್ಲಿ ನೋಂದಣಿಯಾದ ಬಳಿಕ ಅರ್ಜಿದಾರರಿಗೆ ನೋಂದಣಿ ಸಂಖ್ಯೆ ದೊರೆಯಲಿದ್ದು, ಅದರ ಮೂಲಕ ತಮ ಅರ್ಜಿಯ ಸ್ಥಿತಿಗತಿಯನ್ನು ಪರಿಶೀಲಿಸಬಹುದು.



ಇದರಿಂದ ಅರ್ಜಿಗಳು ಕಳೆದುಹೋಗುವುದು, ನಿರ್ಲಕ್ಷ್ಯಕ್ಕೆ ಒಳಗಾಗುವುದು ಅಥವಾ ಅವುಗಳ ಪ್ರಗತಿಯ ಕುರಿತು ಮಾಹಿತಿ ಸಿಗದಿರುವ ಸಮಸ್ಯೆಗಳನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ. ನಿಗದಿತ ಎರಡು ದಿನಗಳೊಳಗೆ ಅರ್ಜಿ ನೋಂದಾಯಿಸದಿದ್ದರೆ, ಅರ್ಜಿದಾರರು ಸಕಾಲ ಕಾಯಿದೆಯಡಿ ಪರಿಹಾರ ಕೋರುವ ಅವಕಾಶ ಹೊಂದಿರುತ್ತಾರೆ. ವಿಳಂಬಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡುವ ವ್ಯವಸ್ಥೆಯನ್ನೂ ರೂಪಿಸಲಾಗಿದೆ. ವಿಶೇಷವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯನಿರ್ವಹಿಸುವ

### ಗ್ರಾಮ ಒನ್ ಕೇಂದ್ರಗಳಲ್ಲೂ ಆರ್‌ಟಿಐ ಸೇವೆ

ಸರ್ಕಾರದ ಎರಡನೇ ಕ್ರಮದಡಿ, ರಾಜ್ಯಾದ್ಯಂತ ಇರುವ ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಒನ್ ಸೇವಾ ಕೇಂದ್ರಗಳ ಮೂಲಕ ಆನ್‌ಲೈನ್‌ನಲ್ಲಿ ಆರ್‌ಟಿಐ ಅರ್ಜಿ ಸಲ್ಲಿಸುವ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಕಂಪ್ಯೂಟರ್ ಇಲ್ಲದವರು, ಇಂಟರ್ನೆಟ್ ಬಳಕೆಯಲ್ಲಿ ಪರಿತಿ ಇಲ್ಲದವರು ಅಥವಾ ಆನ್‌ಲೈನ್ ಅರ್ಜಿ ಸಲ್ಲಿಸಲು ತೊಂದರೆ ಅನುಭವಿಸುವವರು ತಮ ಸಮೀಪದ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಸಿಬ್ಬಂದಿಯ ನೆರವಿನಿಂದ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ನಿಗದಿತ ಆರ್‌ಟಿಐ ಶುಲ್ಕದ ಜೊತೆಗೆ ಅಲ್ಪ ಪ್ರಮಾಣದ ಸೇವಾ ಶುಲ್ಕ ಪಾವತಿಸಬೇಕಾಗುತ್ತದೆ. ಅರ್ಜಿ ಸಲ್ಲಿಸಿದ ಬಳಿಕ ಅಲ್ಲಿಯೇ ಆನ್‌ಲೈನ್ ಸ್ವೀಕೃತಿ ಪತ್ರವನ್ನು ನೀಡಲಾಗುತ್ತದೆ.

ಗ್ರಾಮ ಒನ್ ಕೇಂದ್ರಗಳಿಗೆ ಈ ಸೇವೆಯನ್ನು ವಿಸ್ತರಿಸಿರುವುದು ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗಲಿದೆ. ಸರ್ಕಾರಿ ಕಚೇರಿಗಳಿಗೆ ಪದೇಪದೇ ಅಲೆದಾಡದೆ, ತಮ ಹತ್ತಿರದ ಸೇವಾ ಕೇಂದ್ರದ ಮೂಲಕವೇ ಮಾಹಿತಿ ಹಕ್ಕು ಅರ್ಜಿ ಸಲ್ಲಿಸಲು ಇದರಿಂದ ಅವಕಾಶ ದೊರೆಯಲಿದೆ. ಮಾಹಿತಿ ಹಕ್ಕು ಕಾಯಿದೆ, 2005ರ ಉದ್ದೇಶ ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದಾಗಿದೆ. ಆದರೆ ಅರ್ಜಿ ಸ್ವೀಕಾರ, ನೋಂದಣಿ ಮತ್ತು ವಿಲೇವಾರಿ ಪ್ರಕ್ರಿಯೆಗಳಲ್ಲಿ ವಿಳಂಬವಾದರೆ, ನಾಗರಿಕರು ತಮ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ತೊಂದರೆಯಾಗುತ್ತದೆ.

ಭೌತಿಕವಾಗಿ ಸಲ್ಲಿಸಿದ ಅರ್ಜಿಗಳು, ನೇರ ಆನ್‌ಲೈನ್ ಅರ್ಜಿಗಳು ಹಾಗೂ ಸೇವಾ ಕೇಂದ್ರಗಳ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಒಂದೇ ವೇದಿಕೆಗೆ ತರುವುದರಿಂದ, ಅರ್ಜಿಗಳ ಮೇಲ್ವಿಚಾರಣೆ ಸುಲಭವಾಗಲಿದೆ. ಅಲ್ಲದೆ, ಮಾಹಿತಿ ಅಧಿಕಾರಿಗಳಿಂದ ಆಗುವ ವಿಳಂಬಗಳನ್ನು ಗುರುತಿಸಲು ಮತ್ತು ಅರ್ಜಿದಾರರಿಗೆ ತಮ ಅರ್ಜಿಗಳ ಕುರಿತು ವಿಶ್ವಾಸಾರ್ಹ ದಾಖಲೆ ಒದಗಿಸಲು ನೆರವಾಗಲಿದೆ. ಸಾರ್ವಜನಿಕ ಸೇವೆಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಅವರು ಈ ಕ್ರಮಗಳ ಕುರಿತು ಮಾಹಿತಿ ನೀಡಿದ್ದಾರೆ. ನಾಗರಿಕರು ಮಾಹಿತಿ ಹಕ್ಕು ಆನ್‌ಲೈನ್ ಪೋರ್ಟಲ್ ಅಥವಾ ತಮ ಸಮೀಪದ ಬೆಂಗಳೂರು ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳ ಮೂಲಕ ಈ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಸರ್ಕಾರ ಮನವಿ ಮಾಡಿದೆ. ಭೌತಿಕ ಆರ್‌ಟಿಐ ಅರ್ಜಿಗಳಿಗೂ ಆನ್‌ಲೈನ್ ನೋಂದಣಿಯನ್ನು ಕಡ್ಡಾಯಗೊಳಿಸಿರುವುದು ಮತ್ತು ಗ್ರಾಮೀಣ ಮಟ್ಟದ ಸೇವಾ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಿರುವುದು ಮಾಹಿತಿ ಹಕ್ಕು ಪ್ರಕ್ರಿಯೆಯನ್ನು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

**ಈ ದಿನದ ದರ** ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹14,766/Gram24ct ₹13,535/Gram22ct ಬೆಳ್ಳಿ: ₹235.00/Gram

## ಮುಜರಾಯಿ ಇಲಾಖೆ ಸುಪರ್ದಿಗೆ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ

• **ಉದಯವಾಹಿನಿ, ಬೆಂಗಳೂರು:**

2025ರ ಜುಲೈ 8ರಂದು ರಾಜ್ಯ ಸರ್ಕಾರ ಪ್ರಸಿದ್ಧ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಒಪ್ಪಿಸಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟ್‌ನ ಸಂಚಾಲಕರಾದ ಬಿ ಪಿ ನಾಗರಾಜು ಹಾಗೂ ಇತರೆ ಟ್ರಸ್ಟಿಗಳು ರಾಜ್ಯ ಸರ್ಕಾರದ ಆದೇಶವನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ ಎಂ ಪೂಣಚ್ಚ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ. ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಪಡೆದುಕೊಂಡಿರುವ ಆದೇಶದಲ್ಲಿ ಕಾನೂನು ಲೋಪಗಳು ಇರುವ



ಉದಯವಾಹಿನಿ ಚಿತ್ರ

ಹಿನ್ನೆಲೆಯಲ್ಲಿ ಆದೇಶವನ್ನು ರದ್ದುಪಡಿಸಲಾಗಿದೆ. ಕೋರ್ಟ್ ಆದೇಶ ಪ್ರಕಟಗೊಂಡ ಒಂದು ವಾರದಲ್ಲಿ ಆಡಳಿತಾಧಿಕಾರಿಯು ದೇವಸ್ಥಾನದ ಆಡಳಿತ ನಿರ್ವಹಣೆಯನ್ನು ಸಂಬಂಧಪಟ್ಟವರಿಗೆ ಬಿಟ್ಟುಕೊಡಬೇಕು ಎಂದು ನ್ಯಾಯಪೀಠ ನಿರ್ದೇಶನ ನೀಡಿದೆ.

## ಹೈಕೋರ್ಟ್ ಆದೇಶ ಬೆನ್ನಲ್ಲೇ ವಿವಿಧ ಹುದ್ದೆಗಳ ನೇಮಕಾತಿಗೆ ಬ್ರೇಕ್

• **ಉದಯವಾಹಿನಿ, ಬೆಂಗಳೂರು:**

ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ಸರ್ಕಾರ ಜಾರಿಗೊಳಿಸಿದ್ದ ಹೆಚ್ಚುವರಿ ಮೀಸಲಾತಿಯನ್ನು ರದ್ದುಗೊಳಿಸಿ ತೀರ್ಪು ನೀಡಿದೆ. ಈ ಬೆನ್ನಲ್ಲೇ, ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಇಲಾಖೆಗಳ ಒಟ್ಟು 1,261 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿದಿದೆ. ಇದರಿಂದ ನೇಮಕಾತಿ ಪ್ರಕ್ರಿಯೆಯಲ್ಲಿ ದೊಡ್ಡ ಗೊಂದಲ ಮೂಡಿದ್ದು, ಸಾವಿರಾರು ಆಕಾಂಕ್ಷಿಗಳಿಗೆ ಬಿಗ್ ಶಾಕ್ ಎದುರಾಗಿದೆ. ಕೆಪಿಎಸ್‌ಸಿ ಒಟ್ಟು 2,610 ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿತ್ತು.

ಆ ಪೈಕಿ 1,349 ಹುದ್ದೆಗಳ ಪ್ರಕ್ರಿಯೆ ಪೂರ್ಣವಾಗಿದ್ದು, ಈ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ, ಆಯ್ಕೆಯಾದ


ಉದಯವಾಹಿನಿ ಚಿತ್ರ

ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಕೆಪಿಎಸ್‌ಸಿ ಈಗಾಗಲೇ ಆಯಾ ಇಲಾಖೆಗಳಿಗೆ ಯಶಸ್ವಿಯಾಗಿ ರವಾನಿಸಿದೆ. ಆದರೆ, ಇನ್ನುಳಿದ 1,261 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳು ಸದ್ಯ ವಿವಿಧ ಹಂತಗಳಲ್ಲಿದ್ದು (ತಾತ್ಕಾಲಿಕ ಪಟ್ಟಿ, ದಾಖಲಾತಿ ಪರಿಶೀಲನೆ ಇತ್ಯಾದಿ), ಇವುಗಳನ್ನು ಈಗ ಸರ್ಕಾರದಿಂದ ಮುಂದಿನ ಆದೇಶ ಬರುವವರೆಗೆ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

ಮುಂದುವರೆದು, ಮೀಸಲಾತಿ ಪ್ರಮಾಣದಲ್ಲಿ ಬದಲಾವಣೆಯಾಗಿರುವುದನ್ನು ರದ್ದುಗೊಳಿಸಿರುವುದರಿಂದ, ಹಳೆಯ ಅಧಿಸೂಚನೆಗಳ ಅಡಿಯಲ್ಲಿ ಸಿದ್ಧಪಡಿಸಲಾಗುತ್ತಿರುವ ಮತ್ತು ಬಾಕಿ ಇರುವ ಆಯ್ಕೆಪಟ್ಟಿಗಳನ್ನು ಹೊಸ ತೀರ್ಪಿಗೆ ಅನುಗುಣವಾಗಿ ಮರುಪರಿಶೀಲನೆ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಜೊತೆಗೆ, ಹೈಕೋರ್ಟ್ ನೀಡಿರುವ ಈ ಆದೇಶದ ಕಾನೂನು ಪರಿಣಾಮಗಳೇನು ಮತ್ತು ಮುಂದಿನ ಹಂತದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಹೇಗೆ ಮುಂದುವರಿಸಬೇಕು ಎಂಬುದರ ಕುರಿತು ಸದ್ಯ ರಾಜ್ಯ ಸರ್ಕಾರದಿಂದ ಅಧಿಕೃತ ನಿರ್ದೇಶನ ಹಾಗೂ ಕಾನೂನು ಸಲಹೆಯನ್ನು ಕೋರಿದೆ. ಸರ್ಕಾರದ ಸ್ಪಷ್ಟನೆ ಸಿಗುವವರೆಗೂ ಈ ಹುದ್ದೆಗಳ ಭರ್ತಿ ಪ್ರಕ್ರಿಯೆ ಸ್ಥಗಿತಗೊಳ್ಳಲಿದೆ.

## ಟೌನ್ ಹಾಲ್ ಬಳಿ ಹೋರಾಟಕ್ಕೆ ಪೊಲೀಸರ ತಡೆ, 75/80 ಮಂದಿಯನ್ನು ವಶಕ್ಕೆ..!

• **ಉದಯವಾಹಿನಿ, ಬೆಂಗಳೂರು:**

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಸಂಜೆ ಬೆಂಗಳೂರಿನ ಟೌನ್ ಹಾಲ್ ಬಳಿ ಪ್ರತಿಭಟನೆ ನಡೆಸಲು ಮುಂದಾದ ಸುಮಾರು 75ರಿಂದ 80 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದ್ದಾರೆ. ಈ ವೇಳೆ ಪೊಲೀಸರು ಬಲಪ್ರಯೋಗ ಮಾಡಿ ಪ್ರತಿಭಟನಾಕಾರರನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ ಎಂದು ಕಾರ್ಯಕರ್ತರು ಆರೋಪಿಸಿದ್ದಾರೆ. ಘಟನೆಯಲ್ಲಿ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ನಾಯು ನೋವು ಕಾಣಿಸಿಕೊಂಡಿದೆ ಎಂದು ತಿಳಿಸಿದ್ದಾರೆ.

ಅಖಿಲ ಭಾರತ ವಿದ್ಯಾರ್ಥಿ ಸಂಘದ (ಎಐಎಸ್‌ಎ) ಸದಸ್ಯರು ಮಾತನಾಡಿ, ಪ್ರತಿಭಟನಾಕಾರರು ಸ್ಥಳದಲ್ಲಿ ಧ್ವಜಗಳನ್ನು ಹಿಡಿದು ಘೋಷಣೆಗಳನ್ನು ಕೂಗಲು ಆರಂಭಿಸಿದ ಬಳಿಕ ಪೊಲೀಸರು ಅವರನ್ನು ವಶಕ್ಕೆ ಪಡೆಯಲು ಮುಂದಾದರು. ಈ ವೇಳೆ ಕೆಲವರ ಬಟ್ಟೆಗಳು ಹರಿದಿವೆ ಎಂದು ಆರೋಪಿಸಿದ್ದಾರೆ. ಅಲ್ಲದೆ, ಗುರುತಿನ ಚೀಟಿ ತೋರಿಸುವಂತೆ ಕೇಳಿದರೂ ಕೆಲವು ಮಹಿಳಾ ಪೊಲೀಸ್ ಸಿಬ್ಬಂದಿ ತಮ್ಮ ಗುರುತಿನ ಬ್ಯಾಡ್ಜ್‌ಗಳನ್ನು ಧರಿಸಿರಲಿಲ್ಲ ಎಂದು ದೂರಿದ್ದಾರೆ.

ಪ್ರತಿಭಟನಾಕಾರರನ್ನು ಚಾಮರಾಜಪೇಟೆ ಪೊಲೀಸ್ ಠಾಣೆಗೆ ಕರೆದೊಯ್ದು ಸುಮಾರು ಒಂದು ಗಂಟೆಯ ಬಳಿಕ ಬಿಡುಗಡೆ ಮಾಡಲಾಗಿದೆ ಎಂದು ಎಐಎಸ್‌ಎ ಸದಸ್ಯರೊಬ್ಬರು ತಿಳಿಸಿದ್ದಾರೆ. ಪ್ರತಿಭಟನೆ ಶಾಂತಿಯುತವಾಗಿತ್ತು ಮತ್ತು ಮೆರವಣಿಗೆ ನಡೆಸುವ ಯಾವುದೇ ಉದ್ದೇಶ ಇರಲಿಲ್ಲ ಎಂದು ಹೇಳಿದ್ದಾರೆ. ಟೌನ್ ಹಾಲ್ ನಗರದ ಕೇಂದ್ರ ಭಾಗದಲ್ಲಿದ್ದು, ಸಾರ್ವಜನಿಕ ಪ್ರತಿಭಟನೆಗಳ ಪ್ರಮುಖ ಸ್ಥಳವಾಗಿರುವ ಕಾರಣ ಅದನ್ನು ಪ್ರತಿಭಟನೆಗೆ ಆಯ್ಕೆ ಮಾಡಲಾಗಿತ್ತು ಎಂದು ಸಂಘಟಕರು ತಿಳಿಸಿದ್ದಾರೆ.

# ಪ್ರತ್ಯೇಕ ಇಖಾತಾ ಪಡೆಯಲು ರಾಜ್ಯ ಸರ್ಕಾರ ಅವಕಾಶ..!

### ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಬೆಂಗಳೂರಿನ ಐದು ನಗರ ಪಾಲಿಕೆಗಳು ಇ-ಆಸ್ತಿ 2.0 ಜಾಲತಾಣದಲ್ಲಿ 'ಪ್ಲಾಟ್ ಉಪವಿಭಾಗ' ಸೇವೆಯನ್ನು ಆರಂಭಿಸಿವೆ.

• **ಉದಯವಾಹಿನಿ, ಬೆಂಗಳೂರು:**

ಬೆಂಗಳೂರಿನ ಸಣ್ಣ ಆಸ್ತಿ ಮಾಲೀಕರು ಹಾಗೂ ಜಂಟಿ ಆಸ್ತಿ ಹೊಂದಿರುವವರ ದಶಕಗಳ ಸಮಸ್ಯೆಗೆ ರಾಜ್ಯ ಸರ್ಕಾರ ಬಿಗ್ ರಿಲೀಫ್ ನೀಡಿದೆ. ಒಂದೇ ಆಸ್ತಿಗೆ ಜಂಟಿಯಾಗಿ 'ಎ-ಇಖಾತಾ' ಹೊಂದಿರುವ ಮಾಲೀಕರು, ಇನ್ನು ಮುಂದೆ ಆನ್‌ಲೈನ್ ಮೂಲಕವೇ ತಮ್ಮ ಪಾಲಿನ ಆಸ್ತಿಯನ್ನು ವಿಭಜಿಸಿಕೊಂಡು ಸ್ವತಂತ್ರ ಇಖಾತಾ ಪಡೆಯಬಹುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದ್ದಾರೆ.

**1 : ಜಂಟಿ ಮಾಲೀಕತ್ವ ಹೊಂದಿರುವ**
**2 : ಪ್ರತ್ಯೇಕ ಹೆಸರಿನಲ್ಲಿ ಎ-ಖಾತಾ**
**3 : ಜಾಗಕ್ಕೆ ಕಟ್ಟಡ ಮಂಜೂರಾತಿ**

ಜಂಟಿ ಮಾಲೀಕತ್ವದ ಎ-ಖಾತಾ ಆಸ್ತಿಯನ್ನು ಮಾಲೀಕರ ಪಾಲಿನ ಅನುಸಾರ ಉಪವಿಭಾಗ ಮಾಡಿ, ಪ್ರತ್ಯೇಕ ಇ-ಖಾತಾ ಪಡೆಯಲು ಅವಕಾಶ ಕಲ್ಪಿಸಲಾಗಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಬೆಂಗಳೂರಿನ ಐದು ನಗರ ಪಾಲಿಕೆಗಳು ಇ-ಆಸ್ತಿ 2.0 ಜಾಲತಾಣದಲ್ಲಿ 'ಪ್ಲಾಟ್ ಉಪವಿಭಾಗ' ಸೇವೆಯನ್ನು ಆರಂಭಿಸಿವೆ ಎಂದು ತಿಳಿಸಿದ್ದಾರೆ. ಈ ಸೇವೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಸೌಲಭ್ಯಕ್ಕಾಗಿ ನಾಗರಿಕರು ಬಹಳ ದಿನಗಳಿಂದ ಕಾಯುತ್ತಿದ್ದರು.

ಒಂದೇ ಎ-ಖಾತಾದಲ್ಲಿ ಜಂಟಿ ಮಾಲೀಕತ್ವ ಹೊಂದಿರುವ ಆಸ್ತಿಗಳಿಗೆ ಈ ಸೇವೆ ಅನ್ವಯಿಸುತ್ತದೆ. ಮಾಲೀಕರು ಒಂದೇ ಕುಟುಂಬದವರಾಗಿರಬಹುದು ಅಥವಾ ಕುಟುಂಬಕ್ಕೆ ಸಂಬಂಧವಿಲ್ಲದವರೂ ಆಗಿರಬಹುದು.


ಉದಯವಾಹಿನಿ ಚಿತ್ರ

ಆಸ್ತಿಯಲ್ಲಿ ಪ್ರತಿಯೊಬ್ಬರ ಪಾಲು ಸ್ಪಷ್ಟವಾಗಿ ದಾಖಲಾಗಿದ್ದರೆ, ಅವರ ಪಾಲಿನ ಆಧಾರದಲ್ಲಿ ನಿವೇಶನವನ್ನು ವಿಭಜಿಸಿ, ಪ್ರತ್ಯೇಕ ಹೆಸರಿನಲ್ಲಿ ಎ-ಖಾತಾ ಪಡೆಯಬಹುದು ಎಂದು ವಿವರಿಸಿದರು. ಬೆಂಗಳೂರಿನಲ್ಲಿ ಒಂದೇ ಎ-ಖಾತಾದಲ್ಲಿ ಹಲವು ಮಂದಿ ಜಂಟಿಯಾಗಿ ಆಸ್ತಿ ಹೊಂದಿದ್ದಾರೆ. ಅವರು ಸಹೋದರರು, ಸಹೋದರಿಯರು, ವಾರಸುದಾರರು, ಸಂಬಂಧಿಕರು ಅಥವಾ ಕುಟುಂಬಕ್ಕೆ ಸಂಬಂಧಿಸದ ಇತರ ಜಂಟಿ ಮಾಲೀಕರಾಗಿರಬಹುದು.

ಈ ಸೇವೆಯು ಪ್ರತಿಯೊಬ್ಬರಿಗೂ ಪ್ರತ್ಯೇಕ ಎ-ಖಾತಾ ಪಡೆಯಲು ನೆರವಾಗಲಿದೆ. ಕಂದಾಯ ಅಧಿಕಾರಿಗಳು ಮಾತನಾಡಿ, ಉಪವಿಭಾಗ ಪ್ರಕ್ರಿಯೆಗೆ ವಿಧಿಸುವ ಶುಲ್ಕವು ಆಸ್ತಿಯ ಬಳಕೆ ಮತ್ತು ಮಾರ್ಗಸೂಚಿ ಮೌಲ್ಯವನ್ನು

> ಈ ಸೌಲಭ್ಯದಿಂದ ಮಾಲೀಕರು ತಮ್ಮ ಪಾಲಿನ ಆಸ್ತಿಯನ್ನು ಮಾರಾಟ ಮಾಡಬಹುದು, ಉಡುಗೊರೆಯಾಗಿ ನೀಡಬಹುದು ಅಥವಾ ಅಡಮಾನ ಇಡಬಹುದು. ತಮ್ಮ ಪಾಲಿನ ಜಾಗಕ್ಕೆ ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವುದರ ಜೊತೆಗೆ, ಆಸ್ತಿ ತೆರಿಗೆಯನ್ನೂ ಪ್ರತ್ಯೇಕವಾಗಿ ಪಾವತಿಸಬಹುದು. -ಸಚಿವ ಕೃಷ್ಣ ಬೈರೇಗೌಡ

(ಗೈಡೆನ್ಸ್ ವ್ಯಾಲ್ಯೂ) ಆಧರಿಸಿರುತ್ತದೆ. ವಸತಿ ಆಸ್ತಿಗೆ ಮಾರ್ಗಸೂಚಿ ಮೌಲ್ಯದ ಶೇ. 2ರಷ್ಟು, ಕೈಗಾರಿಕಾ ಆಸ್ತಿಗೆ ಶೇ. 3ರಷ್ಟು ಹಾಗೂ ವಾಣಿಜ್ಯೇತರ ಮತ್ತು ಇತರ ಆಸ್ತಿಗಳಿಗೆ ಶೇ. 2ರಷ್ಟು ಶುಲ್ಕ

**ಎ-ಖಾತಾ ಹೊಂದಿರುವ ಆಸ್ತಿಗಳು**

ಎ-ಖಾತಾದಲ್ಲಿ ವೈಯಕ್ತಿಕ ಪಾಲು ಸ್ಪಷ್ಟವಾಗಿ ದಾಖಲಾಗಿರುವ ಎಲ್ಲಾ ಜಂಟಿ ಮಾಲೀಕರು ಈ ಸೇವೆಗೆ ಅರ್ಜಿ ಸಲ್ಲಿಸಬಹುದು. ಅವರು ಒಂದೇ ಕುಟುಂಬದವರಾಗಿರಬೇಕೆಂಬ ನಿಯಮವಿಲ್ಲ. ಎ-ಖಾತಾ ಹೊಂದಿರುವ ಆಸ್ತಿಗಳನ್ನು ಮಾತ್ರ ಉಪವಿಭಾಗ ಮಾಡಬಹುದು.

ವಿಧಿಸಲಾಗುತ್ತದೆ. ಉದಾಹರಣೆಗೆ, ಒಂದು ಕೋಟಿ ರೂಪಾಯಿ ಮಾರ್ಗಸೂಚಿ ಮೌಲ್ಯ ಹೊಂದಿರುವ ವಸತಿ ನಿವೇಶನಕ್ಕೆ 20,000 ರೂಪಾಯಿ ಶುಲ್ಕ ಪಾವತಿಸಬೇಕಾಗುತ್ತದೆ ಎಂದು ವಿವರಿಸಿದರು. 2,000 ಚದರ ಮೀಟರ್‌ವರೆಗಿನ (ಸುಮಾರು 21,500 ಚದರ ಅಡಿ) ನಿವೇಶನಗಳಿಗೆ ಜಂಟಿ ಮಾಲೀಕರ ನಡುವೆ ವಿಭಜನೆ ಮಾಡಿಕೊಳ್ಳಲು ಸರಳ ಹಾಗೂ ತ್ವರಿತ ವ್ಯವಸ್ಥೆ ಕಲ್ಪಿಸಲಾಗಿದೆ. ಆಸ್ತಿಯು ಖಾಲಿ ನಿವೇಶನವಾಗಿರಬೇಕು ಅಥವಾ ಕಟ್ಟಡ ಹೊಂದಿರುವ ನಿವೇಶನವಾಗಿರಬೇಕು.

ಬಹುಮಹಡಿ ಕಟ್ಟಡಗಳಲ್ಲಿನ ಪ್ರತ್ಯೇಕ ಫ್ಲ್ಯಾಟ್‌ಗಳು ಅಥವಾ ಘಟಕಗಳಿಗೆ ಸಂಬಂಧಿಸಿದ ಎ-ಖಾತಾಗಳನ್ನು ಈ ಸೌಲಭ್ಯದಡಿ ಉಪವಿಭಾಗ ಮಾಡಲು ಅವಕಾಶವಿಲ್ಲ. ಕೆಲವು ವಿಭಜಿತ ನಿವೇಶನಗಳು ನೇರವಾಗಿ ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರದಿದ್ದರೆ, ಅವುಗಳಿಗೆ ಆಂತರಿಕ ರಸ್ತೆ ಕಲ್ಪಿಸಬೇಕು. ಅಂತಹ ರಸ್ತೆಯ ಕನಿಷ್ಠ ಅಗಲ 3.5 ಮೀಟರ್ (ಸುಮಾರು 11.5 ಅಡಿ) ಇರಬೇಕು. ಈ ಷರತ್ತುಗಳು ಪ್ರತಿಯೊಂದು ನಿವೇಶನಕ್ಕೂ ರಸ್ತೆ ಸಂಪರ್ಕ ಇತರ ನಿಯಮಗಳ ಪಾಲನೆ ಖಚಿತಪಡಿಸುತ್ತವೆ.

## ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಅ. 22ರ ವರೆಗೆ ಭಾರೀ ಮಳೆ

• **ಉದಯವಾಹಿನಿ, ಬೆಂಗಳೂರು:**

ವಾಯುಭಾರ ಕುಸಿತದಿಂದಾಗಿ ರಾಜ್ಯ ರಾಜಧಾನಿ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ವಿವಿಧ ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, ಭಾನುವಾರದಿಂದ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರ ಸೇರಿದಂತೆ ದಕ್ಷಿಣ ಒಳನಾಡು, ಕರಾವಳಿ ಹಾಗೂ ಉತ್ತರ ಒಳನಾಡಿನ ವಿವಿಧ ಜಿಲ್ಲೆಗಳಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಭಾರಿ ಮಳೆಯಾಗುವ ನಿರೀಕ್ಷೆಯಿದ್ದು, ಮುಂಜಾಗ್ರತಾ ಕ್ರಮವಾಗಿ ಪ್ರಮುಖ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಹವಾಮಾನ ಇಲಾಖೆ ಇಂದು 'ಆರೆಂಜ್ ಅಲರ್ಟ್' ಘೋಷಿಸಿತ್ತು. ಇದರ ಬೆನ್ನಲ್ಲೇ ಸಂಜೆ ನಗರದಾದ್ಯಂತ ಮಳೆ ಆರಂಭವಾಗಿದ್ದು, ನಾಳೆಯಿಂದ ಅಕ್ಟೋಬರ್ 22ರವರೆಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಇಂದು ಸಂಜೆ ಬೆಂಗಳೂರಿನ ಲಾಲ್‌ಬಾಗ್, ಶಾಂತಿನಗರ, ಕಾರ್ಪೊರೇಷನ್ ವೃತ್ತ ಸೇರಿದಂತೆ ವಿವಿಧೆಡೆ ಬಿರುಸಿನ ಮಳೆ ಸುರಿಯಿತು.

ಮಳೆಯಿಂದಾಗಿ ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿ, ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡುವಂತಾಯಿತು. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮುಂದಿನ ಕೆಲವು ದಿನಗಳವರೆಗೆ ಗುಡುಗು ಸಹಿತ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಕಡಲ ತೀರದ ಈ ಭಾಗಗಳಲ್ಲಿ ಆಗಾಗ್ಗೆ ಬಿರುಗಾಳಿ ಬೀಸುವ ಸಾಧ್ಯತೆಯಿರುವುದರಿಂದ ಮೀನುಗಾರರು ಮತ್ತು ಸಾರ್ವಜನಿಕರು ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

## ಆರೋಪಿಗಳ ಬಂಧನಕ್ಕೆ HDK ಪಟ್ಟು, ಹೋರಾಟದ ಎಚ್ಚರಿಕೆ..!

• **ಉದಯವಾಹಿನಿ, ಬೆಂಗಳೂರು:**

ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ನಡೆಸಲಾಗಿದೆ ಎನ್ನಲಾದ ಸ್ಟಿಂಗ್ ಆಪರೇಷನ್‌ನಲ್ಲಿ ಭಾಗಿಯಾಗಿರುವ ಆರೋಪಿಗಳನ್ನು ತಕ್ಷಣ ಬಂಧಿಸಬೇಕೆಂದು ಆಗ್ರಹಿಸಿ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಬೆಂಗಳೂರಿನಲ್ಲಿ ಪಾದಯಾತ್ರೆ ನಡೆಸಿದರು.

ಬೆಂಗಳೂರಿನ ಜೆಡಿಎಸ್ ಪಕ್ಷದ ಕಚೇರಿಯಿಂದ ಆರಂಭವಾದ ಪಾದಯಾತ್ರೆ ಫ್ರೀಡಂ ಪಾರ್ಕ್‌ವರೆಗೆ ಸಾಗಿತು. ಈ ಸಂದರ್ಭದಲ್ಲಿ ಸ್ಟಿಂಗ್ ಆಪರೇಷನ್‌ನ ಹಿಂದಿರುವ ಆರೋಪಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳದಿದ್ದರೆ ಕರ್ನಾಟಕದಾದ್ಯಂತ ಹೋರಾಟ ತೀವ್ರಗೊಳಿಸುವುದಾಗಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು. ವಿಜಯದಶಮಿ ಬಳಿಕ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ತಿಳಿಸಿದ ಅವರು, ''ನನ್ನ ಹೋರಾಟ ವೈಯಕ್ತಿಕವಾದುದಲ್ಲ'' ಎಂದರು.

ಸ್ಟಿಂಗ್ ಆಪರೇಷನ್‌ನ ಹಿಂದಿರುವ ಪ್ರಮುಖ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಬೆಂಗಳೂರು


ಉದಯವಾಹಿನಿ ಚಿತ್ರ

ಪೊಲೀಸರಿಗೆ ಕುಮಾರಸ್ವಾಮಿ ನೀಡಿದ್ದ ಎರಡು ದಿನಗಳ ಗಡುವು ಮುಕ್ತಾಯಗೊಂಡರೂ ಯಾರನ್ನೂ ಬಂಧಿಸದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ನಂತರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ಬಳಿಕ ನಿಯೋಗದೊಂದಿಗೆ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರನ್ನು ಭೇಟಿಯಾಗಿ, ಸ್ಟಿಂಗ್ ಆಪರೇಷನ್‌ನಲ್ಲಿ ಭಾಗಿಯಾಗಿದ್ದಾರೆ ಎನ್ನಲಾದವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದರು. ಈ ನಡುವೆ ಪತ್ರಕರ್ತ ರಾಕೇಶ್ ಶೆಟ್ಟಿ, ಬಾಗೇಪಲ್ಲಿ ಪ್ರಶಾಂತ್ ಹಾಗೂ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಅವರನ್ನು ಬಂಧಿಸಬೇಕೆಂದು ಜೆಡಿಎಸ್ ಆಗ್ರಹಿಸಿದೆ. ಮೂವರೂ ಈ ಸ್ಟಿಂಗ್ ಆಪರೇಷನ್‌ನಲ್ಲಿ ಭಾಗಿಯಾಗಿದ್ದಾರೆ ಎಂಬುದು ಪಕ್ಷದ ಆರೋಪವಾಗಿದೆ.

## ಕಬ್ಬು ಬೆಳೆಗಾರರ ಮುತ್ತಿಗೆ ಭೀತಿ-ಆಸ್ತಿಪಾಸ್ತಿ ರಕ್ಷಣೆಗೆ ಹೈಕೋರ್ಟ್ ಖಡಕ್ ಸೂಚನೆ..!

• **ಉದಯವಾಹಿನಿ, ಬೆಂಗಳೂರು:**

ಕಬ್ಬಿನ ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ರೈತ ಸಂಘಟನೆಗಳು ನಡೆಸಲು ಉದ್ದೇಶಿಸಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ಹುಬ್ಬಳ್ಳಿಯ ಕೇಶ್ವಾಪುರದ ಮಯೂರಿ ಎಸ್ಟೇಟ್ ನಿವಾಸಿಗಳ ಜೀವ ಮತ್ತು ಆಸ್ತಿಗೆ ಯಾವುದೇ ಅಪಾಯ ಎದುರಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಧಾರವಾಡ ಜಿಲ್ಲಾಧಿಕಾರಿ ಹಾಗೂ ಹುಬ್ಬಳ್ಳಿ-ಧಾರವಾಡ ನಗರ ಪೊಲೀಸ್ ಆಯುಕ್ತರಿಗೆ ಕರ್ನಾಟಕ ಹೈಕೋರ್ಟ್ ಸೂಚನೆ ನೀಡಿದೆ.

ಈ ಸಂಬಂಧ ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಕೆ.ಎಸ್.ಭರತ್ ಕುಮಾರ್ ಅವರಿದ್ದ ವಿಭಾಗೀಯ ಪೀಠ ನಿರ್ದೇಶಿಸಿದೆ. ಕಬ್ಬಿನ ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ರೈತ ಸಂಘಟನೆಗಳು ನಡೆಸುವ ಪ್ರತಿಭಟನೆ, ರ‍್ಯಾಲಿ, ಮೆರವಣಿಗೆ, ಧರಣಿ ಅಥವಾ ಮುತ್ತಿಗೆ ಕಾರ್ಯಕ್ರಮಗಳನ್ನು ಅಧಿಕಾರಿಗಳು ನಿಗದಿಪಡಿಸಿದ ಸ್ಥಳಗಳಲ್ಲೇ ನಡೆಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಸಂಗಮ್ನಾಥ್ ಹಂಜಿ ಸೇರಿದಂತೆ ಎಂಟು ಮಂದಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. 2022ರ ಆಗಸ್ಟ್ 1ರಂದು ಹೈಕೋರ್ಟ್ ನೀಡಿದ್ದ ಆದೇಶದ ಪ್ರಕಾರ ಪ್ರತಿಭಟನೆಗಳು ನಡೆಯಬೇಕು ಮತ್ತು ಮಯೂರಿ ಎಸ್ಟೇಟ್‌ನಂತಹ ವಸತಿ ಪ್ರದೇಶಗಳಲ್ಲಿ ಅವುಗಳಿಗೆ ಅವಕಾಶ ನೀಡಬಾರದು ಎಂದು ಅರ್ಜಿದಾರರು ಕೋರಿದ್ದರು.

ಅರ್ಜಿದಾರರ ಪರ ಹಿರಿಯ ವಕೀಲ ಪಿ.ಪಿ.ಹೆಗ್ಡೆ ವಾದ ಮಂಡಿಸಿ, ವಸತಿ ಪ್ರದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಂದ ನಿವಾಸಿಗಳ ಸಂವಿಧಾನದ



ಉದಯವಾಹಿನಿ ಚಿತ್ರ

19(1)(ಡಿ) ಮತ್ತು 21ನೇ ವಿಧಿಗಳ ಅಡಿಯಲ್ಲಿ ದೊರೆಯುವ ಹಕ್ಕುಗಳಿಗೆ

**ಪ್ರತಿಭಟನೆಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ**

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಅಡ್ವೋಕೇಟ್ ಜನರಲ್, ನಿವಾಸಿಗಳ ಜೀವ ಮತ್ತು ಆಸ್ತಿಯ ರಕ್ಷಣೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿದ್ದಾರೆ. ಪ್ರತಿಭಟನೆಗಳನ್ನು ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದರು.

## ಕಾಂಗ್ರೆಸ್ ಉಳಿದಿದ್ದೆ ಸಿದ್ದರಾಮಯ್ಯರಿಂದ

• **ಉದಯವಾಹಿನಿ, ಬೆಂಗಳೂರು,**



ಸ್ಟಿಂಗ್ ಕಾರ್ಯಾಚರಣೆಯ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತನಾಡದಿರುವುದು ನನಗೆ ಆಶ್ಚರ್ಯ ತಂದಿದೆ ಎಂದು ಹೇಳಿರುವ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಸ್ಟಿಂಗ್ ಆಪರೇಷನ್ ನಾನೇ ಮಾಡಿದ್ದು ಎಂದು ವ್ಯಕ್ತಿಯೊಬ್ಬರು ಹೇಳಿದ್ದರೂ ಆ ಬಗ್ಗೆ ತನಿಖೆ ನಡೆಸದಿರುವ ಔಚಿತ್ಯವನ್ನು ಪ್ರಶ್ನಿಸಿದ್ದಾರೆ.

ಹಾಸನದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಿದ್ದರಾಮಯ್ಯ ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷ ಯಾವತ್ತೋ ಮುಗಿದು ಹೋಗುತ್ತಿತ್ತು. ನಾನು ಸಿದ್ದರಾಮಯ್ಯನವರ ಜತೆ ರಾಜಕೀಯ ಹೋರಾಟ ಮಾಡಿದ್ದೇನೆ. ಆದರೆ ಈಗ ಸಿದ್ದರಾಮಯ್ಯನವರನ್ನು ಮುಗಿಸಲು ಏನೆಲ್ಲಾ ನಡೆದಿದೆ ಎಂಬುದು ಬೆಳಕಿಗೆ ಬಂದಿದೆ ಎಂದರು. ಸ್ಟಿಂಗ್ ಆಪರೇಷನ್ ಬಗ್ಗೆ ಸಿದ್ದರಾಮಯ್ಯನವರು ಮಾತನಾಡದಿರುವುದು ಆಶ್ಚರ್ಯ ತಂದಿದೆ. ಸಿದ್ದರಾಮಯ್ಯನವರ ಹೆಸರನ್ನು ಹಾಳು ಮಾಡಲು ಕೆಲವರು ಹುನ್ನಾರ ನಡೆಸಿದ್ದಾರೆ ಎಂದು ದೂರಿದರು.

ಸ್ಟಿಂಗ್ ಆಪರೇಷನ್ ನಾನೇ ಮಾಡಿದ್ದು ಎಂದು ಸ್ಟಿಂಗ್ ಆಪರೇಷನ್ ನಡೆಸಿರುವ ವ್ಯಕ್ತಿ ಬಹಿರಂಗವಾಗಿ ಹೇಳಿದ್ದಾರೆ. ಹೀಗೆ ಹೇಳಿದ್ದರೂ ತನಿಖೆ ನಡೆಸಲು ಏನೇನು ದಾಖಲೆ ಬೇಕು ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯನ್ನು ಕೂರಿಸಿಕೊಂಡು ಈ ಸ್ಟಿಂಗ್ ವ್ಯಕ್ತಿ ಸಿದ್ದರಾಮಯ್ಯ ಹೆಸರು ಹೇಳು ಎನ್ನುತ್ತಾರೆ. ಸಿದ್ದರಾಮಯ್ಯ ಎಷ್ಟೊತ್ತು ಇದ್ದರು, ಅವರ ದೇಹದ ಯಾವುದಾದರೂ ಗುರುತು ಇದೆಯೇ ಎಂದೆಲ್ಲಾ ಪ್ರಶ್ನೆ ಮಾಡುತ್ತಾರೆ. ಇಂತಹ ವ್ಯಕ್ತಿಯನ್ನು ಏಕೆ ಟಚ್ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

## ಮಾದಕ ವಸ್ತು ವಿದ್ಯಾರ್ಥಿಗಳಿಗೆ ಮಾರಕ

• **ಉದಯವಾಹಿನಿ, ಕೆಆರ್ ಪುರ,**

ಮಾದಕವಸ್ತುಗಳು ವಿದ್ಯಾರ್ಥಿಗಳ ಜೀವನಕ್ಕೆ ಮಾರಕವಾಗಿದ್ದು, ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿದ್ದು ಉತ್ತಮ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಶಾಸಕ ಬಿ.ಎ. ಬಸವರಾಜ ತಿಳಿಸಿದರು. ಕೆಆರ್ ಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಶ ಮುಕ್ತ ಭಾರತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳು ಹಾಗೂ ಅದರ ಪರಿಣಾಮದ ಬಗ್ಗೆ ಜಾಗೃತಿ ಯನ್ನು ಮೂಡಿಸಿದಾಗ ಮಾತ್ರ ಈ ಕಾರ್ಯಕ್ರಮಕ್ಕೆ ಅರ್ಥ ಸಿಗುತ್ತದೆ ಎಂದು ಹೇಳಿದರು. ವಿಶ್ವಮೆಚ್ಚಿದ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಕ್ಷೇತ್ರದಲ್ಲಿ ಒಂದೊಂದು ಚಟುವಟಿಕೆ ನಡೆಸುತ್ತಿದ್ದು, ಕಾಲೇಜು ಆವರಣದಲ್ಲಿ ಮಾದಕವಸ್ತುಗಳ ನಿಷೇಧದ ಮಾಡಿದರೆ ಸಾಲದು ಅದನ್ನು ಜಾರಿಗೆ ತರುವ ನಿಟ್ಟಿನಲ್ಲಿ ಯುವಕರು ಕೈಜೋಡಿಸಲು ಸಲಹೆ ನೀಡಿದರು.

ಸಮಾಜದ ಸ್ವಸ್ಥ ಕಾಪಾಡುವ ನಿಟ್ಟಿನಲ್ಲಿ ಅರಿವು ಮೂಡಿಸುವ ಕಾರ್ಯ ಅನಿವಾರ್ಯ, ಪೋಷಕರು ಮಕ್ಕಳು ಮಾದಕ ವ್ಯಸನಿಗಳಾಗುವ ಬಗ್ಗೆ ಹೆಚ್ಚು ಚಿಂತಿಸುತ್ತಾರೆ, ಪೋಷಕರ ಹಾಗೂ ದೇಶದ ಅಭಿವೃದ್ಧಿ



ಉದಯವಾಹಿನಿ ಚಿತ್ರ

ಮಾದಕಮುಕ್ತ ಮಾಡುವ ಮಕ ಯುವ ಪಡೆ ಸಮಾಜದ ಬೆನ್ನೆಲುಬಾಗಿ ನಿಲ್ಲಬೇಕಾಗುತ್ತದೆ ಎಂದುಹೇಳಿದರು.

ಮಂಡಲ ಅಧ್ಯಕ್ಷ ಮುನೇಗೌಡ ಮಾತನಾಡಿ, ಬೆಂಗಳೂರು ಉತ್ತರ ಯುವ ಮೋರ್ಚಾ ಕಡೆಯಿಂದ ಎಲ್ಲೆಡೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ ಬರುತ್ತಿದ್ದು ಇಂತ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿ ಯುವ ಪಡೆಯನ್ನು ನಶೆಯಿಂದ ದೂರ ಇಡುವ ಕೆಲಸ ಮಾಡಬೇಕು ಎಂದು ಹೇಳಿದರು.

## ವಿಬಿಜಿ ರಾಮ್ ಜಿ ಯೋಜನೆಯಡಿ ತಂಗುದಾಣ ನಿರ್ಮಾಣಕ್ಕೆ ಖಂಡ್ರೆ ಸೂಚನೆ

• **ಉದಯವಾಹಿನಿ, ಬೆಂಗಳೂರು**

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 1000 ಗ್ರಾಮೀಣ ಬಸ್ ತಂಗುದಾಣಗಳ ನಿರ್ಮಾಣಕ್ಕೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿಬಿಜಿ ರಾಮ್ ಜಿ ಅಡಿ ಯೋಜನೆ ರೂಪಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ತತ್ಸಂಬಂಧ ಇಲಾಖೆಯ ಕಾರ್ಯದರ್ಶಿಯವರಿಗೆ ಹಾಗೂ ವಿಬಿಜಿ ರಾಮ್ ಜಿ ಆಯುಕ್ತರಿಗೆ ಲಿಖಿತ ಸೂಚನೆ ನೀಡಿರುವ ಅವರು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರ ಆಗಮನ, ನಿರ್ಗಮನ ಇರುವ 1000 ಹಳ್ಳಿಗಳ ಬಸ್ ತಂಗುದಾಣಗಳನ್ನು ಗುರುತಿಸಿ, ಗ್ರಾಮೀಣ ಸೊಗಡಿನ ಹಾಗೂ ಸ್ಥಳೀಯ ಹಿರಿಮೆ ಬಿಂಬಿಸುವಂತಹ ವಿನ್ಯಾಸ ರೂಪಿಸಿ, ಅದಕ್ಕೆ ಆಗುವ ಸಾಮಗ್ರಿ, ವೆಚ್ಚ ಮತ್ತು ವಿಬಿಜಿ ರಾಮ್ ಜಿ ಕೂಲಿಯ ವೆಚ್ಚವನ್ನು ಅಂದಾಜು ಮಾಡಿ 15 ದಿನಗಳ ಒಳಗಾಗಿ ಪ್ರಸ್ತಾವನೆಯನ್ನು ಕಡತದಲ್ಲಿ ಸಲ್ಲಿಸಲು ಸೂಚಿಸಿದ್ದಾರೆ.


ಉದಯವಾಹಿನಿ ಚಿತ್ರ

ರಾಜ್ಯದ 5927 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಹಲವು ಗ್ರಾಮಗಳಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸೌಲಭ್ಯವಿದ್ದರೂ, ಬಸ್ ನಿಲುಗಡೆಯ ಜಾಗದಲ್ಲಿ ತಂಗುದಾಣಗಳು ಇಲ್ಲದ ಕಾರಣ ಸಾರ್ವಜನಿಕರು, ಬಿಸಿಲು, ಮಳೆಯಲ್ಲಿ ನಿಲ್ಲುವಂತಾಗಿದೆ ಮತ್ತೆ ಕೆಲವು ಬಸ್ ತಂಗು ದಾಣಗಳು ಶಿಥಿಲಾವಸ್ಥೆಯಲ್ಲಿದ್ದು ಬೀಳುವ ಹಂತದಲ್ಲಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಈಶ್ವರ ಖಂಡ್ರೆ ಈ ಸೂಚನೆ ನೀಡಿದ್ದಾರೆ.

ವಿಬಿಜಿ ರಾಮ್ ಜಿ ಅಡಿಯಲ್ಲಿ ಬಸ್ ತಂಗುದಾಣಗಳನ್ನು ಹೊಸದಾಗಿ ನಿರ್ಮಿಸಲು ಮತ್ತು ಹಳೆಯ ತಂಗುದಾಣಗಳನ್ನು ನಿರ್ವಹಣೆ ಮಾಡಲು ಅವಕಾಶವಿದ್ದು, ಈ ನಿಟ್ಟಿನಲ್ಲಿ ಸಮಗ್ರ ಯೋಜನೆ ರೂಪಿಸುವಂತೆ ಈ ಮೂಲಕ ಅಕುಶಲ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವಂತೆ ಅವರು ನಿರ್ದೇಶನ ನೀಡಿದ್ದಾರೆ.

## ಭಾರತ-ಜಪಾನ್ ಸ್ನೇಹ ಬಲವರ್ಧನೆಗೆ ಯುವಜನರ ಕೊಡುಗೆ ಅಗತ್ಯ

• **ಉದಯವಾಹಿನಿ, ಬೆಂಗಳೂರು,**

ನಿಟ್ಟೆ ವಿಶ್ವವಿದ್ಯಾಲಯದ ಯಲಹಂಕ ಕ್ಯಾಂಪಸ್‌ನಲ್ಲಿ 'ಜಪಾನ್ ದಿನ-2026' ಕಾರ್ಯಕ್ರಮವನ್ನು ಬೆಂಗಳೂರಿನ ಜಪಾನ್ ಮಹಾವಾಣಿಜ್ಯ ದೂತ ಹಿರೋಶಿ ನವಾಟಾ ಅವರ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಹಿರೋಶಿ ನವಾಟಾ, ಜಪಾನಿ ಭಾಷೆ ಕಲಿಯುತ್ತಿರುವ 150ಕ್ಕೂ ಹೆಚ್ಚು ವಿದ್ಯಾರ್ಥಿಗಳ ಆಸಕ್ತಿ ಮತ್ತು ಉತ್ಸಾಹವನ್ನು ಶ್ಲಾಘಿಸಿದರು. ಜಪಾನ್‌ನ ಸುಧಾರಿತ ತಂತ್ರಜ್ಞಾನದೊಂದಿಗೆ ಶಿಸ್ತು, ಗೌರವ ಮತ್ತು ಸಾಮರಸ್ಯದಂತಹ ಸಾಂಪ್ರದಾಯಿಕ ಮೌಲ್ಯಗಳು ಬೆಸೆದುಕೊಂಡಿವೆ. ಜಪಾನಿ ಕಂಪನಿಗಳಲ್ಲಿ ಉದ್ಯೋಗ ಪಡೆಯುವುದರ ಜತೆಗೆ ಅಲ್ಲಿನ ಕೆಲಸದ ಸಂಸ್ಕೃತಿ, ತಂಡದ ಸಹಕಾರ ಹಾಗೂ ಬದ್ಧತೆಯನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು. ತಲೆಮಾರಿನ ನಾಯಕರಾಗಿ ವಿದ್ಯಾರ್ಥಿಗಳು ರೂಪುಗೊಳ್ಳಬೇಕು ಎಂದು ಅವರು ಕರೆ ನೀಡಿದರು.

# ನ.9ರಿಂದ ಔಷಧಿಗಳ ದರ ಶೇ.70ರವರೆಗೆ ಇಳಿಕೆ..!

### ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುವುದು ರೋಗಿಗಳಿಗೆ ಮತ್ತು ಅವರ ಕುಟುಂಬದವರಿಗೆ ದೊಡ್ಡ ಸವಾಲಾಗಿದೆ.

• **ಉದಯವಾಹಿನಿ, ಬೆಂಗಳೂರು:**

ಕೇಂದ್ರ ಸರ್ಕಾರವು 137 ಕ್ಯಾನ್ಸರ್ ನಿರೋಧಕ ಔಷಧಗಳ ವ್ಯಾಪಾರ ಮಾರ್ಜಿನ್ ಅನ್ನು ಶೇ.30ಕ್ಕೆ ಮಿತಿಗೊಳಿಸಲು ನಿರ್ಧರಿಸಿರುವ

**1 : ಅರ್ಧಕ್ಕೆ ನಿಲ್ಲಿಸುವ ಪರಿಸ್ಥಿತಿ ಬರಬಾರದು**
**2 : 137 ಔಷಧಗಳ ವ್ಯಾಪಾರ ಮಾರ್ಜಿನ್**
**3 : 2026ರ ನವೆಂಬರ್ 9ರಿಂದ ಜಾರಿಗೆ ಬರಲಿವೆ**

ಹಿನ್ನೆಲೆಯಲ್ಲಿ, ನವೆಂಬರ್ 9ರಿಂದ ಕ್ಯಾನ್ಸರ್ ಔಷಧಗಳ ಬೆಲೆ ಶೇ.70ರವರೆಗೆ ಇಳಿಕೆಯಾಗುವ ನಿರೀಕ್ಷೆಯಿದೆ.

ಕೇಂದ್ರ ಸರ್ಕಾರದ ಈ ಕ್ರಮವನ್ನು ರಾಜ್ಯ ಆರೋಗ್ಯ ಸಚಿವ ಯು.ಟಿ.ಖಾದರ್ ಸ್ವಾಗತಿಸಿದ್ದು, ರೋಗಿಗಳಿಗೆ ಚಿಕಿತ್ಸೆಯನ್ನು ಕೈಗೆಟುಕುವಂತೆ ಮಾಡುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಹೇಳಿದ್ದಾರೆ.' ರಾಷ್ಟ್ರೀಯ ಔಷಧ ಬೆಲೆ ನಿಗದಿ ಪ್ರಾಧಿಕಾರ (ಎನ್‌ಪಿಪಿಎ) ಕೈಗೊಂಡಿರುವ ಈ ನಿರ್ಧಾರದಿಂದ ಕರ್ನಾಟಕ ಸೇರಿದಂತೆ ದೇಶಾದ್ಯಂತದ ಕ್ಯಾನ್ಸರ್ ರೋಗಿಗಳಿಗೆ ಅನುಕೂಲವಾಗಲಿದೆ. ದುಬಾರಿ ಔಷಧಗಳ ವೆಚ್ಚದಿಂದಾಗಿ ರೋಗಿಗಳು ಮತ್ತು ಅವರ ಕುಟುಂಬಗಳು ಎದುರಿಸುತ್ತಿರುವ ಆರ್ಥಿಕ ಹೊರೆಯನ್ನು ಇದು ಕಡಿಮೆ ಮಾಡಲಿದೆ ಎಂದು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುವುದು ರೋಗಿಗಳಿಗೆ ಮತ್ತು ಅವರ ಕುಟುಂಬದವರಿಗೆ ದೊಡ್ಡ ಸವಾಲಾಗಿದೆ. ಔಷಧಗಳ ಬೆಲೆ ಹೆಚ್ಚಿರುವ ಕಾರಣಕ್ಕೆ ಯಾವುದೇ ರೋಗಿಯೂ ಚಿಕಿತ್ಸೆಯನ್ನು ಅರ್ಧಕ್ಕೆ ನಿಲ್ಲಿಸುವ ಪರಿಸ್ಥಿತಿ ಬರಬಾರದು ಎಂದು ಹೇಳಿದ್ದಾರೆ. ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಅಧೀನದಲ್ಲಿರುವ ಎನ್‌ಪಿಪಿಎ, ಗುರುತಿಸಲಾದ 137 ಔಷಧಗಳ ವ್ಯಾಪಾರ ಮಾರ್ಜಿನ್ ಅನ್ನು ತರ್ಕಬದ್ಧಗೊಳಿಸುವ ಕ್ರಮ ಕೈಗೊಂಡಿದೆ. ಈ ಔಷಧಗಳು ನಿಗದಿತ ಬೆಲೆ ನಿಯಂತ್ರಣ ಪಟ್ಟಿಗೆ

> ಔಷಧಗಳ ಬೆಲೆ ನಿಗದಿಯಲ್ಲಿ ಪಾರದರ್ಶಕತೆ ಕಾಪಾಡಲು ಮತ್ತು ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ಲಭ್ಯವಾಗುವಂತೆ ಮಾಡಲು ಕೇಂದ್ರ ಹಾಗೂ ಕರ್ನಾಟಕ ಸರ್ಕಾರದ ನಡುವೆ ಸಮನ್ವಯ ಅಗತ್ಯವಿದೆ ಎಂದು ಹೇಳಿದ್ದಾರೆ. -ಖಾದರ್

ಸೇರದ ಕ್ಯಾನ್ಸರ್ ನಿರೋಧಕ ಔಷಧಗಳಾಗಿವೆ. ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಗಳು 2026ರ ನವೆಂಬರ್ 9ರಿಂದ ಜಾರಿಗೆ ಬರಲಿವೆ. ಪ್ರತಿಯೊಂದು ಔಷಧದ ಪ್ರಸ್ತುತ ಬೆಲೆ ರಚನೆಗೆ ಅನುಗುಣವಾಗಿ ಬೆಲೆ ಇಳಿಕೆಯ ಪ್ರಮಾಣ ಬದಲಾಗಲಿದೆ. ಈ ಪಟ್ಟಿಯಲ್ಲಿ 20ಕ್ಕೂ ಹೆಚ್ಚು ಬಗೆಯ ಕ್ಯಾನ್ಸರ್‌ಗಳ ಚಿಕಿತ್ಸೆಗೆ ಬಳಸುವ ರೋಗನಿರೋಧಕ ಚಿಕಿತ್ಸೆಯ ಔಷಧಗಳು, ಸ್ತನ ಮತ್ತು ಪ್ರಾಸ್ಟೇಟ್ ಕ್ಯಾನ್ಸರ್ ರೋಗಿಗಳಿಗೆ ನೀಡುವ ಡೆನೊಸುಮ್ಯಾಬ್, ಕ್ಯಾನ್ಸರ್ ರೋಗಿಗಳಲ್ಲಿ ನ್ಯೂಟ್ರೋಪೀನಿಯಾ ಸಮಸ್ಯೆ ತಡೆಯಲು ಬಳಸುವ ಪೆಗ್‌ಫಿಲ್ಗ್ರಾಸ್ಟಿಮ್ ಹಾಗೂ ಕರುಳಿನ, ಅಂಡಾಶಯ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳ ಚಿಕಿತ್ಸೆಗೆ ಬಳಸುವ ಬೆವಾಸಿಜುಮ್ಯಾಬ್ ಸೇರಿವೆ. ವ್ಯಾಪಕವಾಗಿ ಬಳಕೆಯಾಗುವ ಪೆಂಬ್ರೊಲಿಜುಮ್ಯಾಬ್, ಡರ್ವಾಲುಮ್ಯಾಬ್ ಮತ್ತು ಒಸಿಮರ್ಟಿನಿಬ್ ಔಷಧಗಳೂ ಈ ಪಟ್ಟಿಯಲ್ಲಿವೆ. ಚಿಕಿತ್ಸೆಯ ವೆಚ್ಚ ಭರಿಸಲು ಆಸ್ತಿಯನ್ನು ಮಾರಾಟ ಮಾಡುವ ಅಥವಾ

**ತಜ್ಞರ ಸಮಿತಿಯ ಶಿಫಾರಸು**

ಔಷಧಗಳ ವ್ಯಾಪಾರ ಮಾರ್ಜಿನ್ ಅನ್ನು ಔಷಧಗಳ (ಬೆಲೆ ನಿಯಂತ್ರಣ) ಆದೇಶ 2013ರ ಅಡಿಯಲ್ಲಿ ಶೇ.30ಕ್ಕೆ ಮಿತಿಗೊಳಿಸಲಾಗಿದೆ. ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯದ ಅಡಿಯಲ್ಲಿ ರಚಿಸಲಾಗಿದ್ದ ತಜ್ಞರ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ.

ದೊಡ್ಡ ಮೊತ್ತದ ಸಾಲ ಮಾಡುವ ಅನಿವಾರ್ಯತೆಗೆ ಸಿಲುಕಿರುವ ಕುಟುಂಬಗಳ ಆರ್ಥಿಕ ಸಂಕಷ್ಟದ ಬಗ್ಗೆಯೂ ಅವರು ಗಮನ ಸೆಳೆದಿದ್ದಾರೆ. ಅಕ್ಟೋಬರ್ 17ರಂದು ಹೊರಡಿಸಲಾದ ಗೆಜೆಟ್ ಅಧಿಸೂಚನೆಯ ಏಳು ದಿನಗಳೊಳಗೆ ಪರಿಷ್ಕೃತ ಬೆಲೆಗಳ ಕುರಿತು ಔಷಧ ತಯಾರಕರು ಎನ್‌ಪಿಪಿಎಗೆ ಮಾಹಿತಿ ನೀಡಬೇಕು. ನವೆಂಬರ್ 9ರಿಂದ ಆಸ್ಪತ್ರೆಗಳು ಮತ್ತು ಔಷಧ ಮಾರಾಟಗಾರರು ಪರಿಷ್ಕೃತ ಬೆಲೆಯಲ್ಲೇ ಔಷಧಗಳನ್ನು ಮಾರಾಟ ಮಾಡಬೇಕು ಹಾಗೂ ನವೀಕರಿಸಿದ ಬೆಲೆಪಟ್ಟಿಯನ್ನು ಪ್ರದರ್ಶಿಸಬೇಕು. ಗ್ರಾಹಕರು 'ಫಾರ್ಮಾ ಸಹಿ ದಾಮ್' ಆ್ಯಪ್ ಮತ್ತು ಎನ್‌ಪಿಪಿಎ ವೆಬ್‌ಸೈಟ್ ಮೂಲಕ ಔಷಧಗಳ ಬೆಲೆಗಳನ್ನು ಪರಿಶೀಲಿಸಬಹುದು. ಔಷಧಗಳ ಕೊರತೆ ಉಂಟಾಗದಂತೆ ತಯಾರಕರು ಪೂರೈಕೆಯ ಪ್ರಮಾಣವನ್ನೂ ಕಾಯ್ದುಕೊಳ್ಳಬೇಕಿದೆ.

## ತಲಕಾವೇರಿ ಬ್ರಹ್ಮಕುಂಡಿಕೆಯಲ್ಲಿ ತೀರ್ಥೋದ್ಭವ

• ಉದಯವಾಹಿನಿ, ಮಡಿಕೇರಿ:

ಕೊಡಗಿನ ಮಂಜು ಮುಸುಕಿದ ಬ್ರಹ್ಮಗಿರಿ ಬೆಟ್ಟಗಳ ನಡುವೆ ಪವಿತ್ರ ತಲಕಾವೇರಿಯಲ್ಲಿ ಶನಿವಾರ ರಾತ್ರಿ, 7.50ಕ್ಕೆ ಮೇಷ ಲಗ್ನದಲ್ಲಿ ತೀರ್ಥೋದ್ಭವವಾಗಿದ್ದು, ಸಾವಿರಾರು ಭಕ್ತಾದಿಗಳು ಅಪರೂಪದ ಕ್ಷಣವನ್ನು ಕಣ್ತುಂಬಿಕೊಂಡರು.

ಈ ಸಂದರ್ಭದಲ್ಲಿ ಭಕ್ತರು ಭಕ್ತಿಪರವಶರಾಗಿ ಕಾವೇರಮ್ಮನ ನಾಮಸ್ಮರಣೆ ಮಾಡಿದರು. ಬ್ರಹ್ಮಕುಂಡಿಕೆಯಲ್ಲಿ ಪವಿತ್ರ ತೀರ್ಥದ ರೂಪದಲ್ಲಿ ಕಾವೇರಿ ನದಿ ಉಗಮಿಸಿದ ಕ್ಷಣಕ್ಕಾಗಿ ಬೆಳಗ್ಗಿನಿಂದಲೇ ಕಾಯುತ್ತಿದ್ದ ಭಕ್ತರ ನಿರೀಕ್ಷೆ ಸಾಕಾರಗೊಂಡಿತು. ಮುಖ್ಯ ಅರ್ಚಕ ಪ್ರಶಾಂತ್ ಆಚಾರ್ಯ ಅವರ ನೇತೃತ್ವದಲ್ಲಿ ಅರ್ಚಕರು ಕುಂಕುಮಾರ್ಚನೆ, ತೀರ್ಥಪೂಜೆ ಮತ್ತು ಮಹಾಪೂಜೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ಬಳಿಕ ಭಕ್ತರ ಮೇಲೆ ಪವಿತ್ರ ತೀರ್ಥವನ್ನು ಪ್ರೋಕ್ಷಣೆ ಮಾಡಲಾಯಿತು. ಸಾಂಪ್ರದಾಯಿಕ ಬಲೋಪತ್ ಮತ್ತು ದುಡಿಕೋಟ್ ಪಾಟ್ ಡ್ರಮ್‌ಗಳ ನಾದದ ನಡುವೆ, 'ಕಾವೇರಮ್ಮೆ ಉಕ್ಕೋ ಬಾ' ಎಂಬ ಭಕ್ತರ ಘೋಷಣೆಗಳು ಎಲ್ಲೆಡೆ ಪ್ರತಿಧ್ವನಿಸಿದವು.


ಉದಯವಾಹಿನಿ ಚಿತ್ರ

ಆರಂಭದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿ ನೂಕುನುಗ್ಗಲು ಉಂಟಾದರೂ, ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ ಆರ್.ಎನ್. ಅವರ ನೇತೃತ್ವದಲ್ಲಿ ಪೊಲೀಸರು ಬ್ಯಾರಿಕೇಡ್‌ಮೂಲಕ ಸರತಿ ಸಾಲುಗಳನ್ನು ವ್ಯವಸ್ಥಿತಗೊಳಿಸಿ ಬಿಗಿ ಭದ್ರತೆ ಒದಗಿಸಿದರು. ಇದಕ್ಕೂ ಮುನ್ನ ಭಕ್ತರು ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ಪೂರ್ವಜರಿಗೆ ಸಂಬಂಧಿಸಿದ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು.

## ಕುಸಿದು ಬಿದ್ದ ವಿದ್ಯುತ್ ದೀಪಾಲಂಕಾರದ ಕಂಬ

• ಉದಯವಾಹಿನಿ, ಮೈಸೂರು, :

ನಾಡಹಬ್ಬ ಮೈಸೂರು ದಸರಾ ಸಂಭ್ರಮದ ನಡುವೆ ಮತ್ತೊಂದು ಅವಘಡ ಸಂಭವಿಸಿದೆ. ನಗರದ ಸಯ್ಯಾಜಿರಾವ್ ರಸ್ತೆಯಲ್ಲಿ ಅಳವಡಿಸಲಾಗಿದ್ದ ಬೃಹತ್ ವಿದ್ಯುತ್ ದೀಪಾಲಂಕಾರದ ಕಂಬವೊಂದು ಏಕಾಏಕಿ ಕುಸಿದು ಬಿದ್ದಿದೆ. ಕಂಬ ಬಿದ್ದ ರಭಸಕ್ಕೆ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಕಾರು ಹಾಗೂ ಆಟೋ ಸಂಪೂರ್ಣವಾಗಿ ಜಖಂ ಗೊಂಡಿವೆ. ಅದೃಷ್ಟವಶಾತ್ ಕಾರು ಮತ್ತು ಆಟೋದಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಕ್ಷಣ ಸ್ಥಳೀಯರು ಧಾವಿಸಿ ಕಾರು ಮತ್ತು ಆಟೋದಲ್ಲಿದ್ದವರನ್ನು ರಕ್ಷಣೆ ಮಾಡಿ ಹೊರಗೆ ಕರೆತಂದಿದ್ದಾರೆ.

ಘಟನೆಯಿಂದ ಸಯ್ಯಾಜಿರಾವ್ ರಸ್ತೆಯಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ದೇವರಾಜ ಪೊಲೀಸರು ಮತ್ತು ಪಾಲಿಕೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. **ಎರಡನೇ ಅವಘಡ:** ನಿನ್ನೆಯಷ್ಟೇ ಯುವ ದಸರಾ ಕಾರ್ಯಕ್ರಮದ ವೇಳೆ ಬೃಹತ್ ವಿದ್ಯುತ್ ಕಂಬ ಕುಸಿದು ಬಿದ್ದು ಆತಂಕ ಸೃಷ್ಟಿಯಾಗಿತ್ತು. ಸತತ ಎರಡು ದಿನಗಳಲ್ಲಿ ಇಂತಹ ಅವಘಡಗಳು ಸಂಭವಿಸಿರುವುದು ದೀಪಾಲಂಕಾರದ ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ ಪ್ರಶ್ನೆ ಮೂಡಿಸಿದೆ.

# ಡಿಸಿಸಿ ಬ್ಯಾಂಕ್ ಅಕ್ರಮ, ಸಾಲ ಬಾಕಿ ಉಳಿಸಿಕೊಂಡವರ ಆಸ್ತಿ ಮುಟ್ಟುಗೋಲು

### ಅದು ಬಡ ರೈತರ ಹಣ, ಸಾಲ ಕಟ್ಟದೇ ಹೋದರೂ ನಡೆಯುತ್ತದೆ ಎಂಬ ಭ್ರಮೆಯಲ್ಲಿದ್ದವರಿಗೆ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ

• ಉದಯವಾಹಿನಿ, ಕೋಲಾರ:

ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್‌ನಲ್ಲಿ ಅಕ್ರಮ ನಡೆಸಿರುವವರ ಹಾಗೂ ಸಾಲ ಮರುಪಾವತಿಸದೆ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಹಾಗೂ ಅವರ ವಂಶಪಾರಂಪರ್ಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು

**1 : ತಕ್ಷಣವೇ ಕಾನೂನು ಕ್ರಮ ಮುಗಿಯಿತು**
**2 : 908 ಕೋಟಿ ಸಾಲ ಒದಗಿಸಲಾಗಿದೆ**
**3 : ಸ್ವಸಹಾಯ ಗುಂಪುಗಳ ಶೇ 98ರಷ್ಟು**

ಎಂದು ರಾಜ್ಯ ಅಪೆಕ್ಸ್ ಬ್ಯಾಂಕ್ ನೂತನ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಎಸ್.ರವಿ ಎಚ್ಚರಿಕೆ ನೀಡಿದರು. ನಗರಕ್ಕೆ ಭೇಟಿ ನೀಡಿದ ಅವರು, ಡಿಸಿಸಿ ಬ್ಯಾಂಕ್‌ನ ನೂತನ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಬ್ಯಾಂಕ್‌ನ ಹಣ ಯಾರದ್ದೋ ಖಾಸಗಿ ಸ್ವತ್ತಲ್ಲ. ಅದು ಬಡ ರೈತರ ಹಣ, ಸಾಲ ಕಟ್ಟದೇ ಹೋದರೂ ನಡೆಯುತ್ತದೆ ಎಂಬ ಭ್ರಮೆಯಲ್ಲಿದ್ದವರಿಗೆ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಪ್ಪಿತಸ್ಥರ ವಿರುದ್ಧ ನೇರವಾಗಿ ಕ್ರಿಮಿನಲ್ ಮೊಕದ್ದಮೆ


ಉದಯವಾಹಿನಿ ಚಿತ್ರ

ಹೂಡಲಾಗುವುದು ಅಷ್ಟೇ ಅಲ್ಲದೆ, ಅವರ ಕುಟುಂಬದ ವಂಶ ಪಾರಂಪರ್ಯವಾಗಿ ಬಂದಿರುವ ಆಸ್ತಿಗಳನ್ನು ಬ್ಯಾಂಕ್ ವತಿಯಿಂದ ಮಟ್ಟುಗೋಲು ಮಾಡಿಕೊಳ್ಳಲು ಹಿಂಜರಿಯುವುದಿಲ್ಲ ಎಂದರು.

**ಕೋರ್ಟ್ ತಡೆಯಾಜ್ಞೆ ತೆರವು:** ಹಲವು ಪ್ರಕರಣಗಳಲ್ಲಿ ಕೋರ್ಟ್‌ನಲ್ಲಿ ತಡೆಯಾಜ್ಞೆ ತಂದಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, 'ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಬಂದ ತಕ್ಷಣವೇ ಕಾನೂನು ಕ್ರಮ ಮುಗಿಯಿತು ಎಂದರ್ಥವಲ್ಲ, ತಡೆಯಾಜ್ಞೆ ಶಾಶ್ವತವಲ್ಲ, ಸರ್ಕಾರದ ಹಾಗೂ ಬ್ಯಾಂಕ್‌ನ ಕಾನೂನು ಘಟಕ ಅತ್ಯಂತ ಬಲಿಷ್ಠವಾಗಿದ್ದು, ಶೀಘ್ರದಲ್ಲೇ ಎಲ್ಲಾ ತಡೆಯಾಜ್ಞೆಗಳನ್ನು ತೆರವುಗೊಳಿಸಿ ಅಕ್ರಮವೆಸಗಿದವರ ವಿರುದ್ಧ ಕಾನೂನು ಸಮರ ಮುಂದುವರಿಸಲಾಗುವುದು' ಎಂದು ಸ್ಪಷ್ಟಪಡಿಸಿದರು. ಈ ದೇಶದಲ್ಲಿ ಸಾಲವನ್ನು ಪ್ರಾಮಾಣಿಕವಾಗಿ ಕಟ್ಟುತ್ತಿರುವವರು ಅಂಬಾನಿ, ಅದಾನಿ, ಮಲ್ಯ ಅಲ್ಲ: ಹೆಣ್ಣುಮಕ್ಕಳು ದೇಶದಾದ್ಯಂತ

> ಅಪೆಕ್ಸ್ ಬ್ಯಾಂಕ್‌ನಿಂದ ಈಗಾಗಲೇ ಕೋಲಾರ ಡಿಡಿಸಿ ಬ್ಯಾಂಕ್‌ಗೆ 908 ಕೋಟಿ ಸಾಲ ಒದಗಿಸಲಾಗಿದೆ. ಇದು ನಮ್ಮ ಕುಟುಂಬದ ಸಂಸ್ಥೆ ಇದ್ದಂತೆ ಬ್ಯಾಂಕ್ ಪುನಶ್ಚೇತನಕ್ಕೆ ಎಷ್ಟು ಶಕ್ತಿ ಬೇಕೋ ಅಷ್ಟು ಶಕ್ತಿ ನೀಡಲು ಅಪೆಕ್ಸ್ ಬ್ಯಾಂಕ್ ಸಿದ್ಧವಿದೆ. ರೈತರ ಕೈಬಿಡುವ ಪ್ರಶ್ನೆಯೇ ಇಲ್ಲ ಎಂದರು.
> -ವಿಧಾನ ಪರಿಷತ್ ಸದಸ್ಯ ಎಸ್.ರವಿ

ಸ್ವಸಹಾಯ ಗುಂಪುಗಳ ಶೇ 98ರಷ್ಟು ಮಹಿಳೆಯರು ಸಾಲವನ್ನು ಸರಿಯಾದ ಸಮಯಕ್ಕೆ ಮರುಪಾವತಿಸಿ ದೇಶದ ಗೌರವ ಎತ್ತಿಹಿಡಿದಿದ್ದಾರೆ. ಮಹಿಳೆಯರು ಯಾರದ್ದೂ ಮಾತು ಕೇಳಿ ಗೊಂದಲಕ್ಕೆ ಒಳಗಾಗದೆ ತಮ್ಮ ಬ್ಯಾಂಕ್ ಅನ್ನು ಉಳಿಸಿಕೊಳ್ಳಲು ಪ್ರಾಮಾಣಿಕವಾಗಿ ಸಾಲ ತೀರಿಸಿ ಮತ್ತೆ ನೂತನ ಸಾಲ ಪಡೆದುಕೊಳ್ಳಬೇಕು ಎಂದು ಮನವಿ.

ಕೋಲಾರ ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಪರಿಸ್ಥಿತಿ ಸಂಪೂರ್ಣವಾಗಿ ಹಾಳಾಗಿಲ್ಲ. ಆದರೆ, ಆರೋಗ್ಯ ಸ್ಥಿತಿ ಸರಿ ಇಲ್ಲ. ಐಸಿಯುಗೆ ಹೋಗುವಷ್ಟು ಚಿಂತಾಜನಕವಾಗಿಲ್ಲ. ಕೇವಲ ಕೆಮ್ಮು, ನೆಗಡಿ, ಶೀತ ಮತ್ತು ವೈರಾಣು ಜ್ವರ ಬಂದಿದೆ.

ಅಷ್ಟೇ ಆಡಳಿತಾತ್ಮಕ ನ್ಯೂನತೆಗಳಿಂದ ಈ ಪರಿಸ್ಥಿತಿ ಬಂದಿದ್ದು, ಹೊಸ ಆಡಳಿತ ಮಂಡಳಿ ಬಂದಿರುವುದರಿಂದ ಶೀಘ್ರದಲ್ಲೇ ಬ್ಯಾಂಕ್ ಚೇತರಿಸಿಕೊಳ್ಳಲಿದೆ ಎಂದು ಅಪಕ್ಸ್ ಬ್ಯಾಂಕ್ ಅಧ್ಯಕ್ಷ ಎಸ್.ರವಿ ಹೇಳಿದರು. ರೈತರಲ್ಲಿ ಹಾಗೂ ಸಾರ್ವಜನಿಕರಲ್ಲಿ ಸಾಲಮನ್ನಾ ಆಗುತ್ತದೆ ಎಂಬ ಗೊಂದಲಗಳಿದ್ದು, ಅದಕ್ಕೆ ಸ್ಪಷ್ಟನೆ ನೀಡಿದ ಎಸ್.ರವಿ, 'ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವಾಗಲಿ ಅಥವಾ ರಾಜ್ಯದಲ್ಲಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರವಾಗಲಿ, ಯಾವುದೇ ಸಾಲ ಮನ್ನಾ ಮಾಡುವ ಪ್ರಸ್ತಾಪ ಸ್ಪಷ್ಟವಾಗಿ ಇಲ್ಲ. ಯಾರೋ ಸೃಷ್ಟಿಸಿದ ವದಂತಿಗಳಿಗೆ ಕಿವಿಗೊಡಬಾರದು ಎಂದರು.

### ಸ್ತ್ರೀಶಕ್ತಿ ಸಂಘಗಳಿಗೆ ಸಬ್ಸಿಡಿ

ಈಗಾಗಲೇ ಸರ್ಕಾರವು ಅಲ್ಪಾವಧಿ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮಧ್ಯಮಾವಧಿ ಸಾಲವನ್ನು ಶೇ.3ರ ಬಡ್ಡಿದರದಲ್ಲಿ ಹಾಗೂ ಸ್ತ್ರೀಶಕ್ತಿ ಸಂಘಗಳಿಗೆ ಸಬ್ಸಿಡಿ ದರದಲ್ಲೇ ನೀಡುತ್ತಿದೆ. ಹೀಗಿರುವಾಗ ಸಾಲ ಮನ್ನಾ ಆಸೆಗೆ ಬಿದ್ದು ಮರುಪಾವತಿ ಮಾಡದೆ ಸುಮ್ಮನಿದ್ದರೆ ಮುಂದೆ ಕಾನೂನು ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಸ್ಟಿಂಗ್ ಆಪರೇಷನ್ ಬಗ್ಗೆ ಚರ್ಚೆ ಸಾಕು, ಸಿದ್ದರಾಮಯ್ಯ ಹೆಸರು ಕೆಡಿಸಬೇಡಿ

• ಉದಯವಾಹಿನಿ, ಮೈಸೂರು:

ಸ್ಟಿಂಗ್ ಆಪರೇಷನ್ ವಿವಾದದ ಬಗ್ಗೆ ಪದೇಪದೇ ಚರ್ಚೆ ನಡೆಸುವುದು ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ದೂರು ದಾಖಲಾಗಿದ್ದು, ಸರ್ಕಾರ ತನಿಖೆ ನಡೆಸುತ್ತಿದೆ. ಹೀಗಾಗಿ, ರಾಜಕೀಯ ಕೆಸರೆರಚಾಟಕ್ಕೆ ಅವಕಾಶ ನೀಡದೆ ತನಿಖೆ ಮುಂದುವರಿಯಲು ಬಿಡಬೇಕು ಎಂದು ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ರೈತರ ಬೆಳೆ ನಷ್ಟ, ಪರಿಹಾರದ ಮೊತ್ತ ಸೇರಿದಂತೆ ಹಲವು ಗಂಭೀರ ಸಮಸ್ಯೆಗಳಿದ್ದರೂ, ಅವುಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಯುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಸ್ಟಿಂಗ್ ಆಪರೇಷನ್ ವಿವಾದವನ್ನು ಮುಂದುವರಿಸುವ ಮೂಲಕ ಸಿದ್ದರಾಮಯ್ಯ ಅವರ ಹೆಸರಿಗೆ ಧಕ್ಕೆ ತರಬಾರದು ಎಂದೂ ಅಭಿಪ್ರಾಯಪಟ್ಟರು.


ಉದಯವಾಹಿನಿ ಚಿತ್ರ

ಸ್ಟಿಂಗ್ ಆಪರೇಷನ್ ವಿವಾದ ಸಂಬಂಧ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಂಬಂಧ ದೂರು ದಾಖಲಿಸಿದ್ದು, ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ತನಿಖೆಗೆ ಆಗ್ರಹಿಸಿದ್ದಾರೆ. ಸರ್ಕಾರ ಈಗಾಗಲೇ ಈ ಪ್ರಕರಣದ ಕುರಿತು ತನಿಖೆ ನಡೆಸುತ್ತಿದೆ. ಹೀಗಾಗಿ, ಮತ್ತಷ್ಟು ರಾಜಕೀಯ ಕೆಸರೆರಚಾಟಕ್ಕೆ ಅವಕಾಶ ನೀಡದೆ ತನಿಖೆ ಮುಂದುವರಿಯಲು ಬಿಡಬೇಕು ಎಂದು ಹೇಳಿದರು.

ಬೆಳೆ ನಷ್ಟಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿರುವ ಪರಿಹಾರದ ಹಣದಲ್ಲಿ ಕೆಲವು ಬೀಡಿಗಳನ್ನು ಖರೀದಿಸಲೂ ಸಾಧ್ಯವಿಲ್ಲ. ಆದರೂ ಜನರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ಅರ್ಥಪೂರ್ಣ ಚರ್ಚೆಯೇ ನಡೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಎದುರಾಳಿಯಾಗಿದ್ದರೂ, ಈ ವಿವಾದದ ಕುರಿತು ಪದೇಪದೇ ಚರ್ಚಿಸುವ ಮೂಲಕ ಅವರ ಹೆಸರಿಗೆ ಧಕ್ಕೆ ತರಬಾರದು.

> ಈ ವಿಚಾರವನ್ನು ಮತ್ತೆ ಮತ್ತೆ ಚರ್ಚಿಸುವ ಮೂಲಕ ಸಿದ್ದರಾಮಯ್ಯ ಅವರನ್ನು ಮುಜುಗರಕ್ಕೆ ತಳ್ಳಬೇಡಿ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ತನಿಖೆ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

## ಆಯುಧ ಪೂಜೆ ಸಂಭ್ರಮಕ್ಕೆ ಬಂದ ಬೂದುಗುಂಬಳ ರಾಶಿ

• ಉದಯವಾಹಿನಿ, ಹುಳಿಯಾರು:


ಉದಯವಾಹಿನಿ ಚಿತ್ರ

ಆಯುಧ ಪೂಜೆಯ ಸಂಭ್ರಮಕ್ಕೆ ಬೂದುಗುಂಬಳಕ್ಕೆ ಬೇಡಿಕೆ ಇರುವುದರಿಂದ ಪಟ್ಟಣದ ವಿವಿಧೆಡೆ ಬೂದುಕುಂಬಳಕಾಯಿ ರಾಶಿಯೇ ಕಾಣಸಿಗುತ್ತಿದೆ. ಪಟ್ಟಣದ ಬಸ್ ನಿಲ್ದಾಣದ ಸುತ್ತಮುತ್ತ ಐದಾರು ಕಡೆ, ರಾಮಗೋಪಾಲ್ ವೃತ್ತ, ಕನಕದಾಸ ವೃತ್ತ ಹಾಗೂ ಐಬಿ ಮುಂಭಾಗ ಕುಂಬಳಕಾಯಿ ಮಾರಾಟ ಆರಂಭವಾಗಿದೆ. ಸದ್ಯ ಕೆ.ಜಿ.ಗೆ 30ರಂತೆ ಮಾರಾಟವಾಗುತ್ತಿದ್ದು, ಗಾತ್ರಕ್ಕೆ ಅನುಗುಣವಾಗಿ ಒಂದು ಕುಂಬಳಕಾಯಿಗೆ 50ರಿಂದ 100ರ ವರೆಗೆ ದರವಿದೆ. ಪಟ್ಟಣ ಸುತ್ತಲಿನ ಯಳನಡು, ಸೂರಗನಹಳ್ಳಿ, ನಂದಿಹಳ್ಳಿ ಹಾಗೂ ಕಲ್ಲಹಳ್ಳಿ ಭಾಗಗಳಲ್ಲಿ ಬೆಳೆದ ಕುಂಬಳಕಾಯಿಗಳು ಸ್ಥಳೀಯ ಮಾರುಕಟ್ಟೆಗೆ ಬರುತ್ತಿವೆ. ವ್ಯಾಪಾರಿಗಳು ರೈತರಿಂದ ಖರೀದಿಸಿ ತಂದು ಮಾರಾಟ ಮಾಡುತ್ತಿದ್ದರೆ, ಹಬ್ಬದ ಹಿಂದಿನ ದಿನ ಕೆಲವು ರೈತರೇ ನೇರವಾಗಿ ಪಟ್ಟಣಕ್ಕೆ ಬಂದು ಮಾರಾಟ ಮಾಡುವುದು ವಾಡಿಕೆ. ಕಳೆದ ವರ್ಷ ಹಳ್ಳಿಗಳಿಂದ ರೈತರು ಕುಂಬಳಕಾಯಿ ತಂದು ಮಾರಾಟ ಮಾಡಿದ್ದರು. ಪ್ರತಿ ವರ್ಷ ಹಬ್ಬಕ್ಕೆ ನಾಲ್ಕೈದು ದಿನ ಮುಂಚಿತವಾಗಿ ಮಾರುಕಟ್ಟೆಗೆ ಕುಂಬಳಕಾಯಿ ಲಗ್ಗೆ ಇಡುತ್ತವೆ. ಆದರೆ ಈ ಬಾರಿ ಹಬ್ಬಕ್ಕೂ ಮುನ್ನವೇ ಸಾಕಷ್ಟು ಪ್ರಮಾಣದಲ್ಲಿ ಕುಂಬಳಕಾಯಿಗಳು ಬಂದಿಳಿದಿರುವುದು ವ್ಯಾಪಾರಿಗಳಲ್ಲಿ ಬೆಲೆ ಕುಸಿತದ ಆತಂಕ ಮೂಡಿಸಿದೆ.

## ಆನೆ ಸಾವು, ದಂತ ನಾಪತ್ತೆ, ಹುಲಿ ಹತ್ಯೆ ಪ್ರಕರಣ: ಅರಣ್ಯ ಇಲಾಖೆ ವಿರುದ್ಧ ಹೊನ್ನೂರು ಪ್ರಕಾಶ್ ಆಕ್ರೋಶ

• ಉದಯವಾಹಿನಿ, ಬಂಡೀಪುರ:

ಅರಣ್ಯದಲ್ಲಿ ಆನೆ ಸಾವನ್ನಪ್ಪಿರುವುದು, ಆನೆಯ ದಂತ ನಾಪತ್ತೆಯಾಗಿರುವುದು ಹಾಗೂ ಹುಲಿಯನ್ನು ಉರುಳು ಹಾಕಿ ಹತ್ಯೆ ಮಾಡಿರುವ ಗಂಭೀರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಮೂಹಿಕ ನಾಯಕತ್ವ ರೈತ ಸಂಘದ ಹೊನ್ನೂರು ಪ್ರಕಾಶ್ ಅರಣ್ಯ ಇಲಾಖೆ ವಿರುದ್ಧ ಕೆಂಡಾಮಂಡಲರಾಗಿದ್ದಾರೆ.

ಅರಣ್ಯದಲ್ಲಿ ಇಂತಹ ಘಟನೆಗಳು ನಡೆದಿರುವುದು ಇಲಾಖೆಯ ಕಾರ್ಯವೈಖರಿ ಹಾಗೂ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯ ಬಗ್ಗೆ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಆರೋಪಿಸಿರುವ ಅವರು, ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಅಲ್ಲದೆ, ಡಿಸಿಎಫ್ ಸೇರಿದಂತೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಹಾಗೂ ಕರ್ತವ್ಯ ನಿರ್ಲಕ್ಷ್ಯ ತೋರಿದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

**ಅರಣ್ಯದೊಳಗೆ ಗಸ್ತು ನಡೆಯುತ್ತಿಲ್ಲವೇ? :** ಅರಣ್ಯದೊಳಗೆ ದುಷ್ಕರ್ಮಿಗಳು ಸದ್ದಿಲ್ಲದೆ ಉರುಳುಗಳನ್ನು ಹಾಕಿ ವನ್ಯಜೀವಿಗಳನ್ನು ಬಲಿ ಪಡೆಯುತ್ತಿದ್ದರೂ ಅರಣ್ಯ ಇಲಾಖೆ ಸಿಬ್ಬಂದಿ ಏನು ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಮೂಡಿದೆ. ಅರಣ್ಯ ಸಿಬ್ಬಂದಿ ಸಮರ್ಪಕವಾಗಿ ಗಸ್ತು ನಡೆಸುತ್ತಿಲ್ಲ ಎಂಬ ಗಂಭೀರ ಆರೋಪವನ್ನೂ ಹೊನ್ನೂರು ಪ್ರಕಾಶ್ ಮಾಡಿದ್ದಾರೆ.

ರೈತರ ಜಮೀನಿನಲ್ಲಿ ಯಾವುದಾದರೂ ಪ್ರಾಣಿ


ಉದಯವಾಹಿನಿ ಚಿತ್ರ

ಸ್ವಾಭಾವಿಕವಾಗಿ ಸಾವನ್ನಪ್ಪಿದರೂ ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗುತ್ತಾರೆ. ಆದರೆ, ಅರಣ್ಯದೊಳಗೆ ಇಂತಹ ಘೋರ ಘಟನೆಗಳು ನಡೆದಿರುವಾಗ ಇಲಾಖೆಯ ಹೊಣೆಗಾರಿಕೆ ಎಲ್ಲಿ ಹೋಯಿತು ಎಂದು ಅವರು ಪ್ರಶ್ನಿಸಿದ್ದಾರೆ. ಈ ಪ್ರಕರಣಗಳ ನೈತಿಕ ಹೊಣೆ ಹೊತ್ತು ಅರಣ್ಯ ಸಚಿವರು ರಾಜೀನಾಮೆ ನೀಡಬೇಕು. ಸಿಎಫ್, ಸಿಐಎಫ್ ಸೇರಿದಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದವರ ವಿರುದ್ಧ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

**ಸಫಾರಿ ಹೆಸರಿನಲ್ಲಿ ಬೇಟೆಗೆ ಸಂಚು? :** ಸಫಾರಿ ನೆಪದಲ್ಲಿ ಅರಣ್ಯ ಪ್ರವೇಶಿಸುವ ಕೆಲವರು ಕುತಂತ್ರದಿಂದ ಬೇಟೆ ಕಾರ್ಯಾಚರಣೆಗೆ ಇಳಿಯುತ್ತಿದ್ದಾರೆ ಎಂಬ ಅನುಮಾನವನ್ನು ವ್ಯಕ್ತಪಡಿಸಿರುವ ಹೊನ್ನೂರು ಪ್ರಕಾಶ್, ಅರಣ್ಯ ಇಲಾಖೆಯ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಳ್ಳರೊಂದಿಗೆ ನಂಟಿರುವುದೇ ಇಂತಹ ಘಟನೆಗಳಿಗೆ ಕಾರಣವಾಗಿರಬಹುದು ಎಂದು ಆರೋಪಿಸಿದ್ದಾರೆ. ಬಂಡೀಪುರದಲ್ಲಿ ಪರಿಸರ ಪ್ರೇಮಿಗಳೆಂದು

> ಕೂಡಲೇ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಮಾನತುಗೊಳಿಸಿ, ಪೊಲೀಸ್ ತನಿಖೆಗೆ ಒಳಪಡಿಸಬೇಕು. ಇಲ್ಲವಾದಲ್ಲಿ ರೈತ ಸಂಘದ ವತಿಯಿಂದ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. -ಹೊನ್ನೂರು ಪ್ರಕಾಶ್


ಉದಯವಾಹಿನಿ ಚಿತ್ರ

ಗುರುತಿಸಿಕೊಂಡಿರುವ ಕೆಲವರ ರೆಸಾರ್ಟ್ ಸಾಮ್ರಾಜ್ಯವೂ ಇದೆ ಎಂದು ಪ್ರಸ್ತಾಪಿಸಿರುವ ಅವರು, ವನ್ಯಜೀವಿಗಳ ರಕ್ಷಣೆ ವಿಚಾರದಲ್ಲಿ ಅರಣ್ಯ ಇಲಾಖೆಯ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದಾರೆ.

**ಅರಣ್ಯ ಅಧಿಕಾರಿಗಳಿಂದಲೇ ತನಿಖೆ ನಡೆಸುವುದು ಸರಿಯಲ್ಲ :** ವನ್ಯಜೀವಿಗಳ ಸಾವು, ಆನೆಯ ದಂತ ನಾಪತ್ತೆ ಹಾಗೂ ಹುಲಿ ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳನ್ನೇ ತನಿಖಾ ತಂಡದಲ್ಲಿ ನೇಮಿಸಿರುವುದು ಸರಿಯಾದ ಕ್ರಮವಲ್ಲ ಎಂದು ಹೊನ್ನೂರು ಪ್ರಕಾಶ್ ಆಕ್ಷೇಪಿಸಿದ್ದಾರೆ.

ಪ್ರಕರಣದಲ್ಲಿ ಇಲಾಖೆಯ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆಯೂ ಅನುಮಾನಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಅಧಿಕಾರಿಗಳನ್ನು ತನಿಖೆಯಿಂದ ದೂರವಿಟ್ಟು ಪೊಲೀಸ್ ಇಲಾಖೆಯಿಂದ ಸ್ವತಂತ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

## ನಾಡಹಬ್ಬದಲ್ಲಿ ಕೋಲಾರದ ಸೋಮೇಶ್ವರ ದೇಗುಲ ವೈಭವ

• ಉದಯವಾಹಿನಿ, ಕೋಲಾರ:


ಉದಯವಾಹಿನಿ ಚಿತ್ರ



ಈ ಬಾರಿ ಮೈಸೂರು ದಸರೆ ಮೆರವಣಿಗೆಯಲ್ಲಿ ಕೋಲಾರದ ಐತಿಹಾಸಿಕ ಸೋಮೇಶ್ವರ ದೇಗುಲ ಗಮನ ಸೆಳೆಯಲಿದೆ. ಅ.21ರ ಬುಧವಾರ ಮೈಸೂರು ಅರಮನೆಯಿಂದ ಬನ್ನಿಮಂಟಪದವರೆಗೆ ಸಾಗಲಿರುವ ಮೆರವಣಿಗೆಯಲ್ಲಿ ಈ ಸ್ತಬ್ಧಚಿತ್ರವನ್ನು ಜನರು ತುಂಬಿಕೊಳ್ಳಬಹುದು.

2025ರ ದಸರಾ ಮೆರವಣಿಗೆಯಲ್ಲಿ ಕೋಲಾರ ಜಿಲ್ಲೆಯ ಪ್ರಮುಖ ಆಕರ್ಷಣೀಯಗಳಾದ ರೇಷ್ಮೆ, ಹಾಲು ಹಾಗೂ ಮಾವಿನ ಖ್ಯಾತಿಯನ್ನು ಸ್ತಬ್ಧಚಿತ್ರದ ಮೂಲಕ ಸಾರಲಾಗಿತ್ತು. 2024ರಲ್ಲಿ ಕೆಜಿಎಫ್ ತಾಲ್ಲೂಕಿನ ಕಮ್ಮಸಂದ್ರ ಗ್ರಾಮದ ಕೋಟ ಲಿಂಗೇಶ್ವರ ದೇಗುಲದ ಸ್ತಬ್ಧಚಿತ್ರ ಪ್ರದರ್ಶಿಸಲಾಗಿತ್ತು. 2023ರಲ್ಲಿ ಆರಾಧಿಕೊತ್ತನೂರು ಗ್ರಾಮದ ವೀರಗಲ್ಲು ಉದ್ಯಾನದ ಸ್ತಬ್ಧಚಿತ್ರ, ದಸರ ಮೆರವಣಿಗೆಯಲ್ಲಿ ಪಾಲ್ಗೊಂಡಿತ್ತು.

ಕೋಲಾರ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿಯಿಂದ ಸೋಮೇಶ್ವರ ದೇಗುಲದ ಸ್ತಬ್ಧಚಿತ್ರದ ನಿರ್ಮಾಣ ಮಾಡಲಾಗಿದೆ. ಜಿಲ್ಲಾ ಪಂಚಾಯಿತಿ ಸಿಇಒ ಡಾ.ಪ್ರವೀಣ್ ಪಿ.ಬಾಗೇವಾಡಿ ನೇತೃತ್ವ ಮತ್ತು ಕೈಗಾರಿಕೆ ಇಲಾಖೆ ಉಪನಿರ್ದೇಶಕ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ರವಿಚಂದ್ರನ್ ಉಸ್ತುವಾರಿ ವಹಿಸಿದ್ದಾರೆ. ಸ್ತಬ್ಧಚಿತ್ರದ ಅಂತಿಮ ಸಿದ್ಧತೆಯಲ್ಲಿ ಅವರು ತೊಡಗಿದ್ದಾರೆ.

'ವಸರಾ ಮೆರವಣಿಗೆಗೆ ಪ್ರತಿಸಲ 31 ಜಿಲ್ಲೆಗಳನ್ನು ಆಯ್ಕೆ ಮಾಡಲಾಗುತ್ತಿತ್ತು. ಈ ಸಲ 15 ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಅದರಲ್ಲಿ ಕೋಲಾರ ಕೂಡ ಒಂದು. ಇದು ಜಿಲ್ಲೆಗೆ ಸಂದ ಗೌರವ' ಎಂದು ರವಿಚಂದ್ರನ್ ತಿಳಿಸಿದರು.

**ಸೋಮೇಶ್ವರ ದೇಗುಲ ಕುರಿತು:** ಸೋಮೇಶ್ವರ ದೇವಸ್ಥಾನವು ನಗರದ ಕೋಟೆ ಪ್ರದೇಶದಲ್ಲಿದ್ದು, ಐತಿಹಾಸಿಕ ಕೋಲಾರದಲ್ಲಿ ಚೋಳರ ಪ್ರಭಾವವೂ ಬಲವಾಗಿದ್ದರಿಂದ ದೇವಾಲಯದ ನಿರ್ಮಾಣ ಮತ್ತು ವಿಕಾಸದ ವಿವಿಧ ಹಂತಗಳಲ್ಲಿ ಚೋಳ ಹಾಗೂ ವಿಜಯನಗರ ಪರಂಪರೆಯ ಪ್ರಭಾವ ಕಂಡುಬರುತ್ತದೆ. ಇದು 14ನೇ ಶತಮಾನದ ವಿಜಯನಗರ ಕಾಲದ ದ್ರಾವಿಡ ಶೈಲಿಯ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆಯಾಗಿದೆ.

# ತಾಯಿ ಪ್ರೀತಿಯ ದ್ಯೋತಕ ಸೋಮೇಶ್ವರ ದೇವಾಲಯ

### ಐತಿಹಾಸಿಕ ಹಿನ್ನೆಲೆಯ ಈ ಶಿವನ ದೇವಾಲಯವನನ್ನು ಕ್ರಿ.ಶ. 1512ರಲ್ಲಿ ನಾಡಪ್ರಭು ಕೆಂಪೇಗೌಡರು ನಿರ್ಮಿಸಿದರು

• ಉದಯವಾಹಿನಿ, ಮಾಗಡಿ:

ಪಟ್ಟಣದಲ್ಲಿರುವ ನಾಡಪ್ರಭು ಕೆಂಪೇಗೌಡರು ತಮ್ಮ ತಾಯಿಗಾಗಿ 16ನೇ ಶತಮಾನದಲ್ಲಿ ಕಟ್ಟಿಸಿರುವ ಪ್ರಸನ್ನ ಸೋಮೇಶ್ವರ ಸ್ವಾಮಿ ದೇವಸ್ಥಾನವು ಜಿಲ್ಲೆಯ ಪ್ರಮುಖ ಐತಿಹಾಸಿಕ ಪ್ರವಾಸಿ ತಾಣವಾಗಿದೆ.

**1 : ಮಾಂಡವ್ಯ ಮಹರ್ಷಿ ತಪಸು ಮಾಡುತ್ತಿದ್ದರು**
**2 : ನ್ಯಾಯ ತೀರ್ಮಾನ ಮಾಡುತ್ತಿದ್ದ ಮಂಟಪವಿದೆ**
**3 : ಹರಕೆ ಕಟ್ಟ ತಾಯಿಯ ಸೇವೆ ಮಾಡುತ್ತಾರೆ**

ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ನಿರ್ಮಿಸಿರುವ ದೇವಸ್ಥಾನದಲ್ಲಿ ತೀರ್ಥ ಕುಡಿದರೆ ಅಪಮೃತ್ಯು ಶಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಈ ಭಾಗದ ಜನರದ್ದು. ಐತಿಹಾಸಿಕ ಹಿನ್ನೆಲೆಯ ಈ ಶಿವನ ದೇವಾಲಯವನನ್ನು ಕ್ರಿ.ಶ. 1512ರಲ್ಲಿ ನಾಡಪ್ರಭು ಕೆಂಪೇಗೌಡರು ನಿರ್ಮಿಸಿದರು. ಮುಮ್ಮಡಿ ಕೆಂಪವೀರಗೌಡರು (ಕ್ರಿ.ಶ. 1712) ದೇವಾಲಯವನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರು. ಎತ್ತರ ಪ್ರದೇಶದಲ್ಲಿರುವ ಈ ದೇವಾಲಯದ ಆವರಣದಲ್ಲಿ ನಿಂತು ಕೆಳಕ್ಕೆ ಕಣ್ಣು ಹಾಯಿಸಿದರೆ ಇಡೀ ಮಾಗಡಿ ಪಟ್ಟಣ ಕಾಣುತ್ತದೆ. ಹಿಂದೆ ಈ ಪ್ರದೇಶದಲ್ಲಿ ಮಾಂಡವ್ಯ ಮಹರ್ಷಿ ತಪಸ್ಸು ಮಾಡುತ್ತಿದ್ದರು.

ಅದೇ ಕಾರಣಕ್ಕೆ ಈ ಸ್ಥಳವನ್ನು ಮಾಂಡವ್ಯ ಕುಟಿ ಎಂದು ಕರೆಯಲಾಗುತ್ತಿತ್ತು. ಕಾಲಕ್ರಮೇಣ ಮಾಂಡವ್ಯ ಹೆಸರು ಮಾಕುಟಿ, ಮಾಗುಟಿ ಎಂದು ಬದಲಾಗಿ ಇದೀಗ ಮಾಗಡಿ ಎಂದಾಗಿದೆ ಎನ್ನುತ್ತಾರೆ


ಉದಯವಾಹಿನಿ ಚಿತ್ರ

ಈ ಭಾಗದ ಸ್ಥಳೀಯರು.

'ದೇವಾಲಯದ ವಾಸ್ತುಶಿಲ್ಪವು ಹೊಯ್ಸಳ ಮತ್ತು ದ್ರಾವಿಡ ಶೈಲಿಯನ್ನು ಹೊಂದಿದೆ. ದೇವಾಲಯದ ಕಂಬಗಳ ಮೇಲೆ ನೃತ್ಯ ಮಾಡುವ ಹೆಣ್ಣು ಮಕ್ಕಳು, ಸೈನಿಕರು, ಸಿಂಹಗಳು (ಯಾಳಿ ಕಂಬಗಳು) ಮತ್ತು ವಿವಿಧ ಪ್ರಾಣಿ ಪಕ್ಷಿಗಳ ಸುಂದರವಾದ ಕೆತ್ತನೆಗಳಿವೆ. ಮುಖ್ಯ ಗರ್ಭಗುಡಿ ಬಳಿ ಪಾರ್ವತಿ ದೇವಿ (ಭ್ರಮರಾಂಬಿಕಾ) ಹಾಗೂ ಸತ್ಯನಾರಾಯ ಸ್ವಾಮಿ ದೇವಾಲಯವಿದೆ.

'ದೇವಾಲಯದಲ್ಲಿರುವ ಭ್ರಮರಾಂಬಿಕೆಗೆ ಭಕ್ತಿಯಿಂದ ಪೂಜೆ ಸಲ್ಲಿಸಿ ಅಮ್ಮನವರ ಸೇವೆ ಮಾಡಿದರೆ, ಮಕ್ಕಳಾಗದವರಿಗೆ ಸಂತಾನ ಭಾಗ್ಯ ಸಿಗುತ್ತದೆ ಎಂಬ ನಂಬಿಕೆ ಈ ಭಾಗದ ಭಕ್ತರದ್ದು ಹಾಗಾಗಿ ಮದುವೆಯಾದ ಹೆಣ್ಣು ಮಕ್ಕಳು ದೇವಾಲಯಕ್ಕೆ ಬಂದು ಹರಕೆ ಕಟ್ಟ ತಾಯಿಯ ಸೇವೆ ಮಾಡುತ್ತಾರೆ. ರಥೋತ್ಸವ ನಡೆಯುವಾಗಲೂ

> ಪೂರಕವಾಗಿ ದೊಡ್ಡದಾದ ಶಿವನ ವಿಗ್ರಹವನ್ನು ದೇವಾಲಯದ ಹಿಂಭಾಗದಲ್ಲಿ ನಿರ್ಮಾಣ ಮಾಡುವ ಆಲೋಚನೆಯನ್ನು ಇಟ್ಟುಕೊಂಡಿದ್ದಾರೆ. ದೇವಾಲಯಕ್ಕೆ ಮೂಲಸೌಲಭ್ಯಗಳನ್ನು ಒದಗಿಸಿ ಈ ಪ್ರವಾಸಿ ತಾಣವನ್ನು ಮತ್ತಷ್ಟು ಆಕರ್ಷಣೀಯವಾಗಿ ಮಾಡುವುದಾಗಿ ಭರವಸೆ ನೀಡಿದ್ದಾರೆ. -ಬಾಲಕೃಷ್ಣ

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬರುತ್ತಾರೆ' ಎಂದು ದೇವಸ್ಥಾನದ ಪ್ರಧಾನ ಅರ್ಚಕರಾದ ಕಿರಣ್ ದೀಕ್ಷಿತ್ ತಿಳಿಸಿದರು. ದೇವಸ್ಥಾನದ ಹಿಂಭಾಗದಲ್ಲಿ ಚಕ್ರಬಸವ ಮಂಟಪವಿದೆ. ಬಂಡೆಯ ಮೇಲೆ ಕೆತ್ತಲಾಗಿರುವ ನಂದಿ ವಿಗ್ರಹದ ಸ್ಥಳವು ಆಕರ್ಷಣೀಯ ಕೇಂದ್ರವಾಗಿದೆ. ಇಲ್ಲಿನ ಬಂಡೆ ಮೇಲೆ ನಿಂತು ಮಾಗಡಿ ಸುತ್ತಮುತ್ತಲಿನ ಪ್ರದೇಶಗಳನ್ನು ನೋಡುವುದೇ ಚಂದ. ಅದರಲ್ಲೂ ಬೆಳಗ್ಗಿನ ಸೂರ್ಯೋದಯ

> ದೇವಸ್ಥಾನದಲ್ಲಿ ಕೆಂಪೇಗೌಡರೇ ನ್ಯಾಯ ತೀರ್ಮಾನ ಮಾಡುತ್ತಿದ್ದ ಮಂಟಪವಿದೆ. ದೇವಾಲಯದ ಆವರಣದೊಳದರೆ ಅವರೇ ನೆಟ್ಟಿದ್ದ ಬಿಲ್ವಪತ್ರೆ ಮರವನ್ನು ಈಗಲೂ ಕಾಣಬಹುದು, ದೇವಸ್ಥಾನದ ಹಿಂಭಾಗದಲ್ಲಿ ಸುರಂಗ ಮಾರ್ಗವೂ ಇದ್ದು ಕೆಂಪೇಗೌಡರು ಮಾರುವೇಷದಲ್ಲಿರುವ ಚಿತ್ರ ಇಲ್ಲಿನ ಮತ್ತೊಂದು ವಿಶೇಷವಾಗಿದೆ.
> -ಅರ್ಚಕರಾದ ಕಿರಣ್ ದೀಕ್ಷಿತ್

ಮತ್ತು ಸಂಜೆಯ ಸೂರ್ಯಾಸ್ತವು ರನ್ನ ಮನೋಹರವಾಗಿರಲಿದೆ. ಕೆಂಪೇಗೌಡರ ತಾಯಿ ಅವರು ಕಾಶಿಗೆ ಹೋಗಿ ವಿಶ್ವನಾಥನ ದರ್ಶನ ಪಡೆಯಬೇಕೆಂಬ ಹಂಬಲ ವ್ಯಕ್ತಪಡಿಸುತ್ತಾರೆ. ಆದರೆ, ಅವರಿಗೆ ವಯಸ್ಸಾದ ಕಾರಣ ಕಾಶಿಗೆ ಪ್ರಯಾಣ ಬೆಳೆಸುವುದು ಅಸಾಧ್ಯ ಎಂದು ಅರಿತ ಕೆಂಪೇಗೌಡರು, ತಾಯಿಗಾಗಿ ಕಾಶಿಯಿಂದಲೇ ಸಾಲಿಗ್ರಾಮ ಶಿಲೆಯಲ್ಲಿ ಮಾಡಿದ ಪ್ರಸನ್ನ ಸೋಮೇಶ್ವರ ವಿಗ್ರಹವನ್ನು ತರಿಸಿ ಇಲ್ಲಿ ಪ್ರತಿಷ್ಠಾಪನೆ ಮಾಡಿರುವುದು ವಿಶೇಷ. ಕೆಂಪೇಗೌಡರಿಗೆ ತಮ್ಮ ತಾಯಿ ಮಲಿದ್ದ ಆಗಾಧವಾದ ಪ್ರೀತಿಯ ದ್ಯೋತಕವಾಗಿಯೂ ಈ ದೇವಾಲಯವನ್ನು ಕಾಣಬಹುದು.

ಅಪಮೃತ್ಯು ಶಾಪ ಇರುವವರು ದೇವಾಲಯಕ್ಕೆ ಭೇಟಿ ನೀಡಿ ದೇವಸ್ಥಾನದ ತೀರ್ಥ ಕುಡಿದರೆ ಅಪಮೃತ್ಯು ಶಾಪ ವಿಮೋಚನೆಯಾಗುತ್ತದೆ ಎಂಬ ನಂಬಿಕೆ ಇಲ್ಲಿಯದ್ದು. ದೇವಾಲಯದಲ್ಲಿ ಪ್ರತಿದಿನವೂ ವಿಶೇಷ ಪೂಜೆ ಮತ್ತು ಆರಾಧನೆ ನಡೆಯುತ್ತದೆ. ಪ್ರತಿ ವರ್ಷ ರಥಸಪ್ತಮಿ ದಿನದಂದು ಬ್ರಹ್ಮ ರಥೋತ್ಸವ ನಡೆಯಲಿದೆ.

## ಮಿನಿ ನ್ಯೂಸ್

### ಅಕ್ರಮ ಕೇರಳ ಲಾಟರಿ ಮಾರಾಟ: ವ್ಯಕ್ತಿ ಬಂಧನ

• ಉದಯವಾಹಿನಿ, ಗುಂಡ್ಲುಪೇಟೆ:


ಉದಯವಾಹಿನಿ ಚಿತ್ರ

ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಸಮೀಪ ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬರನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿ, ರೂ 1.68 ಲಕ್ಷ ಮೌಲ್ಯದ 3,360 ಲಾಟರಿ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಪಟ್ಟಣದ 6ನೇ ವಾರ್ಡ್ ಸಂತೇಮಾಳ ನಿವಾಸಿ ಜಮೀರ್ ಪಾಷಾ (49) ಬಂಧಿತ ಆರೋಪಿ. ಸಾರ್ವಜನಿಕ ಸ್ಥಳದಲ್ಲಿ ಕೇರಳ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಈ ವೇಳೆ ಆತನ ಬಳಿಯಿದ್ದ ಒಟ್ಟು 1,68,000 ಮೌಲ್ಯದ 3,360 ಲಾಟರಿ ಟಿಕೆಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಬ್ ಇನ್ಸ್‌ಪೆಕ್ಟರ್ ಎಚ್.ವಿ. ಸ್ವಾಮಿ ಅವರ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

### ಮಳೆಗೆ ಬಾಯ್ದೆರೆದ ಗುಂಡಿ: ವಾಹನ ಸವಾರರು, ಪಾದಚಾರಿಗಳಿಗೆ ಪ್ರಯಾಸ

• ಉದಯವಾಹಿನಿ, ರಾಮನಗರ:

ಇತ್ತೀಚೆಗೆ ಸುರಿದ ಮಳೆಗೆ ನಗರದ ವಿವಿಧ ರಸ್ತೆಗಳಲ್ಲಿ ಗುಂಡಿಗಳು ಬಾಯ್ದೆರೆದಿವೆ. ಮುಂಗಾರು ಮಳೆ ಅವಧಿ ಮುಗಿದು ಹಿಂಗಾರು ಅವಧಿ ಶುರುವಾಗಿರುವ ಬೆನ್ನಲ್ಲೇ, ಅಲ್ಲಲ್ಲಿ ನಿರ್ಮಾಣವಾಗಿರುವ ಗುಂಡಿಗಳು ಅಪಾಯ ಆಹ್ವಾನಿಸುತ್ತಿವೆ. ಇದರಿಂದಾಗಿ ವಾಹನ ಸವಾರರು ಮತ್ತು ಪಾದಚಾರಿಗಳ ಓಡಾಟಕ್ಕೆ ಪ್ರಯಾಸವಾಗಿದೆ.

ನಗರಸಭೆ ಕಚೇರಿ ಇರುವ ರೈಲು ನಿಲ್ದಾಣ ರಸ್ತೆ, ಜೂನಿಯರ್ ಕಾಲೇಜು ರಸ್ತೆ, ಮುಖ್ಯರಸ್ತೆ, ವಿವೇಕಾನಂದನಗರ, ದ್ಯಾವರಸೇಗೌಡನದೊಡ್ಡಿ ರಸ್ತೆ, ಎಂ.ಜಿ. ರಸ್ತೆ, ಶ್ರೀರಾಮ ಟಾಕೀಸ್ ರಸ್ತೆ, ಕೋರ್ಟ್ ರಸ್ತೆ, ಹಳೆ ಬಸ್ ನಿಲ್ದಾಣ ವೃತ್ತ, ಕೈಗಾರಿಕಾ ಪ್ರದೇಶದ ರಸ್ತೆ ಸೇರಿದಂತೆ ನಗರದ ಹಲವು ರಸ್ತೆಗಳು ಗುಂಡಿಗಳಿಂದ ಮುಕ್ತವಾಗಿಲ್ಲ. ಮುಂಗಾರು ಮಳೆ ಆರಂಭಕ್ಕೆ ಮುಂಚೆ ನಗರದ ರಸ್ತೆಗಳ ಗುಂಡಿಗಳಿಗೆ ನಗರಸಭೆಯು ಸಿಮೆಂಟ್ ವೆಟ್‌ಮಿಕ್ಸ್ ಹಾಕಿ ಮುಚ್ಚಿತ್ತು. ಆದರೆ, ಈ ಬಾರಿ ಕಣ್ಣಾಮುಚ್ಚಾಲೆ ಆಟವಾಡಿದ ಮಳೆರಾಯ, ಮುಂಗಾರಿಗಿಂತ ಹೆಚ್ಚಾಗಿ ಹಿಂಗಾರು ಅವಧಿಯಲ್ಲೇ ಹೆಚ್ಚು ಕೃಪೆ ತೋರಿದ. ಇದರಿಂದಾಗಿ ವೆಟ್‌ಮಿಕ್ಸ್ ಮರೆಯಾಗಿ ಗುಂಡಿಗಳು ಬಾಯ್ದೆರೆದಿವೆ. ಅಪಾಯಕಾರಿ: 'ನಗರದ ವಿವೇಕಾನಂದ ನಗರ ಮುಖ್ಯರಸ್ತೆಯಲ್ಲಿ ಶಾಲಾ ವಾಹನಗಳು ಸೇರಿದಂತೆ ಹೆಚ್ಚಿನ ವಾಹನಗಳು ಸಂಚರಿಸುತ್ತವೆ. ಈ ರಸ್ತೆಯ ಎರಡೂರು ಕಡೆ ಇರುವ ಗುಂಡಿಗಳು ಆಳವಾಗಿದ್ದು, ವಾಹನ ಸವಾರರಿಗೆ ದುಃಸ್ವಪ್ನವಾಗಿವೆ' ಎಂದು ಸ್ಥಳೀಯ ನಿವಾಸಿ ಸುರೇಶ್ ಹೇಳಿದರು. 'ಈ ರಸ್ತೆಯಲ್ಲಿ ಓಡಾಡುವ ದ್ವಿಚಕ್ರ ವಾಹನ ಸವಾರರು ಅಪ್ಪಿತಪ್ಪಿ ಈ ಗುಂಡಿಗಳಿಗೆ ವಾಹನ ಇಳಿಸಿದರೆ ಬೀಳುವುದಂತು ಗ್ಯಾರಂಟಿ. ಆದಾಗ್ಯ ಗುಂಡಿ ತಪ್ಪಿಸಲು ಹೋಗಿ ಬಿದ್ದವರಿಗೆ ಲೆಕ್ಕವಿಲ್ಲ. ಗುಂಡಿಗೆ ಚಕ್ರ ಇಳಿದರೆ ವಾಹನಕ್ಕೂ ಹಾನಿಯಾಗುತ್ತದೆ' ಎಂದು ಪರಿಸ್ಥಿತಿ ಬಿಚ್ಚಿಟ್ಟರು.

### ತುರ್ತು ಸಂದರ್ಭದಲ್ಲಿ ರೋಗಿಗಳ ಅಲೆದಾಟ: ತಿಪಟೂರು ಆಸ್ಪತ್ರೆಗೆ ಬೇಕಿದೆ ಚಿಕಿತ್ಸೆ

• ಉದಯವಾಹಿನಿ, ತಿಪಟೂರು:

ನಗರದ ಸಾರ್ವಜನಿಕ ಆಸ್ಪತ್ರೆ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿದ್ದು, ರೋಗಿಗಳು ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ತಾಲ್ಲೂಕು ಆಸ್ಪತ್ರೆಗೆ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಹೊಸದುರ್ಗ, ಅರಸೀಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನಿಂದಲೂ ಜನರು ಬರುತ್ತಾರೆ. ಆದರೆ, ಇಲ್ಲಿ ವೈದ್ಯರ ಕೊರತೆ ಇರುವ ಕಾರಣ ಸಮರ್ಪಕ ಚಿಕಿತ್ಸೆ ಸಿಗದೇ ತೊಂದರೆ ಅನುಭವಿಸುವಂತಾಗಿದೆ.

ಅಪಘಾತ, ಹೆರಿಗೆ, ಹೃದಯಾಘಾತ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ರೋಗಿಗಳಿಗೆ ಇಲ್ಲಿ ಅಗತ್ಯ ಚಿಕಿತ್ಸೆ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಆಸ್ಪತ್ರೆ ಸಿಬ್ಬಂದಿ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ, ತುಮಕೂರು, ಬೆಂಗಳೂರಿಗೆ ಹೋಗುವಂತೆ ಸೂಚಿಸುತ್ತಿದ್ದಾರೆ ಎನ್ನುವುದು ಸಾರ್ವಜನಿಕರ ಆರೋಪ. ಹೈರಿಸ್ಕ್ ಪ್ರೆಗ್ನೆನ್ಸಿ ಪ್ರಕರಣಗಳ ನಿರ್ವಹಣೆಗೆ ಇಲ್ಲಿ ತಜ್ಞರು ಇಲ್ಲ. ಹೆರಿಗೆ ನಂತರ ನವಜಾತ ಶಿಶುಗಳ ಆರೈಕೆಗೆ ಅಗತ್ಯವಿರುವ ಎನ್‌ಐಸಿಯು ಕೂಡ ಇಲ್ಲ. ತಾಯಿ- ಮಗುವಿನ ಆರೋಗ್ಯ ರಕ್ಷಣೆಗೆ ಅಗತ್ಯವಿರುವ ಸೌಲಭ್ಯ ಕಲ್ಪಿಸುವಂತೆ ಗ್ರಾಮೀಣ ಪ್ರದೇಶದ ಮಹಿಳೆಯರು ಆಗ್ರಹಿಸಿದ್ದಾರೆ.

ಹೃದಯಾಘಾತ, ಜೇನುನೊಣ ಅಥವಾ ವಿಷಜಂತುಗಳ ಕಡಿತ ಪ್ರಕರಣಗಳು ಇಲ್ಲಿಗೆ ಹೆಚ್ಚು ಬರುತ್ತವೆ. ಇಂತಹ ಪ್ರಕರಣಗಳ ತುರ್ತು ಚಿಕಿತ್ಸೆ ಸೌಲಭ್ಯ ಕೂಡ ಇಲ್ಲಿ ಇಲ್ಲವಾಗಿದೆ. ತುರ್ತು ಸಂದರ್ಭದಲ್ಲಿ ಬೇರೆ ಆಸ್ಪತ್ರೆಗೆ ಕರೆದೊಯ್ಯಲು ಅಂಬುಲೆನ್ಸ್ ಸೌಲಭ್ಯ ಕೂಡ ಇಲ್ಲ. ರೋಗಿಗಳನ್ನು ಪರೀಕ್ಷಿಸಿದ ಬಳಿಕ ವೈದ್ಯರು ಬರೆಯುವ ಮಾತ್ರೆ, ಔಷಧಗಳು ಕೂಡ ಆಸ್ಪತ್ರೆಯಲ್ಲಿ ಉಚಿತವಾಗಿ ಸಿಗುತ್ತಿಲ್ಲ. ಖಾಸಗಿ ಮೆಡಿಕಲ್ ಸ್ಟೋರ್‌ಗಳಲ್ಲಿ ಸಿಗುವಂತಹ ಮಾತ್ರೆಗಳನ್ನಷ್ಟೇ ವೈದ್ಯರು ಬರೆದುಕೊಡುತ್ತಾರೆ ಎಂದು ರೋಗಿಗಳು ದೂರುತ್ತಾರೆ. ರಕ್ತ ಪರೀಕ್ಷೆ ಮಾಡಿಸಲು ಸಾವಿರಾರು ರೂಪಾಯಿ ಖರ್ಚು ಮಾಡಬೇಕಿದೆ. ಹೆರಿಗೆ, ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ವೈದ್ಯಕೀಯ ಸೇವೆ ಹೆಸರಿನಲ್ಲಿ ರೋಗಿಗಳ ಸಂಬಂಧಿಕರಿಂದ ಸಿಬ್ಬಂದಿ ಹಣ ಕೀಳುತ್ತಾರೆ ಎಂಬ ಆರೋಪ ಕೂಡ ಇದೆ.

### ಮಾಹಿತಿ ಕಲೆ ಹಾಕಿದ ಗುಹನಾಥನ್ ನರೇಂದರ್ ನೇತೃತ್ವದ ಸಮಿತಿ

• ಉದಯವಾಹಿನಿ, ಬಿಡದಿ :

ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿ ದಂತೆ ಸರ್ಕಾರ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಗುಹನಾಥನ್ ನರೇಂದರ್ ನೇತೃತ್ವದ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಪರಿಶೀಲನಾ ಸಮಿತಿ ಯೋಜನಾ ಪ್ರದೇಶದ ಬೈರಮಂಗಲ ಸೇರಿದಂತೆ ಮೂರು ಗ್ರಾಮಗಳಿಗೆ ಭೇಟಿ ನೀಡಿತು. ನಿರ್ದಿಷ್ಟ ಸ್ಥಳಗಳಿಗೆ ತೆರಳಿ ಮಾಹಿತಿ ಕಲೆ ಹಾಕಿತು. ಮೊದಲಿಗೆ ಜಿಲ್ಲಾಧಿಕಾರಿ ಕಚೇರಿಗೆ ಬಂದ ಸಮಿತಿ, ನಂತರ ಬೈರಮಂಗಲ ಕೆರೆ ಹಾದು ಹೋಗುವ ವೃಷಭಾವತಿ ನದಿಯ ಕಲುಷಿತ ನೀರು ಹಾಗೂ ಸುತ್ತಲಿನ ಪ್ರದೇಶ ವೀಕ್ಷಿಸಿತು. ಅಲ್ಲಿಂದ ಬೈರಮಂಗಲದ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಲಿನ ಡೇರಿ, ಅಂಗನ ವಾಡಿಗೆ ಭೇಟಿ ನೀಡಿ ಕೆಲ ಮಾಹಿತಿ ಗಳನ್ನು ಸಂಗ್ರಹಿಸಿತು. ಬನ್ನಿಗಿರಿ ಕೆರೆ ಪ್ರದೇಶ ವೀಕ್ಷಿಸಿ, ಕಂಚುಗಾರನಹಳ್ಳಿಗೆ ತೆರಳಿತು. ಆಸ್ಪತ್ರೆಯಲ್ಲಿ ಏನೇನು ಸೌಲಭ್ಯಗಳಿವೆ ನಿತ್ಯ ಎಷ್ಟು ರೋಗಿಗಳು ಬರುತ್ತಾರೆ ಎಂದು ಮಾಹಿತಿ ಪಡೆದ ಸಮಿತಿ, ಅಲ್ಲಿಂದ ಡೇರಿಗೆ ಬಂದು ನಿತ್ಯ ಎಷ್ಟು ಮಂದಿ ಹಾಲು ಹಾಕುತ್ತಾರೆ? ಎಷ್ಟು ಲೀಟರ್ ಸಂಗ್ರಹವಾಗುತ್ತದೆ ಎಂಬಮಾಹಿತಿ ಸಂಗ್ರಹಿಸಿತು. ಬನ್ನಿಗಿರಿ ಗ್ರಾಮದ ಕೆರೆ ವೀಕ್ಷಿಸಿ, ಕೆರೆ ಆವರಿಸಿಕೊಂಡಿರುವ ಕಳೆ ಕುರಿತು ಅಸಮಾಧಾನ ವ್ಯಕ್ತಪಡಿಸಿತು. ಕೃಷಿಗೆ ಆಸರೆಯಾಗಿರುವ ಕೆರೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು.

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 19 ಅಕ್ಟೋಬರ್ 2026


# ತಾಪಂ.ಜಿಪಂ.ಚುನಾವಣಾ ಮೀಸಲಾತಿ ಪಟ್ಟಿ ಅವೈಜ್ಞಾನಿಕ: ಬಿಜೆಪಿ ಮುಖಂಡ ಗೋಪಾಲರಾವ ಕಟ್ಟಿಮನಿ ಕಿಡಿ

• ಉದಯವಾಹಿನಿ,ಚಿಂಚೋಳಿ

ರಾಜಕೀಯವಾಗಿ ಎರಡನೇ ಹಂತದ ಲೀಡರ್ ಬೆಳೆಸಬಾರದೆಂಬ ಉದ್ದೇಶದಿಂದ ಜಿಪಂ.ತಾಪಂ.ಮೀಸಲಾತಿ ಅವೈಜ್ಞಾನಿಕವಾಗಿ ಕಾಂಗ್ರೆಸ್ ಪಕ್ಷ ಮಾಡಿದೆ ಎಂದು ಬಿಜೆಪಿ ಮುಖಂಡ ಗೋಪಾಲರಾವ ಕಟ್ಟಿಮನಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು,ಐನೋಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರವೂ ಒಮ್ಮೆಯೂ ಕೂಡ ಪರಿಶೀಷ್ಟ ಜಾತಿ ಮೀಸಲಾತಿ ಮಾಡಿಲ್ಲ ಅತಿಹೆಚ್ಚು16ಸಾವಿರ ಜನಸಂಖ್ಯೆ ರೈಟ್ ಮತ್ತು ಲೇಫ್ಟ್ ಜನಾಂಗವುಳ್ಳ ಕ್ಷೇತ್ರದಲ್ಲಿ ಹಾಗೂ ಹಿಂದುಳಿದ ವರ್ಗ,ಇತರೆ ಸಮುದಾಯ ಜನಸಂಖ್ಯೆ ಹೆಚ್ಚಿದರೂ ಬೆರಳಣಿಕೆಯಷ್ಟು ಪರಿಶಿಷ್ಟ ಪಂಗಡ ಸಮುದಾಯವಿದ್ದು ಅದೆ ಮೀಸಲಾತಿ ಮಾಡಿದ್ದು ಖಂಡನೀಯ,20ವರ್ಷದ ಹಿಂದೆಯೂ ಕೂಡ ಎಸ್ಟಿ ಮೀಸಲಾತಿ ಮಾಡಲಾಗಿತ್ತು.

ಚಿಂಚೋಳಿ ತಾಲ್ಲೂಕಿನಲ್ಲಿ ಪರಿಶೀಷ್ಟ ಜಾತಿಯ ಮತದಾರರು ಹೆಚ್ಚಿನ ಜನಸಂಖ್ಯೆವಿದ್ದರೂ ಕೂಡ ಪರಿಶೀಷ್ಟ ಜಾತಿಗೆ ಒಂದೆ ಒಂದು ಕ್ಷೇತ್ರ ಕುಂಚಾವರಂ ಮಾಡಿದ್ದು ಅನ್ಯಾಯವಾಗಿದೆ,ಇನ್ನೊಂದ್ದು ನಿಡಗುಂದಾ ಎಸ್ಸಿ ಮಹಿಳಾ ಮೀಸಲಾತಿ ಮಾಡಿದ್ದಾರೆ,ಸುಲೇಪೇಟ ಸಾಮಾನ್ಯ ಮಹಿಳಾ ಮಾಡಿದರೆ ಚಿಮ್ಮನಚೋಡ ಜಿಪಂ.


ಉದಯವಾಹಿನಿ ಚಿತ್ರ

ಸಾಮಾನ್ಯ ಮೀಸಲಾತಿ ಮಾಡಲಾಗಿದೆ ಇದರಿಂದ ಮುಸ್ಲಿಂ,ಕೋಲಿ ಕಬ್ಬಲಿಗ,ಈಡಿಗಾ ಸಮಾಜಕ್ಕೆ ಅನ್ಯಾಯವಾಗಿದೆ,ಕೋಡ್ಲಿ ಜಿಪಂ.ಬಿಸಿಬಿ ಮಹಿಳಾ ಮೀಸಲಾತಿ ಮಾಡಿ ಲಿಂಗಾಯತ ಸಮಾಜಕ್ಕೂ ಅನ್ಯಾಯ ಮಾಡಿದ್ದಾರೆ,ಒಟ್ಟಾರೆ ಪುರುಷರಿಗೆ ಹಾಗೂ ವಿವಿಧ ಸಮುದಾಯಗಳಿಗೆ ಮೀಸಲಾತಿ ನೀಡದೆ ಕಾಂಗ್ರೆಸ್ ಪಕ್ಷ ಅನ್ಯಾಯ ಮಾಡಿ ಜಿಪಂ.ತಾಪಂ.ಕ್ಷೇತ್ರಗಳು ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲು ಷಡ್ಯಂತ್ರ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ಪಕ್ಷದಲ್ಲಿರುವ ದಲಿತರಿಗೆ ಮತ್ತು ಅಲ್ಪಸಂಖ್ಯಾತರ ರಾಜಕೀಯ ಮುಖಂಡರಿಗೆ ತುಳಿಯುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ,ಒಳಮೀಸಲಾತಿಯನ್ನು ರಾಜ್ಯ ಸರ್ಕಾರ ಘೋಷಣೆ ಮಾಡಿದ 5.5 ಹಾಗೂ 5.5 ಮತ್ತು 4.5ಅದರಂತೆ ಒಳಮೀಸಲಾತಿಯಂತೆ ತಾಪಂ.ಜಿಪಂ.ಮೀಸಲಾತಿ ನೀಡಬೇಕು ಎಂದರು.

ಬಿಜೆಪಿ ಅಲ್ಪಸಂಖ್ಯಾತರ ಘಟಕದ ರಾಜ್ಯ ಉಪಾಧ್ಯಕ್ಷ ಕೆಎಂ ಬಾರಿ ಮಾತನಾಡಿ ಕಾಂಗ್ರೆಸ್ ಪಕ್ಷವು ಜಿಪಂ.ತಾಪಂ.ಚುನಾವಣಾ ಮೀಸಲಾತಿಯಲ್ಲಿ ಮುಸ್ಲಿಂ, ಕುರುಬ, ಕಬ್ಬಲಿಗ,ಈಡಿಗಾ,ಹಡಪದ,ಸೇರಿದಂತೆ ಹಿಂದುಳಿದ ವರ್ಗ ಸೇರಿದಂತೆ ಬಿಸಿಬಿ ಮತ್ತು ದಲಿತ ಸೇರಿ ಎಲ್ಲಾ ಸಮುದಾಯಕ್ಕೆ ಅನ್ಯಾಯ ಮಾಡಿದೆ,ಚಿಂಚೋಳಿಗೆ ಬಿಸಿಎ ಮೀಸಲಾತಿ ನೀಡದೆ ಮುಸ್ಲಿಂ ಸಮಾಜಕ್ಕೆ ದ್ರೋಹ ಬಗೆದಿದೆ ಕಾಂಗ್ರೆಸ್ ಪಕ್ಷಕ್ಕೆ ಮುಸ್ಲಿಂ ಮತಗಳು ಬೇಕು ಮುಸ್ಲಿಂರಿಗೆ ಅಧಿಕಾರ ನೀಡಲು ಹಿಂದೆಟ್ಟು ಹಾಕುತ್ತಿದೆ ಅದದೆ ರೀತಿ ಮುಸ್ಲಿಂ ಸಮಾಜಕ್ಕೆ ಖನೀಜಾ ಫಾತಿಮಾ ಮತ್ತು ರಹೀಮ್ ಖಾನ್ ಅವರಿಗೆ ಸಚಿವ ಕೂಡ ನೀಡದೆ ವಂಚನೆ ಮಾಡಲಾಗುತ್ತಿದೆ ಹಾಗಾಗಿ ಅಲ್ಪಸಂಖ್ಯಾತರು ಹಿಂದುಳಿದ ವರ್ಗದವರು ಎಚ್ಚರಗೊಳ್ಳಬೇಕು ಎಂದರು.

ಭೀಮಶೆಟ್ಟಿ ಮುರುಡಾ,ಮಲ್ಲು ಕೊಡಂಬಲ್,ವಿಜಯರಾಜ್ ಕೊಡಂಪಳ್ಳಿ,ಶಂಕರ ರಾಠೋಡ,ರಂಗಣ್ಣ ಪೂಜಾರಿ,ಅನೇಕರಿದ್ದರು.

# ಕೆಪಿಎಸ್‌ಸಿ ಹಗರಣ ಬಿಜೆಪಿಯ ಕೂಸು: ಡಿ.ಕೆ.ಶಿವಕುಮಾರ್ ಆರೋಪ

## ಪ್ರತಿ ವರ್ಷ ಉದ್ಯೋಗಾವಕಾಶ ಹೆಚ್ಚಿಸುವ ಭರವಸೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಕೊಟ್ಟ ಭರವಸೆಯನ್ನು ಈಡೇರಿಸಿಲ್ಲ

• ಉದಯವಾಹಿನಿ, ಹುಬ್ಬಳ್ಳಿ

'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷಾ ಅಕ್ರಮಗಳು ಬಿಜೆಪಿ ಕೂಸಾಗಿದ್ದು, ಅದರ ಹಿಂದೆ ಅದರ ನಾಯಕರ ಕೈವಾಡವಿದೆ. ಈ ಹಗರಣದ ಕುರಿತು ತನಿಖೆ ನಡೆಸುವಂತೆ ಶಿಫಾರಸು ಮಾಡಿದ್ದು, ಜಾರಿ ನಿರ್ದೇಶನಾಲಯ

1 : ಉದ್ಯೋಗಕ್ಕಾಗಿ ಪರದಾಡುವ ಪರಿಸ್ಥಿತಿ ಇದೆ
2 : ಅಕ್ರಮಗಳ ಕುರಿತು ತನಿಖೆ ನಡೆಯುತ್ತಿದ್ದು
3 : ಕ್ಷೇತ್ರದಲ್ಲಿ ಹಲವು ಅಕ್ರಮಗಳು ನಡೆದಿವೆ

(ಇಡಿ) ತನಿಖೆ ನಡೆಸುತ್ತಿದೆ. ಭಾಗಿಯಾಗಿರುವವರ ಹೆಸರುಗಳು ಒಂದೊಂದಾಗಿ ಹೊರಬರುತ್ತಿವೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ನಗರದ ಬಿವಿಬಿ ತಾಂತ್ರಿಕ ಮಹಾವಿದ್ಯಾಲಯದ ಬಯೋ ಟೆಕ್ನಾಲಜಿ ಸಭಾಂಗಣದಲ್ಲಿ ನಡೆದ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. 'ಕೆಪಿಎಸ್‌ಸಿಯಲ್ಲಿ ನಡೆದ ವಿವಿಧ ಪರೀಕ್ಷೆಗಳಲ್ಲಿನ ಅಕ್ರಮಗಳ ಕುರಿತು ತನಿಖೆ ನಡೆಯುತ್ತಿದ್ದು, ರಾಜ್ಯ ಸರ್ಕಾರವೂ ತನಿಖೆಗೆ ಅಗತ್ಯ ಸಹಕಾರ ನೀಡುತ್ತಿದೆ. ನ್ಯಾಯಸಮ್ಮತ, ಪಾರದರ್ಶಕ ಹಾಗೂ ಅವ್ಯವಹಾರ ರಹಿತ ಪರೀಕ್ಷಾ ವ್ಯವಸ್ಥೆ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ. ಅರ್ಹ ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ದೊರಕಿಸುವುದರ ಜತೆಗೆ ಉದ್ಯೋಗಾವಕಾಶ ಕಲ್ಪಿಸಲು


ಉದಯವಾಹಿನಿ ಚಿತ್ರ

> ಎಸ್‌ಐಆರ್ ಮೂಲಕ ಮತದಾರರ ಹಕ್ಕು ಹತ್ತಿಕ್ಕುವ ಹುನ್ನಾರ ನಡೆಯುತ್ತಿತ್ತು. ಹೋರಾಟ ನಡೆಸಿ ಪ್ರತಿಯೊಬ್ಬರಿಗೂ ಮತದಾರರ ಹಕ್ಕು ದೊರೆಯುವಂತೆ ಮಾಡುತ್ತಿದ್ದೇವೆ
> -ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ

ಸರ್ಕಾರ ಬದ್ಧವಾಗಿದೆ' ಎಂದು ತಿಳಿಸಿದರು.

'ದೇಶದಲ್ಲಿ ಪದವೀಧರರು ಉದ್ಯೋಗಕ್ಕಾಗಿ ಪರದಾಡುವ ಪರಿಸ್ಥಿತಿ ಇದೆ. ಪ್ರತಿ ವರ್ಷ ಉದ್ಯೋಗಾವಕಾಶ ಹೆಚ್ಚಿಸುವ ಭರವಸೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಕೊಟ್ಟ ಭರವಸೆಯನ್ನು ಈಡೇರಿಸಿಲ್ಲ. ಬದಲಾಗಿ, ಅವರ ಆಡಳಿತಾವಧಿಯಲ್ಲಿ ರಾಷ್ಟ್ರಮದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಲವು ಅಕ್ರಮಗಳು ನಡೆದಿವೆ' ಎಂದು ಟೀಕಿಸಿದರು. ರಾಜ್ಯದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ

> ಪಶ್ಚಿಮ ಪದವೀಧರರ ಕ್ಷೇತ್ರ ಕಾಂಗ್ರೆಸ್ ನದ್ದಾಗಿತ್ತು. ಕಾರಣಾಂತರಗಳಿಂದ ಕೈ ತಪ್ಪಿದ್ದು ಈ ಬಾರಿ ಆ ಕ್ಷೇತ್ರ ಮರಳಿ ಪಡೆಯುವ ಯತ್ನ ನಡೆದಿದೆ
> -ಎಚ್.ಕೆ.ಪಾಟೀಲ ಶಾಸಕ

ಉದ್ದೇಶದಿಂದ ಸರ್ಕಾರ 'ಉದ್ಯೋಗ ಸೇತು' ಯೋಜನೆ ಜಾರಿಗೆ ತರಲು ಮುಂದಾಗಿದೆ. ಈ ಯೋಜನೆಗಾಗಿ ಪ್ರತ್ಯೇಕ ವೆಬ್‌ಸೈಟ್ ಸಿದ್ಧಪಡಿಸಲಾಗುತ್ತಿದೆ. ಇದು ಖಾಸಗಿ ಉದ್ಯೋಗ ವಿನಿಮಯ ವೇದಿಕೆಯಾಗಿ ಕಾರ್ಯ ನಿರ್ವಹಿಸಲಿದ್ದು, ಉದ್ಯೋಗ ದಾತರು ಹಾಗೂ ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. ಉದ್ಯೋಗದಾತರು ತಮಗೆ ಅಗತ್ಯವಿರುವ ಅರ್ಹ ಅಭ್ಯರ್ಥಿಗಳನ್ನು ಈ ವೇದಿಕೆಯ ಮೂಲಕ ಗುರುತಿಸಿ ನೇರವಾಗಿ ನೇಮಕ ಮಾಡಿಕೊಳ್ಳಲು

### ಸರ್ಕಾರ ಆರ್ಥಿಕ ನೆರವು ನೀಡಲಿ

'ಬೆಂಗಳೂರು ಹೊರತಾಗಿಯೂ ರಾಜ್ಯದ ಇತರ ನಗರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಬೇಕು. ಖಾಸಗಿ ವಲಯದಲ್ಲಿ ಉದ್ಯೋಗ ಸೃಷ್ಟಿಸುವ ಸಂಸ್ಥೆಗಳಿಗೆ ಸರ್ಕಾರ ಆರ್ಥಿಕ ನೆರವು ನೀಡಲಿದೆ. ಈ ಕುರಿತು ಸರ್ಕಾರದ ನೂರು ದಿನಗಳ ಕಾರ್ಯಕ್ರಮದಲ್ಲಿಯೇ ಘೋಷಣೆ ಮಾಡಲಾಗಿದೆ' ಎಂದು ಹೇಳಿದರು.

ಅವಕಾಶ ಕಲ್ಪಿಸಲಾಗುವುದು' ಎಂದು ವಿವರಿಸಿದರು.

ಸಚಿವ ಸಂತೋಷ ಲಾಡ್ ಮಾತನಾಡಿ, 'ಬಿಜೆಪಿಯು ಕೆಲವು ಮಾಧ್ಯಮಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ದೇಶದ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿದೆ. ಕಳೆದ 12 ವರ್ಷಗಳಿಂದ ದೇಶದ ಆರ್ಥಿಕ ಪ್ರಗತಿಯ ಕುರಿತು ಬಿಜೆಪಿ ಹೆಗ್ಗಳಿಕೆ ವ್ಯಕ್ತಪಡಿಸುತ್ತಿದೆ. ಆದರೆ, ಶಿಕ್ಷಣ ಕ್ಷೇತ್ರದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಹಲವು ಅಕ್ರಮಗಳು ನಡೆದಿದ್ದು, ಇದರಿಂದ ಉದ್ಯೋಗಾಕಾಂಕ್ಷಿಗಳ ಭವಿಷ್ಯಕ್ಕೆ ಧಕ್ಕೆಯಾಗಿರುವ ಕುರಿತು ಎಲ್ಲಿಯೂ ಮಾತನಾಡುತ್ತಿಲ್ಲ' ಎಂದು ಟೀಕಿಸಿದರು. ಸಚಿವರಾದ ಲಕ್ಷ್ಮಣ ಸವದಿ, ಸತೀಶ ಜಾರಕಿಹೊಳಿ, ಮುಖಂಡರಾದ ಎಚ್.ಎಂ.ರೇವಣ್ಣ, ಶ್ರೀನಿವಾಸ ಮಾನೆ, ಎನ್.ಎಚ್.ಕೋನರಡ್ಡಿ, ಪ್ರಸಾದ ಅಬ್ಬಯ್ಯ, ವಿನಯ ಕುಲಕರ್ಣಿ, ನಾಸೀರ್ ಪಠಾಣ, ಬಿ.ಆರ್.ಯಾವಗಲ್ ಹಾಗೂ ಮಹಾಂತೇಶ ಕೌಜಲಗಿ ಉಪಸ್ಥಿತರಿದ್ದರು.

# ಮಕ್ಕಳೇ ದೇಶದ ಸಂಪತ್ತು: ದಸರಾ ಶಿಬಿರದಲ್ಲಿ ರಘುನಾಥ ಗೌಡ

• ಉದಯವಾಹಿನಿ, ಸಿಂಸೆ

'ಮುಂದಿನ ಪ್ರಜೆಗಳಾಗಿರುವ ಮಕ್ಕಳೇ ದೇಶದ ಸಂಪತ್ತು. ದಸರಾ ಶಿಬಿರವನ್ನು ಸಂತೋಷದಿಂದ ಕಳೆಯಿರಿ' ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ರಘುನಾಥ ಗೌಡ ಹೇಳಿದರು. ಅವರು ತಾಲ್ಲೂಕಿನ ಸಿಂಸೆ ಗ್ರಾಮದ ಸೋಷಿಯಲ್ ವೆಲ್‌ಫೇರ್ ಸೊಸೈಟಿಯು ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳ ದಸರಾ ಶಿಬಿರವನ್ನು ಬೋರ್ಡ್‌ನಲ್ಲಿ ಸಂದೇಶ ಬರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ವಾಹನ ಚಾಲನೆ ಮಾಡುವಾಗ ದಾಖಲೆಗಳು ಇರಬೇಕು. ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡಿದರೆ ಪೋಷಕರಿಗೆ 25 ಸಾವಿರದವರೆಗೆ ದಂಡ ವಿಧಿಸಬಹುದು. ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಕಡ್ಡಾಯ. ಹೆಲ್ಮೆಟ್ ಧರಿಸುವುದರಿಂದ ಕತ್ತಿನ ಮೇಲ್ಭಾಗಕ್ಕೆ ಸಂಪೂರ್ಣ ರಕ್ಷಣೆ ದೊರೆಯುತ್ತದೆ ಎಂದರು. ಸಿವಿಲ್ ನ್ಯಾಯಾಧೀಶ, ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಆರ್.ಎಸ್. ಜೀತು ಅವರು, ಪ್ರತಿವರ್ಷ ಬೇಸಿಗೆ ರಜೆ, ದಸರಾ ರಜೆ, ಕ್ರಿಸ್‌ಮಸ್ ರಜೆ ಸಂದರ್ಭ ನಡೆಯುವ ಶಿಬಿರ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯವಾಗುತ್ತದೆ. ಶಿಬಿರದಲ್ಲಿ



ಉದಯವಾಹಿನಿ ಚಿತ್ರ

ಮಕ್ಕಳಿಗೆ ಭಾರತದ ಸಂವಿಧಾನ ಪರಿಚಯಿಸುವ ಕಾರ್ಯಕ್ರಮ ಸೇರಿಸಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಚಂದ್ರಶೇಖರ್ ಅವರು, ಸಂವಿಧಾನದಲ್ಲಿ ಮಕ್ಕಳ ಸಂರಕ್ಷಣೆಗೆ ಹಲವು ಕಾನೂನುಗಳು ಇವೆ. ಮಕ್ಕಳ ಕಡ್ಡಾಯ ಶಿಕ್ಷಣಕ್ಕೆ 2009ರಲ್ಲಿ ಆರ್ ಟಿ.ಇ ಕಾಯ್ದೆ ಬಂದಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಸೋಷಿಯಲ್ ವೆಲ್‌ಫೇರ್ ಸೊಸೈಟಿ ನಿರ್ದೇಶಕ ಫಾದರ್ ವಿಪಿನ್ ಬೇಬಿ ಅವರು, ಮಕ್ಕಳ ಸರ್ವತೋಮುಖ ಬೆಳವಣಿಗಾಗಿ ನಮ್ಮ ಸಂಸ್ಥೆ ದಸರಾ ಶಿಬಿರ ಹಮ್ಮಿಕೊಂಡಿದೆ. ಮಕ್ಕಳು ಉಪಯೋಗ ಪಡೆದುಕೊಳ್ಳಬೇಕು ಎಂದರು.

# ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲಿಸಿ: ಡಿ.ಸಿ

• ಉದಯವಾಹಿನಿ, ಧಾರವಾಡ:

ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆ ಕಾರ್ಯಕ್ಕೆ ನಿಯೋಜಿಸಿರುವ ಸಿಬ್ಬಂದಿ, ಅಧಿಕಾರಿಗಳು ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ ನೀಡಿದರು.

ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆ ಕಾರ್ಯಕ್ಕೆ ನಿಯೋಜನೆಯಾಗಿರುವ ಪಿಆರ್‌ಒ, ಎಪಿಆರ್‌ಒ, ಸೂಕ್ಷ್ಮ ವೀಕ್ಷಕರಿಗೆ ಆಲೂರು ವೆಂಕಟರಾವ್ ಭವನದಲ್ಲಿ ಶನಿವಾರ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಚುನಾವಣೆಯಲ್ಲಿ ಮತ ಪತ್ರ (ಬ್ಯಾಲೆಟ್ ಪೇಪರ್) ಬಳಸಲಾಗುತ್ತದೆ. ಮತಪತ್ರಗಳ ವಿತರಣೆ ಮತ್ತು ನಿರ್ವಹಣೆಯಲ್ಲಿ ಜಾಗರೂಕತೆ ವಹಿಸಬೇಕು. ಮತಪತ್ರಗಳಿಗೆ ಯಾವುದೇ ಕಲೆ ಅಥವಾ ಗುರುತು ತಗುಲದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

23ರಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 4 ಗಂಟೆವರೆಗೆ ಮತದಾನವು ನಡೆಯಲಿದೆ. ಮತದಾನದ ಗೌಪ್ಯತೆಯನ್ನು


ಉದಯವಾಹಿನಿ ಚಿತ್ರ

ಕಾಪಾಡುವುದರ ಜೊತೆಗೆ ಮತದಾರರು ಮತಪತ್ರವನ್ನು ಸರಿಯಾಗಿ ಮಡಚಿ ಮತಪೆಟ್ಟಿಗೆಯಲ್ಲಿ ಹಾಕುವಂತೆ ಸಿಬ್ಬಂದಿ ಗಮನ ಹರಿಸಬೇಕು. ಸಿಬ್ಬಂದಿ ಅಗತ್ಯ ಚುನಾವಣಾ ಸಾಮಗ್ರಿಗಳನ್ನು ಮುಂಚಿತವಾಗಿ ಪರಿಶೀಲಿಸಿಕೊಳ್ಳಬೇಕು. ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸಿ, ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಮಾಸ್ಟರ್ ಟ್ರೈನರ್‌ಗಳಾದ ರಾಘವೇಂದ್ರ ಬಡಿಗೇರ, ಭರತಕುಮಾರ ಚಂದನಕರ್, ಅರುಣ ನವಲೂರ, ಸೋಮು ಸಂತಿ, ನರಸಿಂಹಮೂರ್ತಿ ರಾಜೂರು ಅವರು ಸಿಬ್ಬಂದಿಗೆ ಎರಡನೇ ಹಂತದ ತರಬೇತಿ ನೀಡಿದರು.

# ವಿವಿ ಸಾಗರದ ಬಲ ನಾಲೆ ನೀರು ತಡೆಗೆ ರೈತರಿಂದ ಆಕ್ರೋಶ

• ಉದಯವಾಹಿನಿ, ಚಳ್ಳಕೆರೆ:

ಶಿಡ್ಲಯ್ಯನಕೋಟೆ ಮತ್ತು ನಾರಾಯಣಪುರ ಯೋಜನೆಯ ವಿವಿ ಸಾಗರದ ಬಲದಂಡೆ ನಾಲೆ ನೀರನ್ನು ಗೋಸಿಕೆರೆ, ಚೌಳೂರು ಹಾಗೂ ಪರಶುರಾಂಪುರ ಗ್ರಾಮಗಳ ಕೆರೆಗಳಿಗೆ ಸಮಾನವಾಗಿ ಹಂಚಿಕೆ ಮಾಡಬೇಕು' ಎಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ರೈತರು ಪರಶುರಾಂಪುರದಲ್ಲಿ ಪ್ರತಿಭಟನೆ ನಡೆಸಿದರು. 'ಟಿ.ಎನ್.ಕೋಟೆ ಗ್ರಾಮದ ಬಳಿ ಕೆಲವರು ನಾಲೆಗೆ ಅಡ್ಡಲಾಗಿ ಕಲ್ಲುಗಳು ಮತ್ತು ಫೈಬರ್ ಶೀಟ್‌ಗಳನ್ನು ಅಳವಡಿಸಿ, ನೀರನ್ನು ತಮ್ಮ ಗ್ರಾಮದ ಕೆರೆಗೆ ಮಾತ್ರ ಹರಿಸಿಕೊಳ್ಳುತ್ತಿದ್ದಾರೆ. ಇದರಿಂದ ಗೋಸಿಕೆರೆ, ಚೌಳೂರು ಹಾಗೂ ಪರಶುರಾಂಪುರ ಗ್ರಾಮದ ಹಳೇಕೆರೆ ಮತ್ತು ಹೊಸಕೆರೆಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ.

ಈ ಭಾಗದಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಕುಡಿಯುವ ನೀರಿಗೂ ತೊಂದರೆಯಾಗಿದೆ' ಎಂದು ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು. 'ಸಮಸ್ಯೆಯನ್ನು ಸಚಿವರು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಗಮನಕ್ಕೆ ತಂದರೂ ಕ್ರಮ ಕೈಗೊಂಡಿಲ್ಲ. ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸಬೇಕು. ನಮಗೆ ನ್ಯಾಯ


ಉದಯವಾಹಿನಿ ಚಿತ್ರ

ದೊರೆಯದಿದ್ದರೆ ರಾಜ್ಯಮಟ್ಟದಲ್ಲಿ ಹೋರಾಟ ನಡೆಸಲಾಗುವುದು' ಎಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅರವಿಂದ್ ಕುಲಕರ್ಣಿ ಎಚ್ಚರಿಸಿದರು. 'ಸಮಸ್ಯೆ ಬಗೆಹರಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ, ಬೆಂಗಳೂರು ಚಲೋ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಚೌಳೂರು ಪ್ರಕಾಶ ತಿಳಿಸಿದರು. 'ಚೌಳೂರು ಚೆಕ್‌ಡ್ಯಾಂನಲ್ಲಿ ಪಂಪ್‌ಹೌಸ್ ನಿರ್ಮಿಸಿ ಪೈಪ್‌ಗಳ ಮೂಲಕ ಕೆರೆಗಳಿಗೆ ನೀರು ಹರಿಸಬೇಕು' ಎಂದು ನವೀನ್‌ಗೌಡ ಒತ್ತಾಯಿಸಿದರು. ಬೈಪಾಸ್‌ನ ರೈತ ಭವನದಿಂದ ಆರಂಭವಾದ ರ್ಯಾಲಿ ಮುಖ್ಯ ವೃತ್ತದ ಮೂಲಕ ಸಾಗಿ ಪೊಲೀಸ್ ಠಾಣೆಗೆ ತಲುಪಿತು.

# ದಸರಾ ಹಬ್ಬ ವಹಿವಾಟು ಹೆಚ್ಚುವ ನಿರೀಕ್ಷೆಯಲ್ಲಿ ವ್ಯಾಪಾರಿಗಳು

• ಉದಯವಾಹಿನಿ, ದಾವಣಗೆರೆ:

ದಸರಾ ಹಬ್ಬದ ಹಿನ್ನೆಲೆಯಲ್ಲಿ ಹೂವು, ಹಣ್ಣು ಹಾಗೂ ತರಕಾರಿ ವ್ಯಾಪಾರಿಗಳು ಉತ್ತಮ ವ್ಯಾಪಾರದ ನಿರೀಕ್ಷೆಯಲ್ಲಿದ್ದಾರೆ. ಅಕ್ಟೋಬರ್ 20ರಂದು ಆಯುಧ, ಪೂಜೆ, 21ರಂದು ವಿಜಯದಶಮಿ ಇದ್ದು, ಭಾನುವಾರದಿಂದ ಉತ್ತಮ ವಹಿವಾಟು ಶುರುವಾಗಲಿದೆ ಎಂಬ ಆಶಾಭಾವದಲ್ಲಿ ವ್ಯಾಪಾರಿಗಳು ಅಗತ್ಯ ಸಿದ್ಧತೆ ನಡೆಸಿದ್ದಾರೆ.

'ಜಿಲ್ಲೆಯಲ್ಲಿ ತಿಂಗಳು ಕಾಲ ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಹಣ್ಣು ಹಾಗೂ ಹೂವಿನ ವ್ಯಾಪಾರ ಜೋರಾಗಿದ್ದರೂ, ತರಕಾರಿ ವ್ಯಾಪಾರ ಮಾತ್ರ ಹೆಚ್ಚಾಗಿ ನಡೆದಿರಲಿಲ್ಲ. ಆದರೆ, ದಸರಾ ಹಬ್ಬದಲ್ಲಿ ತರಕಾರಿ ವ್ಯಾಪಾರವೂ ಹೆಚ್ಚಾಗಲಿದೆ' ಎಂದು ಕೆ.ಆರ್.ಮಾರುಕಟ್ಟೆಯ ತರಕಾರಿ ವ್ಯಾಪಾರಿ ಎಸ್.ಟಿ.ಜಿ. ರುದ್ರೇಶ್ ಭರವಸೆ 'ಗ್ರಾಮೀಣ ಭಾಗದ ಜನರು ಮಾರುಕಟ್ಟೆಯತ್ತ ಹೆಜ್ಜೆ ಹಾಕಲಿದ್ದಾರೆ.

ನಗರ ಪ್ರದೇಶದ ಜನರು ಸೋಮವಾರ ಸಂಜೆ ಅಥವಾ ಮಂಗಳವಾರ ಬೆಳಿಗ್ಗೆ ಮಾರುಕಟ್ಟೆಗೆ ಧಾವಿಸಲಿದ್ದಾರೆ ಎಂದು ಅವರು ಹೇಳಿದರು.

240, 30, ಆಲೂಗಡ್ಡೆ ಹಾಗೂ ಬದನೆಕಾಯಿ ಗಿಂ, ಹಸಿಮೆಣಸಿನಕಾಯಿ 250 ರಿಂದ 250, ಬೀಟ್ ರೂಟ್ 290, ದೊಡ್ಡಮೆಣಸಿನಕಾಯಿ, ಕ್ಯಾಪ್ಸಿತಂ ಹಾಗೂ ನುಗ್ಗೆಕಾಯಿ ಕೆಜಿಗೆ 80, ಮೂಲಂಗಿ 260 ದರ ಇದೆ.

ತಿಂಗಳ ಹಿಂದೆ 260 ದಿಂದ ಳಿಂದ ವರೆಗೆ ದರ ಏರಿಸಿಕೊಂಡಿದ್ದ ಈರುಳ್ಳಿಯು, ಇದೀಗ 250ರಂತೆ ಮಾರಾಟವಾಗುತ್ತಿದೆ. ಹೊಸ ಈರುಳ್ಳಿಗೆ 2 40 ದರ ಇದೆ. ಮಹಾರಾಷ್ಟ್ರದ ನಾಸಿಕ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಅವಶವಾಗುತ್ತಿದೆ. ಸ್ಥಳೀಯ ಈರುಳ್ಳಿಯೂ ಮಾರುಕಟ್ಟೆಗೆ ಬರುತ್ತಿದೆ. ಹೀಗಾಗಿ ವಾರದಿಂದ ಈಮಳ್ಳಿ ದರದಲ್ಲಿ ಅಲ್ಪ ಇಳಿಕೆ ಕಂಡಿದ ಎನ್ನುತ್ತಾರೆ ವ್ಯಾಪಾರಿಗಳು. ನಗರದ ಮಾರುಕಟ್ಟೆಗೆ ಕ್ಯಾರಟ್, ಬೀನ್ಸ್ ಹಾಗೂ ಬೀಟ್ ರೂಟ್ ತರಕಾರಿಯು ಬೆಂಗಳೂರು, ತುಮಕೂರು ಹಾಗೂ ಬೆಳಗಾವಿ ಭಾಗದಿಂದ ಬರುತ್ತಿದೆ.

# ಎಚ್‌ಐವಿ ಜಾಗೃತಿ, ಎಚ್ಚರಿಕೆ ಅಗತ್ಯ ಎಂದ ಡಾ.ಗೋವಿಂದರಾಜು

## 'ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಸನ್ ಸೊಸೈಟಿ ವತಿಯಿಂದ ಕೌನ್ಸಿಲಿಂಗ್, ಟೆಸ್ಟಿಂಗ್, ಚಿಕಿತ್ಸೆ ಮತ್ತು ಸಾಮಾಜಿಕ ಸೌಲಭ್ಯಗಳು ಸಂಪೂರ್ಣ ಉಚಿತವಾಗಿ ದೊರೆಯುತ್ತಿವೆ

• ಉದಯವಾಹಿನಿ, ದಾವಣಗೆರೆ:

'ಸಾರ್ವಜನಿಕರಲ್ಲಿ ಎಚ್‌ಐವಿ ಸೋಂಕಿನ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಸೋಂಕು ಹರಡದಂತೆ ಎಚ್ಚರಿಕೆ ವಹಿಸುವುದು ನಮ್ಮೆಲ್ಲರ ಜವಾಬ್ದಾರಿ' ಎಂದು ಆರೋಗ್ಯ ಮತ್ತು

1 : ಶೇ 95ರಷ್ಟು ಜನರನ್ನು ಗುರುತಿಸಿ
2 : 25 ವರ್ಷದ ಒಳಗಿನ ಯುವಕ
3 : 2 ವರ್ಷ ಜೈಲು 1 ಲಕ್ಷ ದಂಡ

ಕುಟುಂಬ ಕಲ್ಯಾಣ ಇಲಾಖೆ ಐಇಸಿ ವಿಭಾಗದ ಉಪನಿರ್ದೇಶಕ ಡಾ.ಗೋವಿಂದರಾಜು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯ ಏಡ್ಸ್ ಪ್ರಿವೆನ್ಸನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕ, ಚಿಗಟೇರಿ ಜಿಲ್ಲಾಸ್ಪತ್ರೆ ಹಾಗೂ ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಮೆಗಾ ರೆಡ್ ರಿಬ್ಬನ್ ಮ್ಯಾರಥಾನ್ ಸ್ಪರ್ಧೆಯ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

'ರಾಜ್ಯದಲ್ಲಿ ಎಚ್‌ಐವಿ ಸೋಂಕು ತಡೆಗಟ್ಟುವಿಕೆ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 17 ವರ್ಷ ದಾಟಿದ ಹಾಗೂ 25 ವರ್ಷದ


ಉದಯವಾಹಿನಿ ಚಿತ್ರ

ಒಳಗಿನ ಯುವಕ-ಯುವತಿಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಯುವ ಜನತೆಯಲ್ಲಿ ಎಚ್‌ಐವಿ ಏಡ್ಸ್ ಕುರಿತು ಸರಿಯಾದ ವೈಜ್ಞಾನಿಕ ಮಾಹಿತಿ ನೀಡುವುದು ಹಾಗೂ ಸೋಂಕಿನಿಂದ ದೂರವಿರುವಂತೆ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ' ಎಂದು ತಿಳಿಸಿದರು.

'ಎಚ್‌ಐವಿ ಸೋಂಕಿತರಾಗಿರುವ ಶೇ 95ರಷ್ಟು ಜನರನ್ನು ಗುರುತಿಸಿ ಪರೀಕ್ಷೆಗೆ ಒಳಪಡಿಸುವುದು. ಸೋಂಕು ಇರುವುದು ದೃಢಪಟ್ಟವರಿಗೆ ಯಾವುದೇ ಶುಲ್ಕವಿಲ್ಲದೆ ಉಚಿತವಾಗಿ ಎ.ಆರ್.ಟಿ ಚಿಕಿತ್ಸೆ ನೀಡುವುದು ಹಾಗೂ ವೈರಲ್ ಲೋಡ್ ಅನ್ನು ಸಾವಿರಕ್ಕಿಂತ ಹೆಚ್ಚಾಗದಂತೆ ತಡೆದು, ಸೋಂಕು ಇತರರಿಗೆ ಹರಡದಂತೆ ನಿಯಂತ್ರಿಸುವುದು ಮುಖ್ಯವಾಗಿದೆ' ಎಂದು ಹೇಳಿದರು.

> ಇದಕ್ಕೆ 2 ವರ್ಷ ಜೈಲು ಮತ್ತು 1 ಲಕ್ಷ ದಂಡ ವಿಧಿಸುವ ಅವಕಾಶವಿದೆ. ಸಮಾಜದಲ್ಲಿ ಎಚ್‌ಐವಿ ಕುರಿತು ಇರುವ ತಪ್ಪು ಕಲ್ಪನೆಗಳನ್ನು ತೊಡೆದುಹಾಕಿ, ಸೋಂಕಿತರೊಂದಿಗೆ ಮುಕ್ತವಾಗಿರಲು ಪ್ರೋತ್ಸಾಹಿಸಲಾಗುತ್ತಿದೆ' ಎಂದು ತಿಳಿಸಿದರು.
> -ಡಾ.ಗೋವಿಂದರಾಜು

'ರಾಜ್ಯದಾದ್ಯಂತ ಶಾಲಾ ಕಾಲೇಜುಗಳಲ್ಲಿ ವಿವಿಧ ಜಾಗೃತಿ ಚಟುವಟಿಕೆಗಳು ಹಾಗೂ ಸುಮಿ ಎಂಬ ಸ್ಪರ್ಧೆಗಳ ಮೂಲಕ ಯುವ ಜನತೆಯಲ್ಲಿ ಆರೋಗ್ಯ ಶಿಕ್ಷಣದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲಾಗುತ್ತಿದೆ' ಎಂದರು. ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಧಿಕಾರಿ ಕಚೇರಿಯಿಂದ ಚಿಗಟೇರಿ ಆಸ್ಪತ್ರೆಯವರಿಗೆ 'ಮೆಗಾ ರೆಡ್ ರಿಬ್ಬನ್ ಮ್ಯಾರಥಾನ್ ಈ-2026 2.

### ಕೌನ್ಸಿಲಿಂಗ್, ಟೆಸ್ಟಿಂಗ್, ಚಿಕಿತ್ಸೆ

'ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಸನ್ ಸೊಸೈಟಿ ವತಿಯಿಂದ ಕೌನ್ಸಿಲಿಂಗ್, ಟೆಸ್ಟಿಂಗ್, ಚಿಕಿತ್ಸೆ ಮತ್ತು ಸಾಮಾಜಿಕ ಸೌಲಭ್ಯಗಳು ಸಂಪೂರ್ಣ ಉಚಿತವಾಗಿ ದೊರೆಯುತ್ತಿವೆ. ಎಚ್‌ಐವಿ ಸೋಂಕಿತ ವ್ಯಕ್ತಿಗಳಿಗೆ ಯಾವುದೇ ರೀತಿಯ ತಾರತಮ್ಯ ಅಥವಾ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಧು ಕೆ.ಎಸ್.. ಅಧೀಕ್ಷಕ ಡಾ. ನಾಗೇಂದ್ರಪ್ಪ ಎಂ.. ಡಾ.ಮುರಳೀಧರ್, ಡಾ.ನಂಜೇಗೌಡ, ಡಾ.ಪಂಪಾಪತಿ, ದಾವಣಗೆರೆ ಪ್ರಥಮ ದರ್ಜೆ ಕಾಲೇಜಿನ ಲೋಕೇಶ್ ನಾಯಕ್ ಸೇರಿದಂತೆ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಮತ್ತು ಇತರರು ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ಬಾಲಕರ ವಿಭಾಗದಿಂದ ಉಡುಪಿಯ ಬಾಲು ಹೆಗ್ರೆ ಪ್ರಥಮ ಸ್ಥಾನ. ಮೈಸೂರಿನ ಪುರುಷೋತ್ತಮ ದ್ವಿತೀಯ ಸ್ಥಾನ, ಉಡುಪಿಯ ಚನ್ನಬಸವ ತೃತೀಯ ಸ್ಥಾನ ಹಾಗೂ ಹರೀಶ್, ಪ್ರಕಾಶ್, ಪ್ರತೀಕ್ ಅವರು ಸಮಾಧಾನಕರ ಬಹುಮಾನ ಪಡೆದರು. ಬಾಲಕಿಯರ ವಿಭಾಗದಲ್ಲಿ ಉಡುಪಿಯ ನಂದಿನಿ ಪ್ರಥಮ ಸ್ಥಾನ, ದಕ್ಷಿಣ ಕನ್ನಡದ ಶ್ರೇಯಾ ದ್ವಿತೀಯ ಸ್ಥಾನ, ಉಡುಪಿಯ ದೀಕ್ಷಿತ್ ತೃತೀಯ ಸ್ಥಾನ, ಅಶ್ವಿನಿ, ಐಸಿರಿ ಮತ್ತು ಬಿಂದೂ ಸಮಾಧಾನಕರ ಬಹುಮಾನ ಪಡೆದರು.

# ಮಿನಿ ನ್ಯೂಸ್

## ಸೊರಟೂರಿನಲ್ಲಿ ದೇವಿ ಪುರಾಣ ಪ್ರವಚನ.

• ಉದಯವಾಹಿನಿ ಗದಗ:



ಸೊರಟೂರ ಶ್ರೀ ಗ್ರಾಮ ದೇವತೆ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿಯ ಪ್ರಯುಕ್ತ ಪುರಾಣ ಪ್ರವಚನ ನೆರವೇರಿದ್ದು ಪುರಾಣ ಪ್ರವಚನಕಾರರಾದ ಶೇಖಪ್ಪ ಈಶ್ವರಪ್ಪ ಹಡಪದ, ಹಾರ್ಮೋನಿಯಂ ಚೆನ್ನಪ್ಪ ಬಸವಣೆಪ್ಪ ಗಿಡ್ಡ ಕೆಂಚಣ್ಣವರ, ಹಾಗೂ ಅಶೋಕ್ ಶಿವಪ್ಪ ಗಿಡಕೆಂಚಣವರ, ತಬಲಾ ಕುಮಾರಸ್ವಾಮಿ ಚನ್ನಯ್ಯ ಪೂಜಾರ, ಹಾಗೂ ಶ್ರದ್ಧಾ ಭಕ್ತಿಯಿಂದ ಹಠವಾದಿ ಗೆಳೆಯರ ಬಳಗ ಮತ್ತು ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗಿಯಾಗುವರು. 9 ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ ಗ್ರಾಮದಲ್ಲಿನ ಭಜನಾ ಮಂಡಳಿಯವರು ಭಜನಾ ಸೇವೆ ಸಲ್ಲಿಸುತ್ತಿದ್ದಾರೆ. ಜಿಲ್ಲಾ ಯುವ ಪ್ರಶಸ್ತಿ ವಿಜೇತರಾದ ಪರಶುರಾಮ ಹೂಗಾರ, ಇವರು ಕಾರ್ಯಕ್ರಮ ನಿರುಪಿಸುತ್ತಿದ್ದಾರೆ. ಪ್ರತಿದಿನ ಪುರಾಣ ಮಂಗಲದ ನಂತರ ಪ್ರಸಾದ ಸೇವೆ ಇರುವುದು

## ನವರಾತ್ರಿ: ಶ್ರೀ ಶಕ್ತಿ ಕನ್ಯಾ ಪೂಜಾ ಕಾರ್ಯಕ್ರಮ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ:

ನವರಾತ್ರಿ ಹಬ್ಬದ ದುರ್ಗಾಷ್ಟಮಿಯ ಅಂಗವಾಗಿ ಭಾನುವಾರ ನಗರದ ಅಯ್ಯಣ್ಣನಪೇಟೆಯ ಶ್ರೀವಾಸವಿ ಪತಂಜಲಿ ಯೋಗ ಸಂಸ್ಥೆ ಸದಸ್ಯರಿಂದ ಅತ್ಯಂತ ಭಕ್ತಿಪೂರ್ವಕವಾಗಿ ಕನ್ಯಾ ಪೂಜೆಯನ್ನು ಆಯೋಜಿಸಲಾಗಿತ್ತು ಈ ವಿಶೇಷ ದಿನದಂದು, ಶ್ರೀ ಶಕ್ತಿ ಸ್ವರೂಪರಾದ ಒಂಬತ್ತು ಜನ ಪುಟ್ಟ ಕನ್ಯಾ ಬಾಲಕಿಯರನ್ನು ಹಾಗೂ ಶ್ರೀ ಕಾಲಭೈರವನ ಸ್ವರೂಪದಲ್ಲಿ ಒಬ್ಬ ಪುಟ್ಟ ಬಾಲಕನನ್ನು ಪಾದತೊಳೆದು ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಿ, ಉಡುಗೊರೆ ನೀಡಿ ಆಶೀರ್ವಾದ ಪಡೆದರು ನಂತರ ಪೂಜೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರಸಾದ ವಿನಿಯೋಗ ಮಾಡಲಾಯಿತು. ಯೋಗ ಸಮಿತಿಯ ತರಬೇತುದಾರ ಶ್ರೀಧರ್ ಗುಜ್ಜರ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

## ವಾಲ್ಮೀಕಿ ಜಯಂತಿ ಅರ್ಥಪೂರ್ಣ ಆಚರಣೆಗೆ ಜಿಲ್ಲಾಡಳಿತ ನಿರ್ಧಾರ

• ಉದಯವಾಹಿನಿ, ರಾಯಚೂರು:

ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅ. 26ರಂದು ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತ ವತಿಯಿಂದ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 'ಚುನಾವಣಾ ನೀತಿ ಸಂಹಿತೆ ನಿಯಮ ಪಾಲಿಸಿಕೊಂಡು ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಅಥವಾ ವಾಲ್ಮೀಕಿ ಭವನದಲ್ಲಿ ಜಯಂತಿ ಆಚರಿಸಲು ಹಾಗೂ ಮೆರವಣಿಗೆ ಮಾಡುವ ಕುರಿತು ಮುಂದಿನ ದಿನಗಳಲ್ಲಿ ತಿಳಿಸಲಾಗುತ್ತದೆ. ವಾಲ್ಮೀಕಿ ಅವರ ಜೀವನ, ಆದರ್ಶ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆ ಸ್ಮರಿಸಲು ಆದ್ಯತೆ ನೀಡಲಾಗುವುದು' ಎಂದರು.

''ಅಂದು ಬೆಳಿಗ್ಗೆ 7.30ಕ್ಕೆ ಲಿಂಗಸುಗೂರು ರಸ್ತೆಯ ವಾಲ್ಮೀಕಿ ವೃತ್ತದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುತ್ತದೆ. 11.30ಕ್ಕೆ ಮಹರ್ಷಿ ವಾಲ್ಮೀಕಿ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಸಿದ್ಧತೆ ಅಗತ್ಯ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು' ಎಂದು ನಿರ್ದೇಶನ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಮಾತನಾಡಿ, 'ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಯಂತಿ ಆಚರಣೆ ಪ್ರತಿಯೊಂದು ಹಂತದಲ್ಲಿಯೂ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾರ್ಯಕ್ರಮದ ರೂಪುರೇಷೆ ಅದಕ್ಕೆ ಅನುಗುಣವಾಗಿ ಸಿದ್ಧಪಡಿಸಬೇಕು' ಎಂದು ಸೂಚಿಸಿದರು.


ಉದಯವಾಹಿನಿ ಚಿತ್ರ

## ದಬ್ಬಣಗದ್ದೆ ಗ್ರಾಮಸ್ಥರಿಗೆ ಆತಂಕ ಬೇಡ: ಆರಗ

• ಉದಯವಾಹಿನಿ, ತೀರ್ಥಹಳ್ಳಿ

'ಪೂರ್ವಿಕರ ಕಾಲದ ವಾಸದ ಮನೆ, ಕೊಟ್ಟಿಗೆ, ಗೊಬ್ಬರಗುಂಡಿ, ಒಕ್ಕುವ ಕಣ, ಹಿತ್ತಲು ಪ್ರದೇಶದ ಮೇಲೆ ಖಾಸಗಿ ವ್ಯಕ್ತಿ ಹಕ್ಕು ಸ್ಥಾಪಿಸಲು ಮುಂದಾಗಿದ್ದಾರೆ. ಬಗರ್‌ಹುಕುಂ ಹಕ್ಕುಪತ್ರ ನೀಡಿದ ಆಡಳಿತದಿಂದ ಈಗ ಹಕ್ಕು ಕಸಿದುಕೊಳ್ಳುವ ಭಯ ಆರಂಭವಾಗಿದೆ. ನಾವೇನು ಮಾಡುವುದು ಎಂದು ಗೊತ್ತಾಗುತ್ತಿಲ್ಲ.. ಹಿಲಿಕೆರೆ ಸಭಾಂಗಣದಲ್ಲಿ ನಡೆದ ಮುತ್ತೂರು ಹೋಬಳಿಯ ಪ್ರಜಾಸೇವಾ ಅಭಿಯಾನದ ಸಭೆಯಲ್ಲಿ ದಬ್ಬಣಗದ್ದೆ ಗ್ರಾಮಸ್ಥರು ಸಂಕಷ್ಟ ತೋಡಿಕೊಂಡಿದ್ದು ಹೀಗೆ.. 'ಗ್ರಾಮದ ಸರ್ವೆ ನಂಬರ್ 84, 83, 17ರಲ್ಲಿ ಪೂರ್ವಿಕರ ಕಾಲದಿಂದಲೂ ಅಂದಾಜು 217 ಎಕರೆ ಪ್ರದೇಶ ಅನುಭೋಗದಲ್ಲಿದೆ


ಉದಯವಾಹಿನಿ ಚಿತ್ರ

ಗ್ರಾಮಸ್ಥರು ಬಗರ್‌ಹುಕುಂ ಮಂಜೂರಾತಿ ಪಡೆದಿದ್ದೇವೆ. ಅಲ್ಲದೇ ಶಾಲೆ, ಅಂಗನವಾಡಿ ಸೇರಿದಂತೆ ಸರ್ಕಾರಿ ಕಟ್ಟಡದ ಮೇಲೂ ಖಾಸಗಿ ವ್ಯಕ್ತಿ ಹಕ್ಕುಸ್ಥಾಪಿಸಲು ಮುಂದಾಗಿದ್ದಾರೆ' ಎಂದು ದೂರಿದರು.

'ದಬ್ಬಣಗದ್ದೆಯ ವಾಸ್ತವ ಸ್ಥಿತಿಯ ಬಗ್ಗೆ ಈಗಾಗಲೇ ವಿವಿಧ ಹಂತದಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಜನವಸತಿಯ ಬಗ್ಗೆ ವರದಿ ಸಲ್ಲಿಸಿದ್ದು, ನ್ಯಾಯಾಲಯಕ್ಕೆ ಹೋಗುವ ಅವಶ್ಯಕತೆ ಇಲ್ಲ. ಗ್ರಾಮಸ್ಥರು ಆತಂಕ ಪಡುವುದು ಬೇಡ' ಎಂದು ಶಾಸಕ ಆರಗ ಜ್ಞಾನೇಂದ್ರ ಭರವಸೆ ನೀಡಿದರು.

'ಗ್ರಾಮಕ್ಕೆ ಭೇಟಿ ಕೊಟ್ಟು ಸ್ಥಳೀಯ ಹಂತದಲ್ಲಿ ವರದಿ ತಯಾರಿಸಿದ್ದೇವೆ. ನ್ಯಾಯಾಲಯ ದಾಖಲೆ ಕೇಳಿದರೆ ವರದಿ ನೀಡಲು ಆಡಳಿತ ಸಿದ್ಧವಿದೆ. ಮತ್ತೊಮ್ಮೆ ಗ್ರಾಮಕ್ಕೆ ಭೇಟಿ ಕೊಟ್ಟು ಜನರ ಸಮಸ್ಯೆ ಆಲಿಸುತ್ತೇನೆ' ಎಂದು ತಹಶೀಲ್ದಾರ್ ಎಸ್.ರಂಜಿತ್ ತಿಳಿಸಿದರು.

'ಸೊಪ್ಪಿನಬೆಟ್ಟ, ಕಾನು ಪ್ರದೇಶ 2009ರ ಕಾಯ್ದೆಯಂತೆ ಅರಣ್ಯ ಪ್ರದೇಶಕ್ಕೆ ಸೇರಿಕೊಂಡಿದೆ. ಈಗ ಕಸ್ತೂರಿ ರಂಗನ್ ವರದಿಯ ಗುಮ್ಮ ಹರಿದಾಡುತ್ತಿದ್ದು, ಮಲೆನಾಡಿಗರು ಸಂಕಷ್ಟ ಎದುರಿಸುತ್ತಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷಮತ್ತು ಆನಂದವನ್ನು ಹಂಚಿಕೊಳ್ಳಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ವೃಷಭ** ಇಂದು ಈ ರಾಶಿಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತದೆ ಸ್ನೇಹಿತರು ಮತ್ತು ಸಂಬಂಧಿಗಳು ಹೆಚ್ಚು ಸಮಯ ಕೇಳಿದರೂ ಈ ಜಗತ್ತಿನ ಬಾಗಿಲುಗಳನ್ನು ಮುಚ್ಚಿ ನಿಮಗೆ ನೀವೇ ಒಳ್ಳೆಯ ವೈಭೋಗ ನೀಡಿಕೊಳ್ಳುವುದೊಳ್ಳೆಯದು.

**ಮಿಥುನ** ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷಕಾಳಜಿ ವಹಿಸಬೇಕು , ಸಾಧ್ಯವಾದರೆ ನಿಮ್ಮ ಸ್ನೇಹಿತರು ಧೂಮಪಾನ ಮಾಡುವಾಗ ಅವರ ಜೊತೆ ನಿಲ್ಲಬೇಡಿ. ಏಕೆಂದರೆ ಅದು ಮಗುವನ್ನು ಬಾಧಿಸಬಹುದು. ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು,

**ಕರ್ಕಾಟಕ** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ಕುಟುಂಬದ ಪರಿಸ್ಥಿತಿ ಇಂದು ನೀವು ಯೋಚಿಸುವ ಹಾಗೆ ಇರುವುದಿಲ್ಲ.

**ಸಿಂಹ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ಕನ್ಯಾ** ನಿಯಮಿತ ತೊಂದರೆ ನಿಮಗೆ ಕೆಲವು ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ನರಮಂಡಲದ ಕಾರ್ಯವೆಸಗುತ್ತಿರಲು ಸಂಪೂರ್ಣ ವಿಶ್ರಾಂತಿತೆಗೆದುಕೊಳ್ಳಿ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ನಿಮ್ಮ ಮನಸ್ಸಿನಲ್ಲಿ ಒತ್ತಡವಿದ್ದಲ್ಲಿ ನಿಮ್ಮ ಸಂಬಂಧಿಕರು ಅಥವಾ ಆಪ್ತ ಸ್ನೇಹಿತರೊಡನೆ ಮಾತನಾಡಿ.

**ತುಲಾ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ.

**ವೃಶ್ಚಿಕ** ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ನಿಮ್ಮ ಪೋಷಕರನ್ನು ಸಂತುಷ್ಟಪಡಿಸುವುದು.

**ಧನಸ್ಸು** ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸಗಳನ್ನು ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ಒತ್ತಡದ ಅವಧಿಯಿದ್ದರೂ ಕುಟುಂಬದ ಬೆಂಬಲ ನಿಮಗೆ ಸಹಾಯ ಮಾಡುತ್ತದೆ.

**ಮಕರ** ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ತಮ್ಮ ಹಣವನ್ನು ಇನ್ನೊಬ್ಬರಿಗೆ ನೀಡಲು ಇಷ್ಟಪಡುವುದಿಲ್ಲ ಆದರೆ ಇಂದು ನೀವು ಅಗತ್ಯವಿರುವವರಿಗೆ ಹಣವನ್ನು ಕೊಟ್ಟು ವಿಶ್ರಾಂತಿಯನ್ನು ಅನುಭವಿಸುವಿರಿ.

**ಕುಂಭ** ಏನಾದರೂ ಆಸಕ್ತಿದಾಯಕವಾದದ್ದನ್ನು ಓದುವ ಮೂಲಕ ಮಾನಸಿಕ ವ್ಯಾಯಾಮ ಮಾಡಿ. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ಮೀನ** ದೇಹದ ನೋವು ಮತ್ತು ಒತ್ತಡ ಸಂಬಂಧಿತ ಸಮಸ್ಯೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ನೀವು ಕಛೇರಿಯಲ್ಲಿ ಹೆಚ್ಚು ಸಮಯ ಕಳೆದರೆ ನಿಮ್ಮ ಮನೆಯ ಜೀವನಕ್ಕೆ ಹಾನಿಯಾಗಬಹುದು.

# ಡಿಕೆ.ಶಿವಕುಮಾರ್ ಭರವಸೆಗೂ ಜಗ್ಗದ ಕಬ್ಬು ಬೆಳೆಗಾರರು

### ಕಿತ್ತೂರಿನಲ್ಲಿ ಶಿವಕುಮಾರ್ ಪ್ರತಿಭಟನಾಕಾರರನ್ನು ಭೇಟಿಯಾಗಿ, ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಮಾತುಕತೆಗೆ ಅವಕಾಶ ನೀಡುವಂತೆ ಮನವಿ ಮಾಡಿದರು.

• **ಉದಯವಾಹಿನಿ, ಬೆಳಗಾವಿ**

ದಸರಾ ಹಬ್ಬದ ಬಳಿಕ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕಬ್ಬು ಬೆಳೆಗಾರರು, ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಇತರ ಸಂಬಂಧಪಟ್ಟವರ ಸಭೆ ಕರೆದು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರೂ, ಪ್ರತಿಭಟನಾನಿರತ ಕಬ್ಬು ಬೆಳೆಗಾರರು ತಮ್ಮ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದ್ದಾರೆ.

**1** ಮಾಲೀಕರನ್ನು ಮಾತುಕತೆಗೆ ಕರೆಸಿ
**2** ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದಾರೆ
**3** ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ

ಬೆಳೆಗಾರರ ಪಾದಯಾತ್ರೆ ತಾತ್ಕಾಲಿಕವಾಗಿ ನಿಂತಿದ್ದ ಕಿತ್ತೂರಿನಲ್ಲಿ ಶಿವಕುಮಾರ್ ಪ್ರತಿಭಟನಾಕಾರರನ್ನು ಭೇಟಿಯಾಗಿ, ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಮಾತುಕತೆಗೆ ಅವಕಾಶ ನೀಡುವಂತೆ ಮನವಿ ಮಾಡಿದರು.

ಜೋಶಿ ಅವರು ಕಿತ್ತೂರಿಗೆ ಬಂದು ನಮ್ಮ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದರೆ, ಅವರಿಗೆ ಬೃಹತ್ ಹಾರ ಹಾಕಿ ಸ್ವಾಗತಿಸುತ್ತೇವೆ'' ಎಂದು ರೈತರು ಹೇಳಿದರು. ಈ ವೇಳೆ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಿಕೆ. ಶಿವಕುಮಾರ್ ಅವರು, ಕಬ್ಬಿನ ಬೆಲೆಗಳು ಏರಿಕೆಯಾಗುತ್ತಿದ್ದರೂ ಬೆಳೆಗಾರರ ಆದಾಯ ಕುಸಿಯುತ್ತಿರುವುದನ್ನು ಸರ್ಕಾರ ಅರ್ಥಮಾಡಿಕೊಂಡಿದೆ ಎಂದು ಹೇಳಿದರು.

ಮೊದಲಿಗೆ ಬೆಂಗಳೂರಿನಲ್ಲಿ ಸಭೆ ನಡೆಸುವ ಪ್ರಸ್ತಾಪ ಮುಂದಿಟ್ಟಿದ್ದ ಅವರು, ಬಳಿಕ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲೇ ಸಭೆ ನಡೆಸಲು ಒಪ್ಪಿಕೊಂಡರು. ರೈತ ಪ್ರತಿನಿಧಿಗಳ ಸಮ್ಮುಖದಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಮಾತುಕತೆಗೆ ಕರೆಸಿ, ಕಬ್ಬಿನ ಬೆಲೆ ಹಾಗೂ ಸಕ್ಕರೆ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳ ಕುರಿತು



ಚರ್ಚಿಸಲಾಗುವುದು ಎಂದು ಹೇಳಿದರು. ಕೇಂದ್ರ ಸರ್ಕಾರದ ಅಧಿಕಾರಿಗಳನ್ನೂ ಸಭೆಗೆ ಆಹ್ವಾನಿಸಲಾಗುವುದು. ಸಮಸ್ಯೆ ಪರಿಹಾರಕ್ಕಾಗಿ ಕೇಂದ್ರ ಸಚಿವರನ್ನು ಭೇಟಿಯಾಗುವಾಗ ರೈತ ಪ್ರತಿನಿಧಿಗಳನ್ನೂ ತಮ್ಮೊಂದಿಗೆ ಕರೆದೊಯ್ಯುವುದಾಗಿ ಶಿವಕುಮಾರ್ ಭರವಸೆ ನೀಡಿದರು.

ಆದರೆ, ಬೆಳಗಾವಿಯಲ್ಲಿ ನಡೆಯಲಿರುವ ಸಭೆಗೆ ಪ್ರಹ್ಲಾದ್ ಜೋಶಿ ಹಾಜರಾಗುತ್ತಾರೆಯೇ ಎಂಬುದನ್ನು ಅವರು ಖಚಿತಪಡಿಸಲಿಲ್ಲ. ರೈತರು ಈ ಹೋರಾಟದ ಮೂಲಕ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಅವರ ಅಹವಾಲುಗಳು ಸರ್ಕಾರದ ಗಮನಕ್ಕೆ ಬಂದಿವೆ. ಈಗ ಎಲ್ಲಾ ಸಂಬಂಧಪಟ್ಟವರು ಒಟ್ಟಿಗೆ ಕುಳಿತು ಚರ್ಚಿಸಿ ನಿರ್ಧಾರಕ್ಕೆ ಬರಬೇಕು ಎಂದು ಹೇಳಿದರು.

ಇದೇ ವೇಳೆ ಸಕ್ಕರೆ ಕಾರ್ಖಾನೆಗಳ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಒಪ್ಪಿಕೊಂಡ ಅವರು, ಕಾರ್ಖಾನೆಗಳು ತಮ್ಮ ಜವಾಬ್ದಾರಿಗಳನ್ನೂ ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಹೇಳಿದರು. ಕಾರ್ಖಾನೆಗಳ ಕಾರ್ಯಾಚರಣೆ ಮುಂದುವರಿಯುವುದನ್ನು ಖಚಿತಪಡಿಸುವುದರ ಜೊತೆಗೆ ಕಬ್ಬು ಬೆಳೆಗಾರರ ಹಿತಾಸಕ್ತಿಯನ್ನೂ ಸರ್ಕಾರ ಕಾಪಾಡಬೇಕಿದೆ ಎಂದು ತಿಳಿಸಿದರು.ಪ್ರತಿಭಟನಾಕಾರರು ಶಾಂತಿ ಕಾಪಾಡಬೇಕು, ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು ಹಾಗೂ ಮಾತುಕತೆಯ ಮೂಲಕ ವಿವಾದ ಪರಿಹರಿಸಲು ಸರ್ಕಾರದೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಆದರೆ, ಕಬ್ಬಿಗೆ ನಿಗದಿಪಡಿಸುವ ಬೆಲೆಯ ಬಗ್ಗೆ ಸ್ಪಷ್ಟ ಭರವಸೆ ನೀಡದಿರುವುದು ಹಾಗೂ ಪ್ರಸ್ತಾವಿತ ಸಭೆಯ ದಿನಾಂಕವನ್ನು ಖಚಿತಪಡಿಸದಿರುವುದು ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಹೀಗಾಗಿ, ಮುಖ್ಯಮಂತ್ರಿಯವರ ಭರವಸೆಯ ಹೊರತಾಗಿಯೂ ರೈತರು ಹೋರಾಟ ಹಿಂಪಡೆಯಲು ಅವರು ಒಪ್ಪಿಗೆ ನೀಡಿಲ್ಲ. ಇದೀಗ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಸ್ಪಷ್ಟ ಭರವಸೆಗಳು ಸಿಗುವುದನ್ನೇ ಈಗ ರೈತರು ಎದುರು ನೋಡುತ್ತಿದ್ದಾರೆ.

> ಈ ಸಮಸ್ಯೆಯನ್ನು ರಾಜ್ಯ ಸರ್ಕಾರವೊಂದೇ ಪರಿಹರಿಸಲು ಸಾಧ್ಯವಿಲ್ಲ ಎಂದು ತಿಳಿಸಿದ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸಕ್ಕರೆ ಕಾರ್ಖಾನೆಗಳು, ಬ್ಯಾಂಕ್‌ಗಳು ಮತ್ತು ರೈತರು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು-.ಡಿ.ಕೆ.ಶಿವಕುಮಾರ್

### ಜೋಶಿ ಅವರಿಗೆ ಆಹ್ವಾನ

**ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಂದಲೂ ಸ್ಪಷ್ಟ ಭರವಸೆ ಬೇಕೆಂದು ರೈತರು ಪಟ್ಟು ಹಿಡಿದರು. ಅಕ್ಟೋಬರ್ ಕಿತ್ತೂರಿಗೆ ಭೇಟಿ ನೀಡಿ, ರಾಣಿ ಚೆನ್ನಮ್ಮ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಭರವಸೆ ನೀಡುವಂತೆ ಜೋಶಿ ಅವರಿಗೆ ಆಹ್ವಾನ ನೀಡಿದರು.**

## ಕೆ ಎಂಎಫ್ 16.5 ಕೋಟಿ ಭ್ರಷ್ಟಾಚಾರ ಆರೋಪ ನಿರಾಕರಿಸಿದ ಒಕ್ಕೂಟ

• **ಉದಯವಾಹಿನಿ, ಬಳ್ಳಾರಿ**

ಒಕ್ಕೂಟದಲ್ಲಿ 16.5 ಕೋಟಿ ರೂ ಅವ್ಯವಹಾರ ನಡೆದಿದೆ ಎಂದು ಪ್ರಕರಣ ದಾಖಲಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ವಾಸ್ತ ್ಯವಕ್ಕೆ ದೂರವಿದೆ. ತನಿಖೆ ಆಗಲಿ ಸತ್ಯಾಸತ್ಯತೆ ಹೊರಬರಲಿದೆಂದು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಒಕ್ಕೂಟದ ಉಪಾಧ್ಯಕ್ಷ ಎನ್ ಸತ್ಯನಾರಾಯಣ ಹೇಳಿದ್ದಾರೆ.

2022 ರಿಂದ 2025 ರ ವರೆಗೆ 42174ರಾಸುಗಳಿಗೆ ವಿಮೆ ಒಟ್ಟು 71051859 ರೂ ಪೇ ಮಾಡಿದೆ ಇವುಗಳಲ್ಲಿ 2061 ಹಸುಗಳು ಮರಣ ಹೊಂದಿದೆ 10, 41, 20000 ರೂ ವಿಮೆ ಬಂದಿದೆ. ಈಗ ಹೊಸ ಆಡಳಿತ ಮಂಡಳಿ ಬಂದ ಮೇಲೆ 2025 ರಿಂದ ಬಜಾಜ್ ಕಂಪನಿಗೆ ಮಾಡುತ್ತಿದೆ.


ಉದಯವಾಹಿನಿ ಚಿತ್ರ

ಇದು ನೇರವಾಗಿ ಜಾನುವಾರು ಸತ್ತರೆ ವಿಮೆ ಮೊತ್ತ ಜಮೆ ಆಗುತ್ತಿದೆಂದು ಸ್ಪಷ್ಟಪಡಿಸಿದರು. ಈ ವೇಳೆ ಹಿಂದಿನ ವಿಮೆ ಬಂದಿಲ್ಲ ಎಂದು ರೈತರು ದೂರುನೀಡಿದ್ದರಿಂದ ಈ ಬಗ್ಗೆ ಉಪ ಸಮಿತಿಯಿಂದ ಪರಿಶೀಲನೆ ನಡೆದಾಗ 2023 ರಿಂದ ನಡೆಸಲಾಯ್ತು. ಆಗ ಉಮಾ ಮಹೆಶ್ವರಿ ಅವರು ತಮ್ಮ ಕುಟುಂಬಕ್ಕೆ 27.86 ಲಕ್ಷ ರೂ ವಿಮೆ ಹಣ ಹಾಗು ಒಕ್ಕೂಟದ್ದು ಸೇರಿ ಒಟ್ಟು 42 ಲಕ್ಷ ರೂ ಜಮಾ ಮಾಡಿದ್ದು ಬೆಳಕಿಗೆ ಬಂತು. ಅದನ್ನು ರಿಕವರಿ ಮಾಡಿದೆ. ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟರು. ಕಳೆದ ಆ.6 ಕ್ಕೆ ಅಮಾನತು ಮಾಡಿದೆ. ಕಾನೂನು ಸಲಹೆಗಾರರ ಸಲಹೆಯಂತೆ ಈ ಬಗ್ಗೆ ದೂರು ನೀಡಲು ವಿಳಂಬವಾಗಿದೆ. 287 ರಾಸುಗಳ ವಿಮೆ ಹಣ ಪೆಂಡಿಗ್ ಇದೆ. ಈ ಬಗ್ಗೆ ಪರಿಶೀಲನೆ ನಡೆಯುತ್ತಿದೆಂದರು. ಸತ್ತ 370 ಹಸುಗಳ ರೈತರಿಗೆ 83 ಲಕ್ಷ ರೂ ನೀಡಬೇಕಿತ್ತು ಅದಕ್ಕಾಗಿ ವಿಮೆ ಹಣವನ್ನು ಬಳಸಿಕೊಂಡಿದೆ. ಇದು ಕಾನೂನು ಬಾಹಿರವಾಗಿದೆ.

ಅಕೌಂಟ್ ನಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಮೂಲಾಜಿಲ್ಲದೆ ಕ್ರಮ ಜರುಗಿಸಲಿದೆಂದರು.ಪೊಲೀಸ್ ತನಿಖೆಗೆ ಸಂಪೂರ್ಣ ದಾಖಲೆ ನೀಡಿ ಸಹಕರಿಸಲಿದೆ ತನಿಖೆಯಿಂದ ತಪ್ಪಿತಸ್ಥರ ಮೇಲೆ ಒಕ್ಕೂಟ ಕ್ರಮ ತೆಗೆದುಕೊಳ್ಳಲಿದೆಂದು ಹೇಳಿದರು.

## ಪರಿಸರ ಸ್ನೇಹಿ ಹಸಿರು ಪಟಾಕಿ ಬಳಸಿ ಆಚರಿಸಿ-ಜಿಲ್ಲಾಧಿಕಾರಿ

• **ಉದಯವಾಹಿನಿ, ಉಡುಪಿ**

ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿ ಹಸಿರು ಪಟಾಕಿಗಳ ಬಳಕೆಯೊಂದಿಗೆ ಆಚರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಹೇಳಿದರು. ಪಟಾಕಿ ಮಾರಾಟ ಮಳಿಗೆಗಳನ್ನು ತೆರೆಯಲು ಅನುಮತಿ ನೀಡುವ ಕುರಿತು ಚರ್ಚಿಸಲು ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಾತ್ಕಾಲಿಕವಾಗಿ ಪಟಾಕಿ ಮಾರಾಟ ಮಾಡುವವರು ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು. ನಿಯಮಾನುಸಾರ ಮಾರ್ಗಸೂಚಿಗಳನ್ನು ಪಾಲಿಸುವುದರೊಂದಿಗೆ ಯಾವುದೇ ಅನಾಹುತ ಸಂಭವಿಸದಂತೆ ಸುರಕ್ಷತಾ ಕ್ರಮ ಅನುಸರಿಸಬೇಕು ಎಂದರು. ದೀಪಾವಳಿ ಹಬ್ಬ ಸಂದರ್ಭದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ನಿಗದಿಪಡಿಸಿರುವ ತೆರೆದ ಪ್ರದೇಶಗಳಲ್ಲಿ ಪಟಾಕಿ ಮಾರಾಟಕ್ಕೆ ಜಿಂಕ್ ಶೀಟ್ ಅಥವಾ ಅಗ್ನಿ ನಿರೋಧಕ ವಸ್ತುಗಳಿಂದ ಮಳಿಗೆಗಳನ್ನು ನಿರ್ಮಿಸಬೇಕು ಎಂದು ಹೇಳಿದರು.

## ಚಿನ್ನದ ಕೆಲಸ ಮಾಡುತ್ತಲೇ ಪಾಕ್ ಉಗ್ರರ ಜೊತೆ ನಂಟು

• **ಉದಯವಾಹಿನಿ ಕಲಬುರಗಿ:**


ಉದಯವಾಹಿನಿ ಚಿತ್ರ

ಪಾಕಿಸ್ತಾನ ಮೂಲದ ಉಗ್ರ ಸಂಘಟನೆಯಾದ ಲಷ್ಕರ್-ಎ-ತೈಬಾ ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದ ಪಶ್ಚಿಮ ಬಂಗಾಳ ಮೂಲದ ಮಮ್ತಾಜ್‌ವುಲ್ ಮಲೀಕ್ ಎಂಬ ವ್ಯಕ್ತಿಯನ್ನು ಕೇಂದ್ರ ಗುಪ್ತಚರ ಇಲಾಖೆ ಹಾಗೂ ಸ್ಥಳೀಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.

ತನ್ನ ಸಹೋದರನ ಜೊತೆ ಸೇರಿ ಕಲಬುರಗಿಯ ಸರಾಫ್ ಬಜಾರ್‌ನ ಚಿನ್ನಾಭರಣ ಅಂಗಡಿಯಲ್ಲಿ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದ ಪಶ್ಚಿಮ ಬಂಗಾಳ ಮೂಲದ ಮಮ್ತಾಜ್ ವುಲ್ ಮಲೀಕ್, ಸಾಮಾಜಿಕ ಜಾಲತಾಣಗಳ ಮೂಲಕ ಪಾಕಿಸ್ತಾನ ಮೂಲದ ಉಗ್ರ ಸಂಘಟನೆಯಾದ ಲಷ್ಕರ್-ಎ-ತೈಬಾ ಜೊತೆಗೆ ಸಂಪರ್ಕದಲ್ಲಿದ್ದ ಹಾಗೂ ಮೆಸೇಜ್‌ಗಳ ಮುಖಾಂತರ ಹಲವು ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದ ಎಂದು ಹೇಳಲಾಗಿದೆ. ಬ್ರಹ್ಮಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಪ್ರಸ್ತುತ ತನಿಖಾ ಸಂಸ್ಥೆಗಳು ಆತನನ್ನು ತೀವ್ರ ವಿಚಾರಣೆ ನಡೆಸುತ್ತಿವೆ.

ಏತನ್ಮಧ್ಯೆ, ಇದಕ್ಕೂ ಕೆಲ ದಿನಗಳ ಮುನ್ನ ಕಲಬುರಗಿಯಲ್ಲಿ ಕಸಾಯಿಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ಯುವಕನೊಬ್ಬನನ್ನು ವಶಕ್ಕೆ ಪಡೆಯಲಾಗಿತ್ತು.

## ಸಾರ್ವಜನಿಕ ಆಸ್ಪತ್ರೆಗೆ ಶಾಸಕ ಚವ್ಹಾಣ ದಿಢೀರ್ ಭೇಟಿ

• **ಉದಯವಾಹಿನಿ, ಔರಾದ್**

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಶಾಸಕ ಪ್ರಭು ಬಿ.ಚವ್ಹಾಣ ಅವರು ದಿಢೀರ ಭೇಟಿ ನೀಡಿ ಆಸ್ಪತ್ರೆಯ ವ್ಯವಸ್ಥೆ ಹಾಗೂ ರೋಗಿಗಳಿಗೆ ನೀಡಲಾಗುತ್ತಿರುವ ಚಿಕಿತ್ಸಾ ಸೌಲಭ್ಯಗಳನ್ನು ಪರಿಶೀಲಿಸಿದರು.

ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ತೆರಳಿ ಒಳರೋಗಿಗಳ ಆರೋಗ್ಯ ಸ್ಥಿತಿ, ವೈದ್ಯಕೀಯ ಚಿಕಿತ್ಸೆ, ಔಷಧೋಪಚಾರ ಹಾಗೂ ವೈದ್ಯರು ಮತ್ತು ಸಿಬ್ಬಂದಿಯ ಸ್ಪಂದನೆಯ ಕುರಿತು ರೋಗಿಗಳಿಂದ ಮಾಹಿತಿ ಪಡೆದರು. ಈ ವೇಳೆ ಆಸ್ಪತ್ರೆಯ ವಾರ್ಡ್‌ಗಳಲ್ಲಿ ಸ್ವಚ್ಛತೆಯ ಕೊರತೆ, ರೋಗಿಗಳ ಹಾಸಿಗೆಗಳ ದುಸ್ಥಿತಿ ಹಾಗೂ ಔಷಧ ತ್ಯಾಜ್ಯಗಳು ಎಲ್ಲೆಂದರಲ್ಲಿ ಬಿದ್ದಿರುವುದನ್ನು ಕಂಡು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಸಂಬಂಧಿಸಿದ ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಆಸ್ಪತ್ರೆಯು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಕೇಂದ್ರವಾಗಿರಬೇಕೇ ಹೊರತು ಅವ್ಯವಸ್ಥೆಯ ತಾಣವಾಗಬಾರದು ಎಂದು ತಾಕೀತು ಮಾಡಿದ ಶಾಸಕರು, ಆಸ್ಪತ್ರೆಯ ಆವರಣ ಹಾಗೂ ವಾರ್ಡ್‌ಗಳನ್ನು ಸದಾ ಸ್ವಚ್ಛವಾಗಿಡಬೇಕು. ರೋಗಿಗಳ ಹಾಸಿಗೆಗಳನ್ನು ಪ್ರತಿದಿನ ಸ್ವಚ್ಛಗೊಳಿಸಬೇಕು.

ಬಳಸಿದ ಇಂಜೆಕ್ಷನ್‌ಗಳು ಹಾಗೂ ಇತರ ವೈದ್ಯಕೀಯ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ, ನಿಯಮಾನುಸಾರ ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಒಳರೋಗಿಗಳಿಗೆ ಗುಣಮಟ್ಟದ


ಉದಯವಾಹಿನಿ ಚಿತ್ರ

ಆಹಾರವನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು. ರಾತ್ರಿ ವೇಳೆ ವೈದ್ಯರು ಕರ್ತವ್ಯಕ್ಕೆ ಹಾಜರಿರುವುದಿಲ್ಲ ಎಂಬ ದೂರುಗಳು ಪದೇಪದೇ ಕೇಳಿಬರುತ್ತಿದ್ದು, ಇಂತಹ ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ. ರಾತ್ರಿ ಪಾಳಿಯಲ್ಲಿಯೂ ವೈದ್ಯರು ಕಡ್ಡಾಯವಾಗಿ ಹಾಜರಿದ್ದು, ತುರ್ತು ಸಂದರ್ಭಗಳಲ್ಲಿ ರೋಗಿಗಳಿಗೆ ತಕ್ಷಣ ಚಿಕಿತ್ಸೆ ನೀಡಬೇಕು ಎಂದು ಎಚ್ಚರಿಸಿದರು.

## ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಕೇಂದ್ರ ಸಿದ್ಧ, ಪ್ರತಿಭಟನೆ ಕೈಬಿಡಿ

• **ಉದಯವಾಹಿನಿ ಹಾವೇರಿ**


ಉದಯವಾಹಿನಿ ಚಿತ್ರ

ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಕೇಂದ್ರ ಸರ್ಕಾರ ಸಿದ್ಧವಿಸಿದ್ದು, ಪ್ರತಿಭಟನೆ ನಡೆಸುತ್ತಿರುವ ರೈತರು ತಮ್ಮ ಹೋರಾಟವನ್ನು ಹಿಂಪಡೆಯಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರ ಬದ್ಧವಾಗಿದ್ದು, ರೈತರ ಹಿತಾಸಕ್ತಿಯನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದು ಭರವಸೆ ನೀಡಿದ್ದಾರೆ.

ರೈತ ಮುಖಂಡರು ಮತ್ತೊಮ್ಮೆ ಮಾತುಕತೆಗೆ ಮುಂದೆ ಬಂದರೆ ಕೇಂದ್ರ ಸರ್ಕಾರ ಚರ್ಚೆ ನಡೆಸಲು ಸಿದ್ಧವಿದೆ. ಕೃಷಿ ತಜ್ಞ ರಮೇಶ್ ಚಂದ್ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿಯು ಶೀಘ್ರದಲ್ಲೇ ಅಧ್ಯಯನ ಆರಂಭಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ರೈತರು ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದಾರೆ. ಅವರ ಸಮಸ್ಯೆಗಳನ್ನು ನಿರ್ಲಕ್ಷಿಸುವ ಪ್ರಶ್ನೆಯೇ ಇಲ್ಲ. ರಾಜ್ಯ ಸಲಹಾ ಬೆಲೆ (ಎಸ್‌ಎಪಿ) ಸೇರಿದಂತೆ ಕಬ್ಬು ಬೆಳೆಗಾರರು ಮುಂದಿಟ್ಟಿರುವ ಬೇಡಿಕೆಗಳು ಮತ್ತು ಸಮಸ್ಯೆಗಳನ್ನು ಸಮಿತಿ ಸಮಗ್ರವಾಗಿ ಪರಿಶೀಲಿಸಲಿದೆ ಎಂದು ತಿಳಿಸಿದರು.ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸಿದ ನಿರ್ಧಾರ ಕೈಗೊಳ್ಳುವಾಗ ಕಬ್ಬು ಬೆಳೆಗಾರರು, ಸಕ್ಕರೆ ಕಾರ್ಖಾನೆಗಳು ಮತ್ತು ಗ್ರಾಹಕರ ಹಿತಾಸಕ್ತಿಯನ್ನು ಕೇಂದ್ರ ಸರ್ಕಾರ ಪರಿಗಣಿಸಬೇಕಾಗುತ್ತದೆ. ಮಾತುಕತೆಯಲ್ಲಿ ಐದರಿಂದ ಆರು ಪ್ರಮುಖ ರೈತ ಪ್ರತಿನಿಧಿಗಳು ಭಾಗವಹಿಸಿದರೆ ಚರ್ಚೆ ಹೆಚ್ಚು ಪರಿಣಾಮಕಾರಿಯಾಗಿರಲಿದೆ ಎಂದರು. ಇದೇ ವೇಳೆ ಪ್ರತಿಭಟನೆಯ ಸಂದರ್ಭದಲ್ಲಿ ಕೆಲವರು ಮಾಡಿದ ಟೀಕೆಗಳನ್ನು ತಾವು ವೈಯಕ್ತಿಕವಾಗಿ ಪರಿಗಣಿಸುವುದಿಲ್ಲ ಎಂದ ಜೋಶಿ ಅವರು, ಸಾರ್ವಜನಿಕ ಜೀವನದಲ್ಲಿ ಟೀಕೆಗಳು ಸಹಜ ಎಂದು ಹೇಳಿದರು.

## ಮಲೇಷ್ಯಾದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಶಹಾಬಾದ್‌ನ ಮೂವರು ಭಾರತೀಯರು ತವರಿಗೆ ವಾಪಸ್

• **ಉದಯವಾಹಿನಿ** ಕಲಬುರಗಿ,:

ಮಲೇಷ್ಯಾದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಕಲಬುರಗಿ ಜಿಲ್ಲೆಯ ಶಹಾಬಾದ್‌ನ ಮೂವರು ಭಾರತೀಯರು ಸುರಕ್ಷಿತವಾಗಿ ತವರಿಗೆ ಮರಳಿದ್ದಾರೆ ಎಂದು ಸಮಾಜ ಸೇವಕ ಡಾ.ಫಾರುಕ್ ಮಣ್ಣೂರ ತಿಳಿಸಿದಾರೆ.

ಕಲಬುರಗಿ ನಗರದ ಡಾ.ಫಾರುಕ್ ಮಣ್ಣೂರ ಅವರ ಗೃಹ ಕಛೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಶಹಾಬಾದ್‌ನ ಮೊಹಮ್ಮದ್ ನೂರುದ್ದೀನ್, ಮೊಹಮ್ಮದ್ ಸಿರಾಜುದ್ದೀನ್ ಹಾಗೂ ಯೂಸುಫ್ ಖಾನ್ ಅವರನ್ನು ಒಬ್ಬ ದಲ್ಲಾಳಿ ಮಲೇಷ್ಯಾದಲ್ಲಿ ಕಾನೂನಿನ ಪ್ರಕಾರ ದಾಖಲೆ ಸಿದ್ದಪಡಿಸಿ ಒಳ್ಳೆಯ ಸಂಬಳ ಇರುವ ಉದ್ಯೋಗ ಕೊಡಿಸಿವುದಾಗಿ ನಂಬಿಸಿ ಅವರಿಗೆ ಅನಾಧಿಕೃತವಾಗಿ ರಾತ್ರಿವೇಳೆ ಥೈಲ್ಯಾಂಡ ನಿಂದ ಮಲೇಷ್ಯಾಕ್ಕೆ ಹಡಗಿನ ಲೇಗೆಜ್ ಬಾಕ್ಸನಲ್ಲಿ ಮಲಗಿಸಿ ಮಲೆಷ್ಯಾಗೆ ಕರೆದೋಯಿದೀದ್ದಾರೆ. ನಂತರ ಅಲ್ಲೇಗೆ ಹೊಂದ ನಂತರ ಮೂರು ಜನರೀಗೆ ಮಲೆಷ್ಯಾದಲ್ಲಿ ಅನಾಧಿಕೃತ ಪ್ರವೇಶ ಪಡೆದಿರುವ ಬಗ್ಗೆ ಅಧಿಕೃತವಾದ ನಂತರ ಆ ವ್ಯಕ್ತಿಗಳು ಅವರ ಕುಂಟುಂಬಸ್ಥರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದರು ಜೋತೆಗೆ ಅಲ್ಲಿನ ಅಧಿಕಾರೀಗಳು ಕೂಡ ಕೇಲವೆ ದಿನಗಳಲ್ಲಿ ಬಂಧಿಸು ವಶಕ್ಕೆ ಪದೆದರು ನಂತರ ಅದು ಕೂಡ ಕುಟುಂಬಸ್ಥರಿಗೆ ಮಾಹಿತಿ ನೀಡಿದರು. ನಂತರ ಶಹಬಾದನ ಅವರ ಕುಂಟುಂಬಸ್ಥರು ನನಗೇ ಬಂದು ಭೇಟಿಯಾದ ನಂತರ ಸಂಕಷ್ಟಕ್ಕೆ ಸಿಲುಕಿರುವ ವಿಷಯ ತಿಳಿದ ಡಾ. ಫಾರೂಕ್ ಮಣೂರ ಅವರು, ಮೂವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕಲಬುರಗಿ ಜಿಲ್ಲಾ ಪೊಲೀಸ್



ಉದಯವಾಹಿನಿ ಚಿತ್ರ

ಅಧೀಕ್ಷಕರಿಗೆ ಮನವಿ ಸಲ್ಲಿಸಿದ್ದರು.

ಇದರೊಂದಿಗೆ ಮಲೇಷ್ಯಾದ ಭಾರತೀಯ ರಾಯಭಾರ ಕಚೇರಿ, ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ರಾಜ್ಯದ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೂ ಮನವಿ ಸಲ್ಲಿಸಿ ನೆರವು ಕೋರಲಾಗಿತ್ತು

## ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನಿಗದಿಗೆ ಆಗ್ರಹ

• **ಉದಯವಾಹಿನಿ ಕಲಬುರಗಿ:**

ರೈತರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಹಾಗೂ ರೈತರ ಹಿತದೃಷ್ಟಿಯಿಂದ ವಿವಿಧ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಯ ಹೋರಾಟದಲ್ಲಿ ಕನ್ನಡ ನಾಡು ರಕ್ಷಣಾ ಪಡೆ ಜಿಲ್ಲಾಧ್ಯಕ್ಷ ವಿನೋದ್ ಪಾಟೀಲ್ ನೇತೃತ್ವದಲ್ಲಿ ನಗರದ ರಾಮಮಂದಿರ ವೃತ್ತದಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದರು.

ಕನ್ನಡ ನಾಡು ರಕ್ಷಣಾ ಪಡೆ ರಾಜ್ಯ ಉಪಾಧ್ಯಕ್ಷ ಗಜಾನಂದ ದೇಶಪಾಂಡೆ ಅವರು ಮಾತನಾಡಿ ಸಕ್ಕರೆ ಕೆ.ಜಿ.ಗೆ 60, ಒಂದು ಟನ್ ಕಬ್ಬಿಗೆ 5,500, ತೊಗರಿ ಕ್ವಿಂಟಲ್‌ಗೆ 15,000, ಭತ್ತದ ಕ್ವಿಂಟಲ್‌ಗೆ 5,000, ಹತ್ತಿ ಕ್ವಿಂಟಲ್‌ಗೆ 15,000 ಹಾಗೂ ಮೆಣಸಿನಕಾಯಿ ಕ್ವಿಂಟಲ್‌ಗೆ 30,000 ಬೆಂಬಲ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಇತರ ಕೃಷಿ ಉತ್ಪನ್ನಗಳಿಗೂ ಡಾ. ಎಂ.ಎಸ್. ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸುಗಳ ಪ್ರಕಾರ ಬೆಲೆ ನಿಗದಿಪಡಿಸಬೇಕು. ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಲಬುರಗಿ ಜಿಲ್ಲೆಯಾದ್ಯಂತ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳನ್ನು ಬಂದ್ ಮಾಡಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ರೈತರ ಹಿತ ಕಾಪಾಡಲು ಸರ್ಕಾರ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು ದೇಶಪಾಂಡೆ ಅವರು ಹೇಳಿದರು.

# ವಿದೇಶಿ ಹಣದ ಹರಿವಿಗೆ ಕಡಿವಾಣ ಹಾಕಿ: ಬೊಮ್ಮಾಯಿ ಆಗ್ರಹ

### ಕಳೆದ ಹತ್ತು ವರ್ಷಗಳಿಂದ, ವಿಶೇಷವಾಗಿ ಸೊರೊಸ್ ಫೌಂಡೇಷನ್‌ನಂತಹ ಸಂಸ್ಥೆಗಳಿಂದ ಹಣ ಹರಿದುಬರುತ್ತಿದೆ ಎಂಬ ಆರೋಪಗಳಿವೆ.

• **ಉದಯವಾಹಿನಿ , ಹುಬ್ಬಳ್ಳಿ**

ವಿದೇಶಿ ಹಣಕಾಸಿನ ನೆರವು ಪಡೆದು ದೇಶದ ವಿರುದ್ಧ ಸಂಚು ರೂಪಿಸಲಾಗುತ್ತಿದೆ ಎಂಬ ಆರೋಪಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಂತಹ ಚಟುವಟಿಕೆಗಳನ್ನು ಸಂಪೂರ್ಣವಾಗಿ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರು ಆಗ್ರಹಿಸಿದ್ದಾರೆ.

**1** ಹಣವನ್ನೂ ತಡೆಯಲು ಕಠಿಣ ಕ್ರಮ
**2** ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ
**3** ಪ್ರಜಾಪ್ರಭುತ್ವ ಜೀವಂತವಾಗಿದೆ ಸಾಕ್ಷಿ

ಮಾಧ್ಯಮಗಳೊಂದಿಗೆ ಮಾತನಾಡಿದ ಭಾರತದ ವಿರುದ್ಧ ನಡೆಯುತ್ತಿರುವ ಕೆಲವು ಸಂಚುಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು ವಿದೇಶಗಳಿಂದ ಪಡೆಯುತ್ತಿರುವ ಹಣಕಾಸಿನ ನೆರವಿನ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

ಕೆಲವು ರಾಜಕೀಯ ಪಕ್ಷಗಳು ಮತ್ತು ದೇಶವಿರೋಧಿ ಚಟುವಟಿಕೆಗಳಿಗೆ ವಿದೇಶಗಳಿಂದ ಹಣ ಬರುತ್ತಿದೆ ಎಂದು ಆರೋಪಿಸಿದರು.

ನೇಪಾಳ, ಶ್ರೀಲಂಕಾ ಮತ್ತು ಬಾಂಗ್ಲಾದೇಶದಂತಹ


ಉದಯವಾಹಿನಿ ಚಿತ್ರ

ನೆರೆಯ ರಾಷ್ಟ್ರಗಳಿಗೆ ವಿದೇಶಿ ದೇಣಿಗೆ ಹರಿದುಬಂದಿರುವುದು ಸಾಬೀತಾಗಿದೆ, ಕಳೆದ ಹತ್ತು ವರ್ಷಗಳಿಂದ, ವಿಶೇಷವಾಗಿ ಸೊರೊಸ್ ಫೌಂಡೇಷನ್‌ನಂತಹ ಸಂಸ್ಥೆಗಳಿಂದ ಹಣ ಹರಿದುಬರುತ್ತಿದೆ ಎಂಬ ಆರೋಪಗಳಿವೆ. ಸ್ವಯಂಸೇವಾ ಸಂಸ್ಥೆಗಳಿಗೆ ವಿದೇಶಿ ಹಣ ಬರುವುದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದಿರುವಂತೆಯೇ, ದೇಶದ ವಿರುದ್ಧದ ಚಟುವಟಿಕೆಗಳಿಗೆ ಹರಿದುಬರುವ ಹಣವನ್ನೂ ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಹುಲ್ ಗಾಂಧಿ ವಿದೇಶಗಳಿಗೆ ಹೋದಾಗಲೆಲ್ಲ ದೇಶದ ವಿರುದ್ಧ ಮಾತನಾಡುತ್ತಾರೆ. ಭಾರತದಲ್ಲಿ ಪ್ರಜಾಪ್ರಭುತ್ವವೇ ಇಲ್ಲ ಎಂಬಂತೆ ಬಿಂಬಿಸಲು ಪ್ರಯತ್ನಿಸುತ್ತಾರೆ. ದೇಶದಲ್ಲಿ ಪ್ರಜಾಪ್ರಭುತ್ವ ಇಲ್ಲದಿದ್ದರೆ ಅವರು ಹೇಗೆ ವಿರೋಧ ಪಕ್ಷದ ನಾಯಕರಾಗಲು ಸಾಧ್ಯವಾಗುತ್ತಿತ್ತು? ಎರಡು ರಾಜ್ಯಗಳಿಂದ ಚುನಾವಣೆಗೆ ಸ್ಪರ್ಧಿಸಿರುವುದೇ ದೇಶದಲ್ಲಿ ಪ್ರಜಾಪ್ರಭುತ್ವ ಜೀವಂತವಾಗಿದೆ ಎಂಬುದಕ್ಕೆ ಸಾಕ್ಷಿ. ಹೀಗಿರುವಾಗ ಅವರು ಸುಳ್ಳು ಹೇಳುತ್ತಿದ್ದಾರೆ ಎಂದು ಟೀಕಿಸಿದರು.

ಕಬ್ಬಿನಿಂದ ಸಕ್ಕರೆ ಇಳುವರಿ ಮತ್ತು ಬೆಲೆ ನಿಗದಿ ವಿಚಾರದಲ್ಲಿ ರೈತರು ಹಾಗೂ ಸಕ್ಕರೆ ಕಾರ್ಖಾನೆಗಳ ನಡುವೆ ಸ್ಪಷ್ಟ ಸೂತ್ರ ರೂಪಿಸಿದರೆ ಮಾತ್ರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಪಾಡಲು ರಾಜ್ಯ ಸರ್ಕಾರ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ ಅವರು, ಕನಿಷ್ಠ ಬೆಂಬಲ ಬೆಲೆ ಹಾಗೂ ಕಬ್ಬು ಬೆಳೆಗಾರರ ರಕ್ಷಣೆಗಾಗಿ ರಚಿಸಿರುವ ಸಮಿತಿಯ ಸಭೆ ಸೋಮವಾರ ನಡೆಯಲಿದೆ ಎಂದು ತಿಳಿಸಿದರು. ಸಭೆಯಲ್ಲಿ ಎಲ್ಲಾ ರೈತ ಮುಖಂಡರೊಂದಿಗೆ ಚರ್ಚಿಸಿ, ಒಂದು ವಾರದೊಳಗೆ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು ಎಂದರು. ಇತರ ರಾಜ್ಯಗಳ ಮಾದರಿಯಲ್ಲಿ ಕರ್ನಾಟಕ ಸರ್ಕಾರವೂ ಸಕ್ಕರೆ ಉತ್ಪಾದನೆಯ ಆಧಾರದ ಮೇಲೆ ಬೆಂಬಲ ಬೆಲೆ ಘೋಷಿಸಲು ಕ್ರಮ ಕೈಗೊಳ್ಳಬೇಕು. ಹಿಂದಿನ ಬಾರಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಬಲ ಬೆಲೆ ನೀಡಿದ್ದರು ಎಂದು ಸ್ಮರಿಸಿದರು.

ಕಬ್ಬು ಬೆಳೆಗಾರರ ಸಮಸ್ಯೆಗಳು, ಕಾರ್ಖಾನೆಗಳಲ್ಲಿನ

> ಚುನಾವಣೆಗಳಲ್ಲಿ ಬಿಜೆಪಿಯನ್ನು ಎದುರಿಸಲು ಸಾಧ್ಯವಾಗದ ಕಾಂಗ್ರೆಸ್ ಪಕ್ಷವು ಕೆಲವು ಸಂಘಟನೆಗಳ ಬೆಂಬಲದೊಂದಿಗೆ ಜನರಲ್ಲಿ ಅಭದ್ರತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಈಗ ಎರಡೂ ಒಂದೇ ಎಂದು ಹೇಳುತ್ತಿದ್ದಾರೆ. ಏಕೆಂದರೆ ಎರಡೂ ತೀವ್ರವಾಗಿ ವಿಫಲವಾಗಿವೆ ಎಂದು ಹೇಳಿದರು.-ಸಂಸದ ಬಸವರಾಜ ಬೊಮ್ಮಾಯಿ

### ನಿರ್ದಿಷ್ಟ ಸೂತ್ರವನ್ನು ಅಳವಡಿಸಿಕೊಳ್ಳಬೇಕು

**ಪ್ರತಿ ವರ್ಷ ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸಿದಂತೆ ಗೊಂದಲ ಉಂಟಾಗುವುದನ್ನು ತಪ್ಪಿಸಲು ಸಕ್ಕರೆ ಮಾರಾಟಕ್ಕೆ ಸಂಬಂಧಿಸಿದ ಕನಿಷ್ಠ ಬೆಂಬಲ ಬೆಲೆ ಸೂತ್ರ ಹಾಗೂ ಕಬ್ಬಿನ ಬೆಲೆ ನಿಗದಿಗೆ ಪ್ರತ್ಯೇಕ ಮತ್ತು ನಿರ್ದಿಷ್ಟ ಸೂತ್ರವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.**

## ದೇಶದಾದ್ಯಂತ ವಿಶ್ವಾಸ ಕಳೆದುಕೊಂಡ ಕಾಂಗ್ರೆಸ್: ಬಿ.ವೈ.ವಿಜಯೇಂದ್ರ

• **ಉದಯವಾಹಿನಿ, ಚಿತ್ರದುರ್ಗ**


ಉದಯವಾಹಿನಿ ಚಿತ್ರ

ಚುನಾವಣೆಯಲ್ಲಿ ಸತತ ಸೋಲಿನ ಸುಳಿಯಲ್ಲಿ ಸಿಲುಕಿರುವ ಕಾಂಗ್ರೆಸ್ ಪಕ್ಷ ದೇಶದಾದ್ಯಂತ ಜನರ ವಿಶ್ವಾಸ ಕಳೆದುಕೊಂಡಿದೆ. ಇದರಿಂದ ಹತಾಶರಾಗಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು. ನಗರದ ವಾಲ್ಮೀಕಿ ಭವನದಲ್ಲಿ ಆಗ್ನೆಯ ಪದವಿಧರ ಚುನಾವಣೆ ಪ್ರಯುಕ್ತ ಬಿಜೆಪಿ-ಜೆಡಿಎಸ್ ವತಿಯಿಂದ ಹಮ್ಮಿಕೊಂಡಿದ್ದ ಮತದಾರರ ಸಭೆಯಲ್ಲಿ ಮಾತನಾಡಿದರು. ಎನ್‌ಡಿಎ ಮೈತ್ರಿಕೂಟ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದು, 12 ವರ್ಷಗಳಿಂದ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ ವಿಶ್ವದಾದ್ಯಂತ ಹೆಚ್ಚಾಗಿದೆ. ನೆಹರೂ ಕುಟುಂಬದ ರಾಹುಲ್ ಗಾಂಧಿ ಎಂದಿಗೂ ಈ ದೇಶದ ಪ್ರಧಾನಿ ಆಗುವುದಿಲ್ಲ. ಈ ಕಾರಣದಿಂದ ಅವರು ಹತಾಶರಾಗಿದ್ದಾರೆ' ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷಕ್ಕೆ ನ್ಯಾಯಾಂಗದ ಮೇಲೆ ಭರವಸೆ ಇಲ್ಲ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನೇ ಪ್ರಶ್ನೆ ಮಾಡುವ ಹಂತಕ್ಕೆ ತಲುಪಿದ್ದಾರೆ. ರಾಹುಲ್ ಗಾಂಧಿ ಅವರು ದೇಶದ ಯುವ ಸಂಘಟನೆಗಳನ್ನು ದುರ್ಬಳಕೆ ಮಾಡಿಕೊಂಡು ದೇಶದಲ್ಲಿ ಆರಾಜಕತೆ ಸೃಷ್ಟಿ ಮಾಡಲು ಯತ್ನಿಸುತ್ತಿದ್ದಾರೆ' ಎಂದು ದೂರಿದರು. ಚುನಾವಣೆ ಗೆಲ್ಲಲಾಗದ ಸ್ಥಿತಿಗೆ ತಲುಪಿರುವ ಕಾಂಗ್ರೆಸ್ ಈಗ ಅನ್ಯ ಮಾರ್ಗದ ಮೂಲಕ ರಾಜಕಾರಣ ಮಾಡುತ್ತಿದೆ. ಕಾಂಗ್ರೆಸ್ ಮುಖಂಡರು ಸಾಂವಿಧಾನಿಕ ಸಂಸ್ಥೆಗಳಾದ ಸಿಬಿಐ, ಇಡಿ, ಐಟಿ ವಿರುದ್ಧ ಟೀಕೆ ಮಾಡುತ್ತಿದ್ದಾರೆ. 70 ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್‌ನವರಿಗೆ ಸಂವಿಧಾನದ ಮೇಲೆ ಯಾವುದೇ ಗೌರವ ಇಲ್ಲ' ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ಉದಯ UV ವಾಹಿನಿ

## ದೇಶ/ವಿದೇಶ

ಸೋಮವಾರ 19 ಅಕ್ಟೋಬರ್ | 07


# ಫ್ರಾನ್ಸ್‌ನಲ್ಲಿನ ಘಟನೆಗಳನ್ನು ಪ್ರಸ್ತಾಪಿಸಿದ ಕಂಗನಾ ರಣಾವತ್

**ರಾಯ್‌ಪುರ:** ಭಾರತಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಅಗತ್ಯ 'ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ' ಎಂದು ಬಿಜೆಪಿ ಸಂಸದೆ ಕಂಗನಾ ರಣಾವತ್ ಭಾನುವಾರ ಹೇಳಿದ್ದು, 'ಆಡಳಿತ ಬದಲಾವಣೆ' ಕುರಿತಾದ ವಿಪಕ್ಷಗಳ ಹೇಳಿಕೆಗಳನ್ನು ಟೀಕಿಸಿದರು. ಫ್ರಾನ್ಸ್‌ನಲ್ಲಿ ಇತ್ತೀಚೆಗೆ ನಡೆದ ಘಟನೆಗಳನ್ನು ಪ್ರಸ್ತಾಪಿಸಿದ ರಣಾವತ್, ಅಲ್ಲಿನ ಹಿಂಸಾಚಾರ ಮತ್ತು ಅಶಾಂತಿಯ ಘಟನೆಗಳು, ಸದ್ಯದ ಜಾಗತಿಕ ಪರಿಸ್ಥಿತಿಯಲ್ಲಿ ಬಲವಾದ ನಾಯಕತ್ವದ ಮಹತ್ವವನ್ನು ಎತ್ತಿ ತೋರಿಸುತ್ತವೆ ಎಂದು ಹೇಳಿದರು.

'ಇಂತಹ ನೀಚ ಕೃತ್ಯಗಳು, ಬಲವಾದ ನಾಯಕತ್ವದ ಅಗತ್ಯವಿದೆಯೆಂಬುದನ್ನು ರಾಷ್ಟ್ರಕ್ಕೆ ನಿರಂತರವಾಗಿ ನೆನಪಿಸುತ್ತವೆ. ನಿನ್ನೆ ರಾತ್ರಿ ಫ್ರಾನ್ಸ್‌ನಲ್ಲಿ ಏನಾಯಿತು ಎಂಬುದನ್ನು ನೀವು ನೋಡಿದ್ದೀರಿ ಜನರು ಇದನ್ನೆಲ್ಲ ಕಣ್ಣಾರೆ ಕಾಣುತ್ತಿದ್ದಾರೆ.

ಮೂರನೇ ಮಹಾಯುದ್ಧದ ಛಾಯೆಯನ್ನು ನೆನಪಿಸುವ ಇಂದಿನ ಪರಿಸ್ಥಿತಿಯಲ್ಲಿ, ವಿರೋಧ ಪಕ್ಷದ ನಡೆಗಳು ಭಾರತಕ್ಕೆ ಏಕೆ ಬಲವಾದ ನಾಯಕತ್ವದ ಅಗತ್ಯವಿದೆ ಎಂಬುದನ್ನು ಎತ್ತಿ ತೋರಿಸುತ್ತವೆ. ಹಾಗೆಯೇ, ನಮಗೆ ಈಗ ಪ್ರಧಾನಿ ನರೇಂದ್ರ ಮೋದಿ ಅವರ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ' ಎಂದು ಅವರು ಹೇಳಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು 'ಆಡಳಿತ ಬದಲಾವಣೆಗಾಗಿನ ಹೋರಾಟ' ಎಂದು ಬಣ್ಣಿಸಿದ ನಂತರ ಉಂಟಾಗಿರುವ ರಾಜಕೀಯ ವಿವಾದದ ನಡುವೆ ಕಂಗನಾ ಈ ಹೇಳಿಕೆ ನೀಡಿದ್ದಾರೆ.

# ಮಧ್ಯಪ್ರದೇಶದಲ್ಲಿ ಘೋರ ದುರಂತ

**ಗ್ವಾಲಿಯರ್:** ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಭಾನುವಾರ ಮುಂಜಾನೆ ಭೀಕರ ರಸ್ತೆ ಅಪಘಾತವೊಂದು ಸಂಭವಿಸಿದೆ. ಇಲ್ಲಿನ ಪ್ರಸಿದ್ಧ ಶೀತಲಾ ಮಾತಾ ದೇವಸ್ಥಾನದ ಬಳಿ ನಿಯಂತ್ರಣ ತಪ್ಪಿದ ಲಾರಿಯೊಂದು ಭಕ್ತರ ಗುಂಪಿನ ಮೇಲೆ ಹರಿದ ಪರಿಣಾಮ ಕನಿಷ್ಠ 14 ಮಂದಿ ಭಕ್ತರು ಸ್ಥಳದಲ್ಲೇ ಸಾವನ್ನಪ್ಪಿದ್ದು, 40ಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

ಪೊಲೀಸ್ ತಡೆಗೋಡೆಯನ್ನು ಮುರಿದು ಮುನ್ನುಗ್ಗಿದ ಲಾರಿ ದೇವಸ್ಥಾನದ ಪ್ರವೇಶದ್ವಾರ ಮತ್ತು ಹೊರಗೋಡೆಗೆ ಡಿಕ್ಕಿ ಹೊಡೆದು ಹಾನಿಗೊಳಿಸಿದೆ. ಗ್ವಾಲಿಯರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಧರ್ಮವೀರ್ ಸಿಂಗ್ ಅವರು ಮಾತನಾಡಿ, ಸುಮಾರು 1.30ಕ್ಕೆ ಈ ಘಟನೆ ಸಂಭವಿಸಿದೆ. ಭಿನೋರ್ ಕಡೆಯಿಂದ ಭತ್ತ ತುಂಬಿಕೊಂಡು ಬರುತ್ತಿದ್ದ ಲಾರಿ, ಭಾರೀ ವಾಹನಗಳ ಸಂಚಾರ ನಿರ್ಬಂಧವಿದ್ದ ಕಡಿದಾದ ಇಳಿಜಾರಿನಲ್ಲಿ ನಿಯಂತ್ರಣ ಕಳೆದುಕೊಂಡಿದೆ.

## ಬೇಸಿಗೆ ಫೆಬ್ರುವರಿಯಲ್ಲೇ ಆರಂಭ ಸಾಧ್ಯತೆ, ಈ ಸಲದ ತಾಪಮಾನ ಎಂದಿಗಿಂತ ಹೆಚ್ಚು!



**ಹೈದರಾಬಾದ್ :** ಎಲ್ ನಿನೊ ಪರಿಣಾಮದಿಂದಾಗಿ 2027ರ ಫೆಬ್ರುವರಿ ತಿಂಗಳಲ್ಲೇ ಭಾರತದ ಹಲವು ಭಾಗಗಳಲ್ಲಿ ಬೇಸಿಗೆಯಂತಹ ವಾತಾವರಣ ಉಂಟಾಗಬಹುದು ಎಂದು ಇತ್ತೀಚಿನ ವರದಿಯೊಂದು ಎಚ್ಚರಿಸಿದೆ. ಮಳೆಯ ಕೊರತೆ, ಹಗಲು ಮತ್ತು ರಾತ್ರಿ ವೇಳೆ ಹೆಚ್ಚಾಗುವ ತಾಪಮಾನ ಹಾಗೂ ಕೃಷಿ ವಲಯದ ಮೇಲಾಗುವ ಪರಿಣಾಮಗಳ ಬಗ್ಗೆ ಈ ವರದಿ ಕಳವಳ ವ್ಯಕ್ತಪಡಿಸಿದೆ. ಕ್ಲೈಮೇಟ್ ಟ್ರೆಂಡ್ಸ್ ಸಂಸ್ಥೆ ಬಿಡುಗಡೆ ಮಾಡಿದ ಎಲ್ ನಿನೊದ ಮೂರು ಆಯಾಮದ ಅಪಾಯಗಳು 2026ರ ಮುಂಗಾರು ಮಳೆಯ ಕೊರತೆ, ಬೆಚ್ಚಗಿನ ಚಳಿಗಾಲ ಮತ್ತು ರಬಿ ಬೆಳೆಗಳ ಮೇಲಿನ ಒತ್ತಡ ಎಂಬ ಶೀರ್ಷಿಕೆಯ ವರದಿಯ ಪ್ರಕಾರ, ಎಲ್ ನಿನೊದಿಂದ ಉಂಟಾಗುವ ತಾಪಮಾನ ಏರಿಕೆಯು ಸಾಮಾನ್ಯಕ್ಕಿಂತ ಹೆಚ್ಚು ಬೆಚ್ಚಗಿನ ಚಳಿಗಾಲದ ಜೊತೆಗೆ, ಬೇಸಿಗೆಯಂತಹ ವಾತಾವರಣವು ಬೇಗನೆ ಪ್ರಾರಂಭವಾಗಲು ಕಾರಣವಾಗಬಹುದು ಎಂದಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯನ್ನು ಉಲ್ಲೇಖಿಸಿರುವ ವರದಿಯು, ಈ ವರ್ಷದ ಅಂತ್ಯದ ವೇಳೆಗೆ ಎಲ್ ನಿನೊ ತೀವ್ರಗೊಳ್ಳಲಿದ್ದು, ಈ ಬಾರಿಯ ಚಳಿಗಾಲದಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಅಲ್ಲದೆ, 2027ರಲ್ಲೂ ಎಲ್ ನಿನೊ ಹವಾಮಾನದ ಮೇಲೆ ತನ್ನ ಪ್ರಭಾವವನ್ನು ಮುಂದುವರಿಸಲಿದೆ ಎಂದು ಎಚ್ಚರಿಸಿದೆ. ಸ್ಕೈಮೆಟ್ ವೆದರ್ ಸಂಸ್ಥೆಯ ಹವಾಮಾನ ಮತ್ತು ಹವಾಮಾನ ಬದಲಾವಣೆ ವಿಭಾಗದ ಉಪಾಧ್ಯಕ್ಷ ಮಹೇಶ್ ಪಲಾವತ್ ಅವರು ಹೇಳುವಂತೆ, 2026ರ ಆಗಸ್ಟ್ ತಿಂಗಳು ದಾಖಲೆಯ ಅತ್ಯಂತ ಬಿಸಿಯಾದ ತಿಂಗಳು ಎಂದು ಈಗಾಗಲೇ ಘೋಷಿಸಲಾಗಿದೆ. ಮುಂದೆ ಈ ದಾಖಲೆ ಮುರಿಯುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ, 2026 ಮತ್ತು 2027ರ ವರ್ಷಗಳು ಈ ದಶಕದ ಅತ್ಯಂತ ಬಿಸಿಯಾದ ವರ್ಷಗಳು ಆಗಬಹುದು. ಜೊತೆಗೆ, ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವುದರಿಂದ ಚಳಿಗಾಲದ ಮೇಲೂ ಪರಿಣಾಮ ಬೀರಲಿದ್ದು, ಈ ಅವಧಿಯಲ್ಲಿ ಹಗಲು ಮತ್ತು ರಾತ್ರಿ ವೇಳೆ ತಾಪಮಾನವು ಸರಾಸರಿಗಿಂತ ಹೆಚ್ಚಿರಲಿದೆ ಎಂದು ಹೇಳಿದ್ದಾರೆ.

# ವಿಶ್ವ ಕಣ್ಣೋಟ-34: ಭೂಗರ್ಭದ ಮಹಾ ರಹಸ್ಯ

## ಕೋರ್‌ನಿಂದ ಮೇಲ್ಮೈಗೆ ಚಿಮ್ಮುತ್ತಿವೆ ಆದಿಕಾಲದ ಅನಿಲಗಳು! 450 ಕೋಟಿ ವರ್ಷಗಳ ಸತ್ಯ

### ಸತ್ಯ ತಿಳಿಸಿದ ಕಂಪ್ಯೂಟರ್ ಸಿಮ್ಯುಲೇಶನ್

**ಭೂಮಿಯೊಳಗೆ ಕಂಡುಬರುವ ತೀವ್ರ ಪರಿಸ್ಥಿತಿಗಳಲ್ಲಿ ಹೈಡ್ರೋಜನ್ ಹೇಗೆ ವರ್ತಿಸುತ್ತದೆ ಎಂಬುದನ್ನು ಅಧ್ಯಯನ ಮಾಡಲು, ಸಂಶೋಧಕರು ಕಂಪ್ಯೂಟರ್ ಸಿಮ್ಯುಲೇಶನ್‌ಗಳನ್ನು ಬಳಸಿದರು. ಕೋರ್ ಮತ್ತು ಮ್ಯಾಂಟಲ್ ನಡುವೆ ಅಂಶವು ಹೇಗೆ ಚಲಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಅವರು ಹೈಡ್ರೋಜನ್ ಐಸೊಟೋಪ್‌ಗಳನ್ನು, ವಿಶೇಷವಾಗಿ ಸಾಮಾನ್ಯ ಹೈಡ್ರೋಜನ್ ಮತ್ತು ಡ್ಯೂಟೇರಿಯಂ ನಡುವಿನ**



### ಪ್ರಾಚೀನ ವಿನಿಮಯವನ್ನು ಸಾಬೀತು

**ಶಿಲಾಪಾಕ ಸಾಗರ ಸ್ಫಟಿಕೀಕರಣವು ಒತ್ತಡ ಮತ್ತು ತಾಪಮಾನ ಮತ್ತು ಮಾದರಿ ಊಹೆಗಳಲ್ಲಿ ದೊಡ್ಡ ವ್ಯತ್ಯಾಸಗಳ ಹೊರತಾಗಿಯೂ, ಮೂಲಭೂತವಾಗಿ ಏಕರೂಪದ ಹೈಡ್ರೋಜನ್ ಐಸೊಟೋಪ್ ಸಂಯೋಜನೆಯೊಂದಿಗೆ ಪ್ರಾಚೀನ ವಿನಿಮಯವನ್ನು ಸಾಬೀತುಪಡಿಸುತ್ತದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ. ಭೂಮಿಯ ಆಳವಾದ ಒಳಭಾಗದಲ್ಲಿ ಕಂಡುಬರುವ ಐಸೊಟೋಪ್ ಮಾದರಿಗಳನ್ನು, ಗ್ರಹದ ಆರಂಭಿಕ ಅವಶೇಷಗಳಾಗಿ ಸರಳವಾಗಿ ವಿವರಿಸಲಾಗುವುದಿಲ್ಲ ಸಂಶೋಧನೆಯಿಂದ ದೃಢಪಟ್ಟಿದೆ.**

**ಬೀಜಿಂಗ್:** ಭೂಮಿಯ ಕೇಂದ್ರಭಾಗ ಈಗಲೂ ಹೈಡ್ರೋಜನ್, ಹೀಲಿಯಂ ಮತ್ತು ಟಂಗ್‌ಸ್ಟನ್ ಅನ್ನು ಅದರ ಮೇಲಿನ ಪದರಗಳಿಗೆ ಬಿಡುಗಡೆ ಮಾಡುತ್ತಿರಬಹುದು ಎಂಬುದಕ್ಕೆ ವಿಜ್ಞಾನಿಗಳು ಹೊಸ ಪುರಾವೆಗಳನ್ನು ಕಂಡುಕೊಂಡಿದ್ದಾರೆ. ಇದು ಭೂಮಿಯ ಆಳವಾದ ಪ್ರದೇಶಗಳು ಹೆಚ್ಚಾಗಿ ಪ್ರತ್ಯೇಕವಾಗಿ ಉಳಿದಿವೆ ಎಂಬ ದೀರ್ಘಕಾಲೀನ ಕಲ್ಪನೆಯನ್ನು ಪ್ರಶ್ನಿಸುತ್ತದೆ. ಚೀನಾದ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಸಂಶೋಧಕರು ಸೈನ್ಸ್ ಅಡ್ವಾನ್ಸಸ್‌ನಲ್ಲಿ ಪ್ರಕಟಿಸಿದ ಸಂಶೋಧನಾ ವರದಿ, ಭೂಗ್ರಹದ 4.5–ಶತಕೋಟಿ ವರ್ಷಗಳ ಇತಿಹಾಸದುದ್ದಕ್ಕೂ ಕೇಂದ್ರಭಾಗ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಸುಮಾರು 4.5 ಶತಕೋಟಿ ವರ್ಷಗಳ ಹಿಂದೆ ಭೂಮಿ ರಚನೆಯಾದಾಗ, ಅದು ಅತ್ಯಂತ ಬಿಸಿಯಾದ ಗ್ರಹವಾಗಿತ್ತು. ಅದು ತಣ್ಣಗಾದಂತೆ ಭಾರವಾದ ವಸ್ತುಗಳು ಕೋರ್ ರೂಪಿಸಲು ಕೆಳಕ್ಕೆ ಜಾರಿದರೆ, ಹಗುರವಾದ ವಸ್ತುಗಳು ಗ್ರಹದ ಹೊರಪದರವನ್ನು ರೂಪಿಸಿದವು. ಭೂಮಿಯ ಆರಂಭಿಕ ರಚನೆಯ ಕೆಲವು ಅಂಶಗಳು ಗ್ರಹದೊಳಗೆ ಆಳವಾಗಿ ಸಿಕ್ಕಿಹಾಕಿಕೊಂಡವು.

ಆದಾಗ್ಯೂ, ಇತ್ತೀಚಿನ ಸಂಶೋಧನೆಯು ಈ ಪ್ರಾಚೀನ ವಸ್ತುಗಳ ಕುರುಹುಗಳು ಇನ್ನೂ ಮೇಲ್ಮೈ ಕಡೆಗೆ ಚಲಿಸುತ್ತಿರಬಹುದು ಎಂದು ಅಂದಾಜಿಸುತ್ತದೆ. ಭೂಮಿಯೊಳಗೆ ಕಂಡುಬರುವ ತೀವ್ರ ಪರಿಸ್ಥಿತಿಗಳಲ್ಲಿ ಹೈಡ್ರೋಜನ್ ಹೇಗೆ ವರ್ತಿಸುತ್ತದೆ ಎಂಬುದನ್ನು ಅಧ್ಯಯನ ಮಾಡಲು, ಸಂಶೋಧಕರು ಕಂಪ್ಯೂಟರ್ ಸಿಮ್ಯುಲೇಶನ್‌ಗಳನ್ನು ಬಳಸಿದರು. ಕೋರ್ ಮತ್ತು ಮ್ಯಾಂಟಲ್ ನಡುವೆ ಅಂಶವು ಹೇಗೆ ಚಲಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಅವರು ಹೈಡ್ರೋಜನ್ ಐಸೊಟೋಪ್‌ಗಳನ್ನು, ವಿಶೇಷವಾಗಿ ಸಾಮಾನ್ಯ ಹೈಡ್ರೋಜನ್ ಮತ್ತು ಡ್ಯೂಟೇರಿಯಂ ನಡುವಿನ ಅನುಪಾತವನ್ನು ಪರೀಕ್ಷಿಸಿದರು.

**ಇದು ಹೈಡ್ರೋಜನ್‌ನ ಭಾರವಾದ ರೂಪವಾಗಿದೆ.**

ಈ ಫಲಿತಾಂಶಗಳು ಶಿಲಾಪಾಕ ಸಾಗರ ಸ್ಫಟಿಕೀಕರಣವು ಒತ್ತಡ ಮತ್ತು ತಾಪಮಾನ ಮತ್ತು ಮಾದರಿ ಊಹೆಗಳಲ್ಲಿ ದೊಡ್ಡ ವ್ಯತ್ಯಾಸಗಳ ಹೊರತಾಗಿಯೂ, ಮೂಲಭೂತವಾಗಿ ಏಕರೂಪದ ಹೈಡ್ರೋಜನ್ ಐಸೊಟೋಪ್ ಸಂಯೋಜನೆಯೊಂದಿಗೆ ಪ್ರಾಚೀನ ವಿನಿಮಯವನ್ನು ಸಾಬೀತುಪಡಿಸುತ್ತದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ.

ಭೂಮಿಯ ಆಳವಾದ ಒಳಭಾಗದಲ್ಲಿ ಕಂಡುಬರುವ ಐಸೊಟೋಪ್ ಮಾದರಿಗಳನ್ನು, ಗ್ರಹದ ಆರಂಭಿಕ ರಚನೆಯ ಅವಶೇಷಗಳಾಗಿ ಸರಳವಾಗಿ ವಿವರಿಸಲಾಗುವುದಿಲ್ಲ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ.

### ಟಂಗಸ್ಟನದ್ದು ಮತ್ತೊಂದು ಕಥೆ

**ಟಂಗ್‌ಸ್ಟನ್ ಸಂಭವನೀಯ ವಸ್ತು ವಿನಿಮಯದ ಹೆಚ್ಚುವರಿ ಪುರಾವೆಗಳನ್ನು ನೀಡುತ್ತದೆ. ಭೂಮಿಯ ಆರಂಭಿಕ ರಚನೆಯ ಸಮಯದಲ್ಲಿ, ಈ ಭಾರ ಲೋಹದಲ್ಲಿ ಹೆಚ್ಚಿನವು ಕೋರ್‌ನಲ್ಲಿ ಕೇಂದ್ರೀಕೃತವಾಯಿತು. ಜ್ವಾಲಾಮುಖಿ ಶಿಲೆಗಳಲ್ಲಿ ಕಂಡುಬರುವ ಕೆಲವು ಟಂಗ್‌ಸ್ಟನ್ ಐಸೊಟೋಪ್ ಕುರುಹುಗಳು. ವಿಜ್ಞಾನಿಗಳು ಕೋರ್‌ನಿಂದ ಮೇಲ್ಮೈಗೆ ಚಲಿಸುವ ವಸ್ತುವನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ.**

**ಈ ಸಂಶೋಧನೆಗಳು ಭೂಮಿಯ ಒಳಭಾಗವು ಹಿಂದೆ ಭಾವಿಸಿದ್ದಕ್ಕಿಂತ ಹೆಚ್ಚು ಕ್ರಿಯಾತ್ಮಕವಾಗಿದೆ ಎಂದು ಸೂಚಿಸುತ್ತವೆ. ಪ್ರತ್ಯೇಕವಾಗಿ ಉಳಿಯುವ ಬದಲು, ಕೋರ್ ಮತ್ತು ಮ್ಯಾಂಟಲ್ ಶತಕೋಟಿ ವರ್ಷಗಳಿಂದ ರಾಸಾಯನಿಕ ಅಂಶಗಳನ್ನು ವಿನಿಮಯ ಮಾಡಿಕೊಳ್ಳುತ್ತಲೇ ಇರಬಹುದು. ಮ್ಯಾಂಟಲ್‌ನೊಳಗೆ ಆಳವಾಗಿ ಸಂರಕ್ಷಿಸಲ್ಪಟ್ಟ ರಾಸಾಯನಿಕ ಕುರುಹುಗಳು, ಭೂಮಿಯ ಆರಂಭಿಕ ಹಂತಗಳಿಂದ ಉಳಿದಿರುವ ಅವಶೇಷಗಳಾಗಿವೆ ಎಂಬ ಕಲ್ಪನೆಯನ್ನು ಈ ಸಂಶೋಧನೆ ಪ್ರಶ್ನಿಸುತ್ತದೆ ಒಟ್ಟಾರೆಯಾಗಿ ಭೂಗ್ರಹದ ರಚನೆ ಮತ್ತು ಅದರ ವಿಕಾಸದ ಉದ್ದಕ್ಕೂ ನಡೆಯುತ್ತಿರುವ ಪ್ರಕ್ರಿಯೆಗಳು, ಕೋರ್‌ನಿಂದ ಎಷ್ಟು ವಸ್ತು ತಪ್ಪಿಸಿಕೊಳ್ಳುತ್ತದೆ ಮತ್ತು ಈ ಪ್ರಕ್ರಿಯೆಯು ಭೂಮಿಯ ದೀರ್ಘಕಾಲೀನ ವಿಕಾಸದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಅರಿಯಲು, ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂಬುದು ಸುಳ್ಳಲ್ಲ.**

# ನೂಡಲ್ಸ್ ತಿಂದು ಮಲಗಿದ್ದ ಒಂದೇ ಕುಟುಂಬದ ಐವರ ನಿಗೂಢ ಸಾವಿಗೆ ಬಿಗ್ ಟ್ವಿಸ್ಟ್



**ಉತ್ತರ ಪ್ರದೇಶ:** ಗ್ರೇಟರ್ ನೋಯ್ಡಾದ ರಬುಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಗ್ಲಾ ಶ್ರೀ ಪದಮ್ ಗ್ರಾಮದಲ್ಲಿ ಒಂದೇ ಕುಟುಂಬದ ಐವರು ನಿಗೂಢವಾಗಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮಹತ್ವದ ಮಾಹಿತಿ ಬಿಡುಗಡೆ ಮಾಡಿದ್ದಾರೆ. ಅದರಂತೆ, ಪ್ರಾಥಮಿಕ ತನಿಖೆಯಲ್ಲಿ ಆಹಾರ ವಿಷಪ್ರಾಶನದಿಂದ (ನೂಡಲ್ಸ್ ಸೇವನೆಯಿಂದ) ಸಾವು ಸಂಭವಿಸಿದೆ ಎಂದು ಶಂಕಿಸಲಾಗಿತ್ತಾದರೂ, ಪ್ರಸ್ತುತ ಇದು ನೂಡಲ್ಸ್ ಕಾರಣದಿಂದ ಆದ ಸಾವಲ್ಲ, ಬದಲಿಗೆ ಆಸ್ತಿ ಕಲಹದ ಹಿನ್ನೆಲೆಯಲ್ಲಿ ನಡೆದ ಸಾಮೂಹಿಕ ಆತ್ಮಹತ್ಯೆ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದ ರಬುಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಂಗ್ಲಾ ಶ್ರೀಪಾದಂ ಗ್ರಾಮದಲ್ಲಿ ಮಹೇಶ್ (37), ಅವರ ಪತ್ನಿ ಲಲಿತಾ (35), ಮತ್ತು ಅವರ ಮೂವರು ಮಕ್ಕಳಾದ ಲಡ್ಡು (11), ಮಿಷ್ಟಿ (7) ಹಾಗೂ ಸಾಕ್ಷತ್ (3) ಶನಿವಾರ ಬೆಳಿಗ್ಗೆ ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದರು. ಇದಕ್ಕೂ ಮುನ್ನ, ಈ ಕುಟುಂಬವು ಮಲಗುವ ಮುನ್ನ ಮ್ಯಾಗಿ ನೂಡಲ್ಸ್ ಹಾಗೂ ಚಹಾ ಸೇವಿಸಿತ್ತು.

ಮರುದಿನ ಬೆಳಿಗ್ಗೆ ಎಲ್ಲರ ಬಾಯಲ್ಲಿ ನೊರೆ ಬಂದು ಮೃತಪಟ್ಟಿರುವುದು ಕಂಡುಬಂದಿದ್ದರಿಂದ, ಇದು ನೂಡಲ್ಸ್‌ನಿಂದ ಉಂಟಾದ ಆಹಾರ ವಿಷಪ್ರಾಶನ ಇರಬಹುದು ಎಂದು ಮೊದಲು ಶಂಕಿಸಲಾಗಿತ್ತು. ತನಿಖೆಯನ್ನು ತೀವ್ರಗೊಳಿಸಿದ ಪೊಲೀಸರಿಗೆ ಮೃತ ಮಹೇಶ್ ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಒಂದು ಮಹತ್ವದ ವಾಯ್ಸ್ ನೋಟ್ ಲಭ್ಯವಾಗಿದೆ.

ಅದರಲ್ಲಿ ಮಹೇಶ್ ಅವರು ತಮ್ಮ ಈ ದುಸ್ಥಿತಿಗೆ ಮತ್ತು ಆತ್ಮಹತ್ಯೆಯ ನಿರ್ಧಾರಕ್ಕೆ ತಮ್ಮ ಇಬ್ಬರು ಸಹೋದರಿಯರು ಹಾಗೂ ಭಾವನೇ ನೇರ ಕಾರಣ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಮುಂದುವರೆದು, ಸ್ಥಳೀಯರು ಹಾಗೂ ನೆರೆಹೊರೆಯವರ ವಿಚಾರಣೆಯಿಂದ ಆಸ್ತಿ ಹಂಚಿಕೆಯ ತೀವ್ರ ಕಲಹ ಬೆಳಕಿಗೆ ಬಂದಿದೆ. ಮಹೇಶ್ ಅವರ ತಾಯಿಯು ಇಡೀ ಮನೆ ಮತ್ತು ಜಮೀನಿನ ಆಸ್ತಿಯನ್ನು ಮಹೇಶ್ ಅವರ ಸಹೋದರಿಯರ ಹೆಸರಿಗೆ ವರ್ಗಾಯಿಸಿದ್ದರು ಎನ್ನಲಾಗಿದೆ.

## ಮುಳುಗಿದ ಸರಕು ಹಡಗಿನಿಂದ ಐಫೋನ್, ಸುಗಂಧ ದ್ರವ್ಯ ಸಂಗ್ರಹಕ್ಕೆ ಧಾವಿಸಿದ ಇರಾನಿನ ಮೀನುಗಾರರು

**ಫ್ರೆಂಚ್:** ಅಕ್ಟೋಬರ್ 14ರಂದು ಪ್ರೈಡ್ ಮುಳುಗಿದ ನಂತರ ನೂರಾರು ಮೀನುಗಾರರು ಸಣ್ಣ ಮೀನುಗಾರಿಕಾ ದೋಣಿಗಳು ಮತ್ತು ರಕ್ಷಣಾ ಹಡಗುಗಳಲ್ಲಿ ಇರಾನ್‌ನ ಗಲ್ಫ್ ಕರಾವಳಿಯ ನೀರಿಗೆ ಬಂದು, ಮುಳುಗಿದ ಸರಕು ಹಡಗಿನಿಂದ ಐಫೋನ್‌ಗಳು, ಫ್ರೆಂಚ್ ಸುಗಂಧ ದ್ರವ್ಯ ಮತ್ತು ಇತರ ಸರಕುಗಳನ್ನು ಸಂಗ್ರಹಿಸುತ್ತಿರುವ ವಿಡಿಯೋ ವೈರಲ್ ಆಗತೊಡಗಿದೆ. ನಾವು ಒಟ್ಟುಗೂಡುತ್ತಿದ್ದೇವೆ ಮತ್ತು ಹಾರ್ಮುಜ್ ಜಲಸಂಧಿಯ ಕಡೆಗೆ ಹೋಗುತ್ತಿದ್ದೇವೆ ಎಂದು ಒಬ್ಬ ವ್ಯಕ್ತಿ ವೀಡಿಯೊದಲ್ಲಿ ಹೇಳಿದರು. ಕಂಟೇನರ್ ಹಡಗು ಮುಳುಗುತ್ತಿರುವುದನ್ನು ನಾವು ಕೇಳಿದ್ದೇವೆ, ಆದ್ದರಿಂದ ನಾವು ಐಫೋನ್‌ಗಳು ಮತ್ತು ಸುಗಂಧ ದ್ರವ್ಯಗಳನ್ನು ಸಂಗ್ರಹಿಸಲಿದ್ದೇವೆ. ಎಂದು ಆ ವ್ಯಕ್ತಿ ಹೇಳಿರುವುದು ವಿಡಿಯೋದಲ್ಲಿ ದಾಖಲಾಗಿದೆ. ಪ್ರದೇಶದ ದೃಶ್ಯಗಳು ಭಾಗಶಃ ಮುಳುಗಿದ ಕಂಟೇನರ್‌ಗಳ ಮೂಲಕ ದೋಣಿಗಳು ಚಲಿಸುತ್ತಿರುವುದನ್ನು ತೋರಿಸಿದವು, ಪುರುಷರು ನೀರಿನಿಂದ ಪೆಟ್ಟಿಗೆಗಳನ್ನು ಹೊರತೆಗೆಯಲು ಪ್ರಯತ್ನಿಸಿದರು. ಒಂದು ವೀಡಿಯೊದಲ್ಲಿ, ಒಂದು ಸಣ್ಣ ದೋಣಿ ಸಂಪೂರ್ಣ ಸಾಗಣೆ ಕಂಟೇನರ್ ನ್ನು ಎಳೆಯಲು ಹೆಣಗಾಡುತ್ತಿರುವುದನ್ನು ಕಾಣಬಹುದಾಗಿದೆ. 'ಜಿಎಫ್‌ಎಸ್ ಪ್ರೈಡ್' ಹಡಗು ಸಿಂಗಾಪುರದ ಧ್ವಜದ ಅಡಿಯಲ್ಲಿ ಸಂಚರಿಸುತ್ತಿತ್ತು. ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಅದು ಮುಳುಗಿತು ಎಂದು ಸಿಂಗಾಪುರ ತಿಳಿಸಿದೆ.

## ಫ್ರಾನ್ಸ್‌ನಲ್ಲಿ ಹಣದುಬ್ಬರದ ಕಿಚ್ಚು: ಐತಿಹಾಸಿಕ ಟೌನ್ ಹಾಲ್ ಬೆಂಕಿಗಾಹುತಿ, ಬೀದಿಗಿಳಿದ ಜನ



**ಫ್ರಾನ್ಸ್ :** ಫ್ರಾನ್ಸ್‌ನಲ್ಲಿ ಹಣದುಬ್ಬರ ಮತ್ತು ಜೀವನ ವೆಚ್ಚ ಏರಿಕೆ ವಿರುದ್ಧ ಜನರ ಆಕ್ರೋಶ ತೀವ್ರಗೊಂಡಿದೆ. ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿದ್ದು, ಹಲವು ನಗರಗಳಲ್ಲಿ ಲೂಟಿ, ಬೆಂಕಿ ಹಚ್ಚುವಿಕೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಧ್ವಂಸ ವರದಿಯಾಗಿದೆ. ಲಿಮೋಜಸ್ ನಗರದ ಐತಿಹಾಸಿಕ ಪುರಭವನಕ್ಕೂ ಬೆಂಕಿ ಬಿದ್ದಿದೆ ಎಂದು ವರದಿಯಾಗಿದೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಮುಂದಾಗಿದ್ದು, ಪ್ರತಿಭಟನೆ ಫ್ರಾನ್ಸ್ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಎರಡನೇ ಜಾಗತಿಕ ಮಹಾಯುದ್ಧಗಳಲ್ಲೂ ಸುರಕ್ಷಿತವಾಗಿ ಉಳಿದುಕೊಂಡಿದ್ದ ಲಿಮೋಜಸ್ ನಗರದ 140 ವರ್ಷಗಳಷ್ಟು ಹಳೆಯದಾದ ಐತಿಹಾಸಿಕ ಪುರಭವನ ಪ್ರತಿಭಟನಾಕಾರರ ಬೆಂಕಿ ದಾಳಿಗೆ ಸಿಲುಕಿ ಬಹುತೇಕ ಧ್ವಂಸಗೊಂಡಿದೆ. ಫ್ರಾನ್ಸ್‌ನಲ್ಲಿ ಹಣದುಬ್ಬರ ಮತ್ತು ಜೀವನ ವೆಚ್ಚ ಏರಿಕೆ ವಿರುದ್ಧ ಜನರ ಆಕ್ರೋಶ ತೀವ್ರಗೊಂಡಿದೆ. ಹಲವು ನಗರಗಳಲ್ಲಿ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿದ್ದು, ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ. ಲಿಮೋಜಸ್ ನಗರದ ಸುಮಾರು 140 ವರ್ಷಗಳಷ್ಟು ಹಳೆಯ ಐತಿಹಾಸಿಕ ಪುರಭವನಕ್ಕೂ ಬೆಂಕಿ ಬಿದ್ದಿದೆ ಎಂದು ವರದಿಯಾಗಿದೆ. ಪ್ಯಾರಿಸ್, ಮಾರ್ಸಿಲ್ಲೆ, ಬೋರ್ಡೆಕ್ಸ್, ನೈಸ್ ಮತ್ತು ಲಿಲ್ಲೆ ಸೇರಿದಂತೆ ಹಲವು ನಗರಗಳಲ್ಲಿ ಪ್ರತಿಭಟನಾಕಾರರು ಅಂಗಡಿಗಳು ಹಾಗೂ ವಾಣಿಜ್ಯ ಮಳಿಗೆಗಳನ್ನು ಧ್ವಂಸಗೊಳಿಸಿ ಲೂಟಿ ಮಾಡಿದ್ದಾರೆ. ಕೆಲವು ಕಡೆ ಪೊಲೀಸ್ ಠಾಣೆಗಳು ಮತ್ತು ಪ್ರವಾಸಿ ಮಾಹಿತಿ ಕೇಂದ್ರಗಳ ಮೇಲೂ ದಾಳಿ ನಡೆದಿದೆ. ಹಿಂಸಾಚಾರ ನಿಯಂತ್ರಿಸಲು ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸುತ್ತಿವೆ. ಗಲಭೆಗೆ ಸಂಬಂಧಿಸಿದಂತೆ ದೇಶಾದ್ಯಂತ 1,200ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ. 150ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದಾರೆ ಎನ್ನಲಾಗಿದೆ. ಸಾರ್ವಜನಿಕ ಕಟ್ಟಡಗಳಿಗೆ ಬೆಂಕಿ ಹಚ್ಚುವುದ ಮತ್ತು ಆಸ್ತಿಪಾಸ್ತಿ ಧ್ವಂಸ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಫ್ರಾನ್ಸ್ ಸರ್ಕಾರ ಎಚ್ಚರಿಕೆ ನೀಡಿದೆ. ಇಂಧನ ಮತ್ತು ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರ ಜೀವನ ದುಸ್ತರವಾಗಿದೆ ಎಂಬುದು ಪ್ರತಿಭಟನಾಕಾರರ ಪ್ರಮುಖ ಆಕ್ಷೇಪ. ಹಳದಿ ಉಡುಪು ಚಳವಳಿಯ ಬೆಂಬಲಿಗರು ಮತ್ತು ಯುವ ಸಂಘಟನೆಗಳು ಪ್ರತಿಭಟನೆಗೆ ಕೈಜೋಡಿಸಿವೆ. 1789ರ ಫ್ರೆಂಚ್ ಕ್ರಾಂತಿಯನ್ನು ನೆನಪಿಸುವ ಘೋಷಣೆಗಳೂ ಕೇಳಿಬಂದಿದ್ದು, ಈ ಬೆಳವಣಿಗೆ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಸರ್ಕಾರದ ಮೇಲೆ ರಾಜಕೀಯ ಒತ್ತಡ ಹೆಚ್ಚಿಸಿದೆ. ಬೋರ್ಡೆಕ್ಸ್‌ನಲ್ಲಿ ಪೊಲೀಸ್ ಠಾಣೆಯ ಕಾಂಪೌಂಡ್ ಧ್ವಂಸಗೊಳಿಸಲಾಗಿದ್ದು, ಲಿಯಾನ್‌ನಲ್ಲಿ ಪ್ರವಾಸಿ ಮಾಹಿತಿ ಕಚೇರಿಗೆ ಬೆಂಕಿ ಇಡಲಾಗಿದೆ. ಸೇಂಟ್-ಎಟಿಯೆನ್‌ನಲ್ಲಿ ಜನಸಂದಣಿ ನಿಯಂತ್ರಣ ಗ್ರೆನೇಡ್ ಸಿಡಿದು 17 ವರ್ಷದ ಬಾಲಕನ ಬಲಗೈ ಛಿದ್ರಗೊಂಡಿದೆ.

# ನಿತೀಶ್ ಕುಮಾರ್ ಗಾಗಿ 9 ಕೊಲೆ ಮಾಡಿಸಿದ್ದೇನೆ ಎಂದ ಜೆಡಿಯು ಶಾಸಕ!

## ಬಿಹಾರರಾಜಕೀಯದಲ್ಲಿ ಸಂಚಲನ; ವಿವಾದತೀವ್ರ ಆಗುತ್ತಿದಂತೆಯೂಟರ್ನ್



**ವಿವಾದ ತೀವ್ರ ಆಗುತ್ತಿದ್ದಂತೆ ಲಾಲು ಸರ್ಕಾರದ ವಿರುದ್ಧ ಆರೋಪ**

**ದೆಹಲಿ:** ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಗಾಗಿ ಒಂಬತ್ತು ಜನರ ಕೊಲೆಗಳನ್ನು ಮಾಡಿಸಿದ್ದೇನೆ ಎಂದು ಸಂಯುಕ್ತ ಜನತಾ ದಳ ಶಾಸಕ ಅನಂತ್ ಕುಮಾರ್ ಸಿಂಗ್ ಅವರು ಸ್ಫೋಟಕ ಹೇಳಿಕೆ ನೀಡುವ ಮೂಲಕ ದೊಡ್ಡ ವಿವಾದ ಸೃಷ್ಟಿಸಿದ್ದಾರೆ. ಈ ವಿಚಾರವಾಗಿ ರಾಷ್ಟ್ರೀಯ ಜನತಾ ದಳವು ಜೆಡಿಯು ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ. ಆದರೆ ಜೆಡಿಯು ಮಾತ್ರ ಇದರಿಂದ ಅಂತರ ಕಾಯ್ದುಕೊಂಡಿದೆ. ವಿವಾದ ತೀವ್ರ ಸ್ವರೂಪ ತಾಳುತ್ತಿದ್ದಂತೆ ಅನಂತ್ ಕುಮಾರ್ ಅವರು ತಾವು ಹೇಳಿದ್ದು ಹಾಗಲ್ಲ ಎಂದು ಯೂ ಟರ್ನ್ ಹೊಡೆದಿದ್ದಾರೆ. ರಾಜ್ಯದಲ್ಲಿ ಚುನಾವಣಾ ಪ್ರಕ್ರಿಯೆಗಳು ಚುರುಕಾಗಿರುವ ಸಂದರ್ಭದಲ್ಲೇ ಈ ರಾಜಕೀಯ ವಿವಾದ ಭುಗಿಲೆದ್ದಿದೆ. ಚುನಾವಣಾ ಆಯೋಗದ ಪ್ರಕಾರ, ಬಿಹಾರ ವಿಧಾನ ಪರಿಷತ್ತಿನ ಎಂಟು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆಗಳು ಅಕ್ಟೋಬರ್ 23 ರಂದು ನಡೆಯಲಿದ್ದು, ಅಕ್ಟೋಬರ್ 27 ರಂದು ಮತ ಎಣಿಕೆ ನಡೆಯಲಿದೆ. ಮುಂಬರುವ ವಿಧಾನ ಪರಿಷತ್ ಚುನಾವಣೆಯಲ್ಲಿ ತಮ್ಮ ರಾಜಕೀಯ ಪ್ರತಿಸ್ಪರ್ಧಿ ನೀರಜ್ ಕುಮಾರ್ ಅವರಿಗೆ ಪಕ್ಷವು ಟಿಕೆಟ್ ನೀಡಿರುವುದಕ್ಕೆ ಅಸಮಾಧಾನಗೊಂಡಿರುವ ಅನಂತ್ ಸಿಂಗ್, ತಮ್ಮ ಎದುರಾಳಿಯನ್ನು ತರಾಟೆಗೆ ತೆಗೆದುಕೊಳ್ಳುವ ಭರದಲ್ಲಿ ಈ ಸ್ಫೋಟಕ ಹೇಳಿಕೆ ನೀಡಿದ್ದಾರೆ. ನಿತೀಶ್ ಕುಮಾರ್ ಮತ್ತು ನನ್ನ ನಡುವೆ ದೀರ್ಘಕಾಲದ ಒಡನಾಟವಿದೆ. ಅವರಿಗೆ ಸಹಾಯ ಮಾಡಲು ನಾನು ಒಂಬತ್ತು ಜನರ ಕೊಲೆ ಮಾಡಿಸಿದ್ದೇನೆ. ಅವರು ರಾಜಕೀಯವಾಗಿ ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿದ್ದ ಕಠಿಣ ಸಮಯದಲ್ಲಿ ನಾನು ಅವರ ಬೆಂಬಲಕ್ಕೆ ನಿಂತಿದ್ದೆ, ಎಂದು ಅವರು ಹೇಳಿದ್ದಾರೆ. ಹಳೆಯ ರಾಜಕೀಯ ವೈಷಮ್ಯಗಳ ಬಗ್ಗೆ ಪ್ರಸ್ತಾಪಿಸಿದ ಸಿಂಗ್, ನೀರಜ್ ಕುಮಾರ್ ಈ ಹಿಂದೆ ತಮ್ಮನ್ನು ವಿರೋಧಿಸಿದ್ದರು ಎಂದು ಆರೋಪಿಸಿದರು. ತಮ್ಮೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವ ವ್ಯಕ್ತಿಯನ್ನೇ ಪಕ್ಷವು ಏಕೆ ಆಯ್ಕೆ ಮಾಡಿದೆ ಎಂದು ಅವರು ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಲಾಲು ಪ್ರಸಾದ್ ಯಾದವ್ ನೇತೃತ್ವದ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ), ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದೆ. ಅನಂತ್ ಸಿಂಗ್ ಅವರ ಹೇಳಿಕೆಯು ರಾಜಕೀಯ ಅಪರಾಧಗಳನ್ನು ಒಪ್ಪಿಕೊಂಡಂತೆಯೇ ಆಗಿದೆ ಎಂದು ಆರ್‌ಜೆಡಿ ಆರೋಪಿಸಿದೆ.

### ಅನಂತ್ ಸಿಂಗ್ ಹೇಳಿದ್ದೇನು?

**ಮುಂಬರುವ ವಿಧಾನ ಪರಿಷತ್ ಚುನಾವಣೆಯಲ್ಲಿ ತಮ್ಮ ರಾಜಕೀಯ ಪ್ರತಿಸ್ಪರ್ಧಿ ನೀರಜ್ ಕುಮಾರ್ ಅವರಿಗೆ ಪಕ್ಷವು ಟಿಕೆಟ್ ನೀಡಿರುವುದಕ್ಕೆ ಅಸಮಾಧಾನಗೊಂಡಿರುವ ಅನಂತ್ ಸಿಂಗ್, ತಮ್ಮ ಎದುರಾಳಿಯನ್ನು ತರಾಟೆಗೆ ತೆಗೆದುಕೊಳ್ಳುವ ಭರದಲ್ಲಿ ಈ ಸ್ಫೋಟಕ ಹೇಳಿಕೆ ನೀಡಿದ್ದಾರೆ. ನಿತೀಶ್ ಕುಮಾರ್ ಮತ್ತು ನನ್ನ ನಡುವೆ ದೀರ್ಘಕಾಲದ ಒಡನಾಟವಿದೆ. ಅವರಿಗೆ ಸಹಾಯ ಮಾಡಲು ನಾನು ಒಂಬತ್ತು ಜನರ ಕೊಲೆ ಮಾಡಿಸಿದ್ದೇನೆ. ಅವರು ರಾಜಕೀಯವಾಗಿ ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿದ್ದ ಕಠಿಣ ಸಮಯದಲ್ಲಿ ನಾನು ಅವರ ಬೆಂಬಲಕ್ಕೆ ನಿಂತಿದ್ದೆ, ಎಂದು ಅವರು ಹೇಳಿದ್ದಾರೆ.**

ಆರ್‌ಜೆಡಿ ನಾಯಕ ಶಕ್ತಿ ಸಿಂಗ್ ಯಾದವ್ ಮಾತನಾಡಿ, ಅನಂತ್ ಸಿಂಗ್ ಒಂಬತ್ತು ಕೊಲೆಗಳನ್ನು ಮಾಡಿಸಿರುವುದಾಗಿ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿಯೇ ಈ ಕೊಲೆಗಳು ನಡೆದಿವೆ ಮತ್ತು ನಿತೀಶ್ ಕುಮಾರ್‌ಗಾಗಿ ನಡೆದಿವೆ ಎಂಬುದು ಸ್ಪಷ್ಟವಾಗುತ್ತದೆ.

ಜೆಡಿಯು ಕೇಂದ್ರ ಮತ್ತು ರಾಜ್ಯ ಮಟ್ಟದ ನಾಯಕರ ಒತ್ತಡದಿಂದಾಗಿ ಅನಂತ್ ಸಿಂಗ್ ನಂತರ ತಮ್ಮ ಹೇಳಿಕೆಯನ್ನು ಹಿಂಪಡೆಯಬಹುದು ಅಥವಾ ಬದಲಾಯಿಸಬಹುದು.

## ಮಿನಿ ನ್ಯೂಸ್

### ಆಂಧ್ರದಲ್ಲಿ ನಡುರಸ್ತೆಯಲ್ಲೇ ಬಸ್ ಅಡ್ಡಗಟ್ಟಿ ರೌಡಿಸಂ

**ಕಾಕಿನಾಡ :** ಸರ್ಕಾರಿ ಬಸ್‌ನಲ್ಲಿ ಸೀಟು ಬಿಡುವ ವಿಚಾರಕ್ಕೆ ಶುರುವಾದ ಸಣ್ಣ ಜಗಳವೊಂದು ಮಾರಣಾಂತಿಕ ಹಲ್ಲೆಯಲ್ಲಿ ಅಂತ್ಯಗೊಂಡಿರುವ ಆಘಾತಕಾರಿ ಘಟನೆ ಯಲೇಶ್ವರಂ ಮಂಡಲದ ಚಿನ್ನಂಪೇಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಮಹಿಳೆಯೊಬ್ಬರು ಕರೆ ಮಾಡಿ ಹೇಳಿದ್ದಕ್ಕೆ ಆಕೆಯ ಪತಿ ಸುಮಾರು 30 ಜನರ ಗ್ಯಾಂಗ್‌ನೊಂದಿಗೆ ಬಂದು, ಬಸ್ ಅಡ್ಡಗಟ್ಟಿ ಮಹಿಳಾ ಪ್ರಯಾಣಿಕರ ಮೇಲೆ ರಾಡ್ ಹಾಗೂ ದೊಣ್ಣೆಗಳಿಂದ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡ ಇಬ್ಬರು ಮಹಿಳೆಯರು ಸೇರಿದಂತೆ ಮೂವರನ್ನು ತಕ್ಷಣವೇ ಕಾಕಿನಾಡ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರು ಮಹಿಳೆಯರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

**ಸೀಟಿಗಾಗಿ ಆರಂಭವಾದ ಕಿತ್ತಾಟ:** ತುನಿಯಿಂದ ರಾಜಮಂಡ್ರಿಗೆ ತೆರಳುತ್ತಿದ್ದ ಆರ್‌ಟಿಸಿ ಬಸ್‌ನಲ್ಲಿ ಸೀಟಿಗಾಗಿ ಪ್ರಯಾಣಿಕರ ನಡುವೆ ವಾಗ್ವಾದ ನಡೆದಿದೆ. ಸಿರಿಪುರಂ ಗ್ರಾಮದ ಮಹಿಳೆಯೊಬ್ಬರು ರಾಜಮಂಡ್ರಿಗೆ ತೆರಳುತ್ತಿದ್ದ ಮಹಿಳೆಯರೊಂದಿಗೆ ತೀವ್ರ ವಾಗ್ವಾದಕ್ಕಿಳಿದಿದ್ದಾರೆ. ಮಾತಿಗೆ ಮಾತು ಬೆಳೆದಾಗ, ಸಿರಿಪುರಂ ಮಹಿಳೆ ತನ್ನ ಪತಿಗೆ ಫೋನ್ ಮಾಡಿ ಬಸ್‌ನಲ್ಲಿ ತನ್ನ ಮೇಲೆ ಕೆಲವರು ಹಲ್ಲೆ ನಡೆಸಿದ್ದಾರೆ ಎಂದು ಸುಳ್ಳು ದೂರು ಹೇಳಿದ್ದಾಳೆ. ಪತ್ನಿಯ ಮಾತನ್ನು ಕೇಳಿ ಆಕ್ರೋಶಗೊಂಡ ಪತಿ, ತನ್ನ ಗ್ರಾಮದ ಸುಮಾರು 30 ಕ್ಕೂ ಹೆಚ್ಚು ಯುವಕರನ್ನು ಜತೆಗೂಡಿಸಿಕೊಂಡು ಚಿನ್ನಂಪೇಟೆ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್‌ಗಾಗಿ ಹೊಂಚು ಹಾಕಿ ಕಾಯುತ್ತಿದ್ದ. ಬಸ್ ಚಿನ್ನಂಪೇಟೆಗೆ ತಲುಪುತ್ತಿದ್ದಂತೆ ಗ್ಯಾಂಗ್ ಏಕಾಏಕಿ ಬಸ್ ಒಳಗೆ ನುಗ್ಗಿದೆ.

### ಗರ್ಭಿಣಿ ಪತ್ರಕರ್ತೆ ಮೇಲೆ ರಾಹುಲ್ ಗಾಂಧಿ ಹಲ್ಲೆ ಆರೋಪ: ದೆಹಲಿ ಪೊಲೀಸರಿಗೆ ದೂರು

**ನವದೆಹಲಿ :** ಮತದಾರರ ಪಟ್ಟಿ ಪರಿಷ್ಕರಣೆ ಕ್ರಿಯೆಯ ಅಕ್ರಮಗಳ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಇಂಡಿ ಒಕ್ಕೂಟದ ನಾಯಕರು ನಡೆಸಿದ ಪ್ರತಿಭಟನಾ ಮೆರವಣಿಗೆಯ ವೇಳೆ ತನ್ನ ಮೇಲೆ ದೈಹಿಕ ದೌರ್ಜನ್ಯ ನಡೆದಿದೆ ಎಂದು ಆರೋಪಿಸಿ ಗರ್ಭಿಣಿ ಪತ್ರಕರ್ತೆಯೊಬ್ಬರು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಅವರ ಅಂಗರಕ್ಷಕರ ವಿರುದ್ಧ ದೆಹಲಿ ಪೊಲೀಸರಿಗೆ ದೂರು ನೀಡಿದ್ದಾರೆ. ಪತ್ರಕರ್ತೆ ರಿಚಾ ಪರಾಶರ್, ನವದೆಹಲಿ ಡಿಸಿಪಿ ಕಚೇರಿಯನ್ನು ಖುದ್ದು ಸಂಪರ್ಕಿಸಿ ದೂರು ಸಲ್ಲಿಸಿದ್ದು, ರಾಹುಲ್ ಗಾಂಧಿ ಮತ್ತು ಅವರ ಭದ್ರತಾ ಸಿಬ್ಬಂದಿಯ ವಿರುದ್ಧ ತಕ್ಷಣ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿದ್ದಾರೆ. ತಾನು ಮೂರು ತಿಂಗಳ ಗರ್ಭಿಣಿಯಾಗಿದ್ದು, ನ್ಯಾಯಾಲಯದ ಆವರಣದ ಗೇಟ್ ಬಳಿ ರಾಹುಲ್ ಗಾಂಧಿಯವರ ಹೇಳಿಕೆ ಪಡೆಯಲು ಕಾಯುತ್ತಿದ್ದೆ. ಆದರೆ ಅವರು ಅಸಮಾಧಾನದಿಂದ ನನ್ನ ಕೈಹಿಡಿದು ಬಲವಾಗಿ ಎಳೆದರು. ತಕ್ಷಣವೇ ಅವರ ಅಂಗರಕ್ಷಕರು ನನ್ನನ್ನು ಮುಂದಕ್ಕೆ ತಳ್ಳಿದ್ದರಿಂದ ಸುಪ್ರೀಂ ಕೋರ್ಟ್ ಮೆಟ್ಟಿಲುಗಳ ಮೇಲೆ ಬಿದ್ದು ಹೊಟ್ಟೆಗೆ ಪೆಟ್ಟಾಗಿದೆ ಎಂದು ಆಸ್ಪತ್ರೆಯ ಬೆಡ್‌ನಿಂದ ರಿಚಾ ವಿವರಿಸಿದ್ದಾರೆ.

### ಕೋಲ್ಕತ್ತಾ ದುರ್ಗಾ ಪೂಜೆ ವೇಳೆ ಕಾಲ್ತುಳಿತ, 19 ಮಂದಿ ಸಾವು, 7 ಮಂದಿ ಬಂಧನ, ಆಸ್ಪತ್ರೆಗೆ ಅಮಿತ್ ಶಾ ಭೇಟಿ

**ಕೋಲ್ಕತ್ತಾ :** ದುರ್ಗಾ ಪೂಜಾ ಸಮಯದಲ್ಲಿ ಜನಸಂದಣಿ ಹೆಚ್ಚಾಗಿ ಸಂಭವಿಸಿದ ಕಾಲ್ತುಳಿತದಲ್ಲಿ 19 ಮಂದಿ ಮೃತಪಟ್ಟಿದ್ದು, 25 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಭೇಟಿ ಮಾಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಸ್ಪತ್ರೆಗೆ ತೆರಳಿದ್ದಾರೆ. ಜನಸಂದಣಿ ನಿರ್ವಹಣೆಯಲ್ಲಿ ಲೋಪವಾಗಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ಆಯೋಜಕರು ಸೇರಿದಂತೆ ಹಲವರ ವಿರುದ್ಧ ಕ್ರಮ ಕೈಗೊಂಡಿದ್ದಾರೆ. ಘಟನೆ ಕುರಿತು ತನಿಖೆ ಮುಂದುವರೆದಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ರಾಜ್ಯ ಆರೋಗ್ಯ ಸಚಿವರೂ ಆಸ್ಪತ್ರೆಗೆ ತೆರಳಿ ಗಾಯಾಳುಗಳಿಗೆ ಚಿಕಿತ್ಸೆ ನೀಡುವ ಕುರಿತು ಮಾಹಿತಿ ಪಡೆದರು. ಬಳಿಕ ಅಮಿತ್ ಶಾ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರೊಂದಿಗೆ ಕಾಳಿಘಾಟ್ ಕಾಳಿ ದೇವಸ್ಥಾನಕ್ಕೂ ಭೇಟಿ ನೀಡಿದರು. ಪೊಲೀಸರ ಪ್ರಾಥಮಿಕ ತನಿಖೆಯ ಪ್ರಕಾರ, ಮಂಟಪದಲ್ಲಿ ಜನಸಂದಣಿಯನ್ನು ನಿಯಂತ್ರಿಸಲು ಸೂಕ್ತ ವ್ಯವಸ್ಥೆ ಇರಲಿಲ್ಲ ಎಂಬ ಶಂಕೆ ವ್ಯಕ್ತವಾಗಿದೆ. ಸಪ್ತಮಿ ಆಚರಣೆಯ ವೇಳೆ ಮಳೆ ಸುರಿದಿದ್ದು, ಮಂಟಪ ಕುಸಿಯುವ ಸಾಧ್ಯತೆ ಇದೆ ಎಂಬ ಘೋಷಣೆಯೂ ಜನರಲ್ಲಿ ಆತಂಕ ಮೂಡಿಸಿರಬಹುದು ಎಂದು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

### ಅಫ್ಘಾನ್ ಬಾಲಕಿಯರ ಭವಿಷ್ಯಕ್ಕೆ ಕತ್ತರಿ

**ಅಫ್ಘಾನಿಸ್ತಾನ :** 2021ರಲ್ಲಿ ತಾಲಿಬಾನ್ ಪಡೆ ಅಧಿಕಾರ ವಹಿಸಿಕೊಂಡ ನಂತರದ ಐದು ವರ್ಷಗಳ ಅವಧಿಯಲ್ಲಿ ಸುಮಾರು 2.6 ಮಿಲಿಯನ್ ಗಿಂತಲೂ (26 ಲಕ್ಷಕ್ಕೂ ಹೆಚ್ಚು) ಅಧಿಕ ಬಾಲಕಿಯರು ಮಾಧ್ಯಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ವಿಶ್ವಸಂಸ್ಥೆಯ ಮಕ್ಕಳ ನಿಧಿ (ಯುನಿಸೆಫ್) ಕಳವಳಕಾರಿ ವರದಿ ಬಿಡುಗಡೆ ಮಾಡಿದೆ. ಪ್ರಸ್ತುತ ಇಡೀ ಜಗತ್ತಿನಲ್ಲಿ ಬಾಲಕಿಯರು ಮತ್ತು ಮಹಿಳೆಯರಿಗೆ ಮಾಧ್ಯಮಿಕ ಹಾಗೂ ವಿಶ್ವವಿದ್ಯಾಲಯ ಶಿಕ್ಷಣವನ್ನು ಸಂಪೂರ್ಣವಾಗಿ ನಿಷೇಧಿಸಿರುವ ಏಕೈಕ ದೇಶ ಅಫ್ಘಾನಿಸ್ತಾನವಾಗಿದೆ. 6 ನೇ ತರಗತಿಯ ನಂತರ ಬಾಲಕಿಯರು ಔಪಚಾರಿಕ ಶಿಕ್ಷಣ ಪಡೆಯುವುದನ್ನು ಅಧಿಕೃತವಾಗಿ ನಿಷೇಧಿಸಲಾಯಿತು. 2023 ರಿಂದ ಈಚೆಗೆ ನೆರೆಯ ಇರಾನ್ ಮತ್ತು ಪಾಕಿಸ್ತಾನದಿಂದ ಸುಮಾರು 27 ಲಕ್ಷ ಜನರು ಬಲವಂತವಾಗಿ ಅಫ್ಘಾನಿಸ್ತಾನಕ್ಕೆ ಮರಳಿದ್ದು, ಇವರಲ್ಲಿ ಶೇ. 60 ರಷ್ಟು ಮಕ್ಕಳು ಹಾಗೂ ಯುವಕರೇ ಆಗಿದ್ದಾರೆ. ಮನೆಯ ಬಡತನ ಹಾಗೂ ಸ್ಥಳಾಂತರದ ನಡುವೆ ಹೆಣ್ಣುಮಕ್ಕಳ ರಕ್ಷಣೆ ಸಂಪೂರ್ಣವಾಗಿ ಕುಸಿದಿದೆ. ದೇಶದ ಇತಿಹಾಸದಲ್ಲಿ 5 ವರ್ಷ ಚಿಕ್ಕದಿರಬಹುದು, ಆದರೆ ಬೆಳೆಯುವ ಬಾಲಕಿಯ ಜೀವನದಲ್ಲಿ ಇದು ಅತ್ಯಂತ ನಿರ್ಣಾಯಕ ಘಟ್ಟ. ತರಗತಿ ಕೊಠಡಿ ಬರೀ ಕಲಿಕೆಯ ಜಾಗವಲ್ಲ, ಅದು ಬಾಲ್ಯವಿವಾಹ, ಹಿಂಸೆ ಮತ್ತು ಶೋಷಣೆಯ ವಿರುದ್ಧ ಹೆಣ್ಣುಮಕ್ಕಳಿಗೆ ನೀಡುವ ರಕ್ಷಣಾ ಕವಚವಾಗಿತ್ತು. ಶಾಲೆ ಮುಚ್ಚಿದ್ದರಿಂದ ಆ ರಕ್ಷಣೆ ಮಾಯವಾಗಿದೆ'' ಎಂದು ಯುನಿಸೆಫ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಕ್ಯಾಥರೀನ್ ರಸೆಲ್ ಆತಂಕ ವ್ಯಕ್ತಪಡಿಸಿದ್ದಾರೆ.

ಯುನಿಸೆಫ್‌ನ 'ಬಾಲಕಿಯರ ಶಿಕ್ಷಣ ಮತ್ತು ಮಹಿಳಾ ಕಾರ್ಮಿಕ ಬಲ' ವಿಶ್ಲೇಷಣೆಯ ಪ್ರಕಾರ, ಮಹಿಳೆಯರ ಶಿಕ್ಷಣ ಹಾಗೂ ಉದ್ಯೋಗ ನಿರ್ಬಂಧಗಳಿಂದಾಗಿ ಅಫ್ಘಾನಿಸ್ತಾನದ ಆರ್ಥಿಕತೆಗೆ ವಾರ್ಷಿಕ ಕನಿಷ್ಠ 84 ಮಿಲಿಯನ್ ಅಮೆರಿಕನ್ ಡಾಲರ್ ಉತ್ಪಾದನಾ ನಷ್ಟವಾಗುತ್ತಿದೆ. 2030 ರ ವೇಳೆಗೆ ದೇಶದಲ್ಲಿ 20,000 ಮಹಿಳಾ ಶಿಕ್ಷಕಿಯರು ಮತ್ತು 5,400 ಮಹಿಳಾ ಆರೋಗ್ಯ ಕಾರ್ಯಕರ್ತೆಯರ ತೀವ್ರ ಕೊರತೆ ಎದುರಾಗಲಿದೆ. ಮೂಲಭೂತ ಶಿಕ್ಷಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಹಿಳಾ ಶಿಕ್ಷಕಿಯರ ಸಂಖ್ಯೆ 2022 ರಲ್ಲಿ 73,000 ಇದ್ದದ್ದು, 2024 ರ ವೇಳೆಗೆ 66,000 ಕ್ಕೆ (ಶೇ. 9 ಕ್ಕಿಂತ ಹೆಚ್ಚು ಕುಸಿತ) ಇಳಿದಿದೆ.

